ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೨೪೬
ಸಾಹಿತ್ಯಮಾಲೆ – ೧೦೯

# ಮಹಿಳಾ ಸಶಕ್ತೀಕರಣ : ಒಂದು ಪರಿಕಲ್ಪನೆ

# ಮಹಿಳಾ ಸಶಕ್ತೀಕರಣ : ಒಂದು ಪರಿಕಲ್ಪನೆ

ಸಂಪಾದಕರು
ಓ.ಎಲ್. ನಾಗಭೂಷಣ ಸ್ವಾಮಿ

ಹೇಮಲತಾ ಎಚ್.ಎಮ್.

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**MAHILA SASHAKTIKARANA : ONDU PARIKALPANE :** The Concept of Women Empowerment in Kannda by Hemalatha H.M. and Published by Sri Ishwar K. Mirji, Registrar, Kuvempu Bhasha Bharathi Pradhikara, Kalagrama, Jnanabharathi, Behind Bangalore University Campus, Mallattahalli, Bengaluru - 560 056; First Edition : 2016 ; Pages : xii + 90 ; Price : Rs. 75 /-

© : **ಹಕ್ಕುಗಳನ್ನು ಕಾದಿರಿಸಿದೆ**

ಮೊದಲ ಮುದ್ರಣ : ೨೦೧೬
ಪುಟಗಳು : xii + ೯೦
ಬೆಲೆ : ರೂ. ೭೫/–
ಪ್ರತಿಗಳು : ೫೦೦

ಪ್ರಕಾಶಕರು
**ಈಶ್ವರ್ ಕು. ಮಿರ್ಜಿ**
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು–೫೬೦ ೦೫೬

**ಕು.ಭಾ.ಭಾ.ಪ್ರಾ.ದ ಅಧ್ಯಕ್ಷರು**
**ಡಾ. ಕೆ.ವಿ. ನಾರಾಯಣ**
***ಸದಸ್ಯರು***
**ಪ್ರೊ. ಓ. ಎಲ್. ನಾಗಭೂಷಣ ಸ್ವಾಮಿ**
**ಡಾ. ನಟರಾಜ್ ಹುಳಿಯಾರ್**
**ಶ್ರೀ ಅಬ್ಬಾಸ್ ಮೇಲಿನಮನಿ**
**ಡಾ. ಎಚ್. ಎಸ್. ಅನುಪಮಾ**
**ಪ್ರೊ. ಶಿವರಾಮಯ್ಯ**
**ಡಾ. ವಿನಯಾ ಒಕ್ಕುಂದ**
**ಡಾ. ಆರ್. ಪೂರ್ಣಿಮಾ**
**ಡಾ. ಎಸ್. ಸಿರಾಜ್ ಅಹಮದ್**
**ಡಾ. ಪ್ರೀತಿ ಶ್ರೀಮಂಧರ್ ಕುಮಾರ್**
**ಶ್ರೀ ಕೆ.ಎ. ದಯಾನಂದ**
**ಶ್ರೀ. ಕೆ. ಹೈದರ್ ಆಲಿಖಾನ್**
**ಶ್ರೀ ಈಶ್ವರ್ ಕು. ಮಿರ್ಜಿ**

ಮುಖಪುಟ ವಿನ್ಯಾಸ : ಪ. ಸ. ಕುಮಾರ್
ಮುದ್ರಕರು :
**ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಅಡ್ಡರಸ್ತೆ,
ಲಾಲ್‌ಬಾಗ್ ರೋಡ್, ಕೆ.ಎಸ್. ಗಾರ್ಡನ್,
ಬೆಂಗಳೂರು–೫೬೦೦೨೭. ದೂ.: ೦೮೦–೨೨೨೩೪೦೬೬

# ಅಧ್ಯಕ್ಷರ ಮಾತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಕನ್ನಡದ ತಿಳುವಳಿಕೆಯನ್ನು ಬಲಗೊಳಿಸಲು ಹಲವು ನೆಲೆಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನಮ್ಮ ಅಧ್ಯಯನಕಾರರು ಬಳಸುವ ಪಾರಿಭಾಷಿಕ ಪದಗಳ ವ್ಯಾಪ್ತಿಯನ್ನು ವಿವರಿಸುವ ಕಿರು ಹೊತ್ತಗೆಗಳನ್ನು ಹೊರತರುವುದು ಇಂತಹ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಪಾರಿಭಾಷಿಕ ಪದಗಳ ಅರ್ಥ ಸ್ಪಷ್ಟವಾಗದ ಕಾರಣ ಅಧ್ಯಯನಕಾರರು ಅದರಲ್ಲೂ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಗೊಂದಲದಿಂದ ಹೊರಬರಲು ನೆರವಾಗುವ ಬರವಣಿಗೆ ಇಂಗ್ಲಿಶಿನಲ್ಲಿ ಹೇರಳವಾಗಿ ದೊರಕುತ್ತದೆಯಾದರೂ ಅವೆಲ್ಲವನ್ನು ಬಳಸುವ ಸ್ಥಿತಿಯಲ್ಲಿ ನಮ್ಮ ಓದುಗರು ಇಲ್ಲ. ಈ ದಿಸೆಯಲ್ಲಿ ಅಗತ್ಯ ಹೆಜ್ಜೆ ಇಡಲು ಪ್ರಾಧಿಕಾರ ನಿರ್ಧರಿಸಿದೆ. ಪ್ರಾಧಿಕಾರದ ಸದಸ್ಯರಾಗಿರುವ ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ.ಓ.ಎಲ್.ನಾಗಭೂಷಣಸ್ವಾಮಿಯವರು ಇಂತಹ ಹೊತ್ತಗೆಗಳನ್ನು ಸಿದ್ಧಪಡಿಸುವ ಹೊಣೆಯನ್ನು ಹೊತ್ತಿದ್ದಾರೆ. ಬೇರೆ ಬೇರೆ ವಿಷಯಗಳನ್ನು ಬಲ್ಲವರನ್ನು ಸಂಪರ್ಕಿಸಿ ಅವರಿಂದ ಗೊತ್ತಾದ ಪಾರಿಭಾಷಿಕ ಪದದ ಬಗೆಗೆ ಬರಹವನ್ನು ಬರೆಸಿ ಹೊತ್ತಗೆಗಳನ್ನು ಸಿದ್ಧಪಡಿಸಿಕೊಡುವಂತೆ ಅವರನ್ನು ಕೋರಿದ್ದೆವು. ಅವರು ಈ ನಿಟ್ಟಿನಲ್ಲಿ ಸಂಪಾದಿಸಿದ ಹೊತ್ತಗೆಗಳು ಈಗ ಅಚ್ಚಾಗಿ ಓದುಗರ ಕೈಸೇರುತ್ತಿವೆ. ಈ ಮಾಲೆಯ ಸಂಪಾದಕರಾದ ಪ್ರೊ. ನಾಗಭೂಷಣಸ್ವಾಮಿಯವರನ್ನು ಮತ್ತು ಪ್ರತಿ ಹೊತ್ತಗೆಯನ್ನು ಬರೆದು ಕೊಟ್ಟ ವಿದ್ವಾಂಸರನ್ನು ಪ್ರಾಧಿಕಾರದ ಪರವಾಗಿ ಅಭಿನಂದಿಸುತ್ತೇನೆ. ಓದುಗರಿಗೆ ಈ ಬರಹಗಳು ಉಪಯುಕ್ತವಾಗುತ್ತವೆಂಬುದು ನಮ್ಮ ಆಶಯ.

**ಡಾ. ಕೆ.ವಿ. ನಾರಾಯಣ**

ಅಧ್ಯಕ್ಷರು

# ಮೊದಲ ಮಾತು

ಕಳೆದ ಮೂವತ್ತು ವರ್ಷಗಳಿಂದ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ, ಸರ್ಕಾರ, ಸರ್ಕಾರೇತರ, ಶೈಕ್ಷಣಿಕ, ಚಳುವಳಿ ಮತ್ತು ವಾಣಿಜ್ಯ ವಲಯಗಳಲ್ಲಿ ಅತ್ಯಂತ ವ್ಯಾಪಕವಾಗಿ, ಪ್ರಬಲವಾಗಿ ಬಳಕೆಯಾಗುತ್ತಿರುವ ಪದ/ಪರಿಕಲ್ಪನೆಯೆಂದರೆ 'ಮಹಿಳಾ ಸಶಕ್ತೀಕರಣ'. ಸಂಶೋಧನಾ ಕಾರ್ಯದ ನಿಮಿತ್ತ ಪ್ರಾರಂಭವಾದ ಈ ಪರಿಕಲ್ಪನೆಯ ಶೋಧ ಬೇರೆ ಬೇರೆ ಘಟ್ಟಗಳನ್ನು ತಲುಪಿ ನನ್ನ ಶೈಕ್ಷಣಿಕ ಕಾರ್ಯಗಳನ್ನು ವಿಸ್ತರಿಸಿತು. ಒಂದು ಕಡೆ ಓದು, ಬರಹ, ಪಾಠ, ಸಂಶೋಧನೆ, ಭಾಷಣ, ಉಪನ್ಯಾಸ, ಪ್ರಬಂಧ ಮಂಡನೆ ಮುಂತಾದ ಶೈಕ್ಷಣಿಕ ಕ್ರಿಯೆಗಳಲ್ಲಿ ವಿಸ್ತರಿಸಿಕೊಂಡರೆ ಮತ್ತೊಂದು ಕಡೆ ವೈಯಕ್ತಿಕವಾಗಿ ನನ್ನ ಆಲೋಚನಾ ಕ್ರಮ, ಚಿಂತನೆ, ಸಂಗತಿ ಘಟನೆಗಳನ್ನು ನೋಡುವ ದೃಷ್ಟಿಕೋನವನ್ನು ಬದಲಾಯಿಸುತ್ತ, ಸುಧಾರಿಸುತ್ತ ನನ್ನ ವ್ಯಕ್ತಿತ್ವದ ಮೇಲೂ ಅಪಾರವಾದ ಪ್ರಭಾವ ಬೀರಿತು. ವಿಶೇಷವಾಗಿ ಆಧ್ಯಾತ್ಮಿಕತೆಯ ತತ್ವ ಹಾಗೂ ಸಶಕ್ತೀಕರಣದ ತತ್ವ ಮತ್ತು ಸೂಚಿಗಳ ನಡುವೆ ಉಂಟಾಗುವ ಗೊಂದಲ ಘರ್ಷಣೆ ನನ್ನನ್ನು ಮತ್ತಷ್ಟು ಚಿಂತನೆಗೆ ಒಡ್ಡುತ್ತಾ ಆತ್ಮಾವಲೋಕನದತ್ತ ಒಯ್ಯುತಿತ್ತು. ಇಂತಹ ಸಮಯದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದವರು 'ಮಹಿಳಾ ಸಶಕ್ತೀಕರಣ' ಪರಿಕಲ್ಪನೆ ಕುರಿತು ಕಿರು ಹೊತ್ತಿಗೆ ಬರೆದುಕೊಡಿ ಎಂದು ಕೇಳಿದಾಗ, ಇಪ್ಪತ್ತೈದು ವರ್ಷಗಳಿಂದ ಅದರ ಬಗ್ಗೆ ನಾನು ಓದಿದ, ಬರೆದ, ಸಂಶೋಧಿಸಿದ, ಭಾವಿಸಿದ, ಅನುಭವಿಸಿದ, ಪಾಠ ಮಾಡಿದ, ಭಾಷಣ ಮಾಡಿದ, ಚಿಂತನೆ ಮಾಡಿದ, ಚರ್ಚಿಸಿದ ವಿಷಯಗಳನ್ನು ಒಂದು ಚೌಕಟಿನಲ್ಲಿ ತಂದು ಬರಹ ರೂಪದಲ್ಲಿಡಲು ಪ್ರಯತ್ನಿಸಿದೆ. ಅದರ ಪ್ರತಿಫಲವೇ ಈ ಕಿರುಹೊತ್ತಿಗೆ. ಮಹಿಳಾ ಸಶಕ್ತೀಕರಣ ಒಂದು ಪ್ರಕ್ರಿಯೆಯಾಗಿ ಪರಮವಾದುದಲ್ಲ. ಸಾಪೇಕ್ಷವಾದುದು ಮತ್ತು ನಿರಂತರವಾಗಿ ಪರಿವರ್ತನೆಗೊಳ್ಳುತ್ತಾ ಹೋಗುತ್ತಿರುತ್ತದೆ. ಪರಿಕಲ್ಪನೆಯಾಗಿ ಪುನರ್ ವ್ಯಾಖ್ಯಾನಗೊಳ್ಳುತ್ತಿರುತ್ತದೆ. ಇದರಿಂದ ಮುಂದೆಯೂ ವೈಯಕ್ತಿಕ ಹಾಗು ಸಾಮುದಾಯಿಕ ಮಟ್ಟದಲ್ಲಿ ಇದರ ಶೋಧ ಮತ್ತು ಪರಿಶೋಧ ಮುಂದುವರೆಯುತ್ತದೆ ಎಂದು ಭಾವಿಸುತ್ತೇನೆ.

ನನ್ನನ್ನು ಈ ಕಾರ್ಯದಲ್ಲಿ ತೊಡಗುವಂತೆ ಮಾಡಿದ ಪ್ರಾಧಿಕಾರದ ಮುಖ್ಯಸ್ಥರುಗಳಾದ ಪ್ರೊ ಓ.ಎಲ್. ನಾಗಭೂಷಣ್ ಸರ್ ಹಾಗೂ

ಪ್ರೊ. ಕೆ.ವಿ. ನಾರಾಯಣ್ ಸರ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಪ್ರಾಧಿಕಾರಕ್ಕೆ ನನ್ನನ್ನು ಪರಿಚಯಿಸಿದ ಪ್ರೊ. ಟಿ.ಆರ್. ಚಂದ್ರಶೇಖರ್ ಸರ್ ಅವರಿಗೂ ವಂದನೆಗಳನ್ನು ತಿಳಿಸಲು ಇಚ್ಛಿಸುತ್ತೇನೆ. ಪುಸ್ತಕದ ಪ್ರಕಟನೆಯ ಕಾರ್ಯದಲ್ಲಿ ನೆರವಾದ ಪ್ರಾಧಿಕಾರದ ಎಲ್ಲಾ ಸಿಬ್ಬಂದಿಯವರಿಗೂ ನಾನು ಆಭಾರಿಯಗಿದ್ದೇನೆ.

**–ಹೇಮಲತಾ.ಎಚ್.ಎಮ್.**
ಮಹಿಳಾ ಅಧ್ಯಯನ ವಿಭಾಗ
ಮಂಡ್ಯ ಹೊರ ಆವರಣ ಕೇಂದ್ರ
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ
ಬಿ.ಹೊಸೂರು ಕಾಲೋನಿ, ಮಂಡ್ಯ

# ಪ್ರಮುಖ ಪರಿಕಲ್ಪನೆಗಳು ಮಾಲೆ

ಕನ್ನಡದಲ್ಲಿ ತಿಳಿವಳಿಕೆಯ ಪ್ರಸರಣೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಉದ್ದೇಶಗಳಲ್ಲಿ ಒಂದು. ಅದರ ಅಂಗವಾಗಿ ವಿಚಾರ-ಮುಖ್ಯ ಪರಿಕಲ್ಪನೆಗಳು ಎಂಬ ಪರಿಚಯ ಮಾಲೆಯನ್ನು ಆರಂಭಿಸಿದ್ದಾಗಿದೆ. ಈ ಮಾಲೆಯ ಉದ್ದೇಶ, ಅಗತ್ಯಗಳನ್ನು ಕುರಿತು ಎರಡು ಮಾತು ಹೇಳುವುದು ಅಗತ್ಯ.

ಮೈಸೂರು ವಿಶ್ವವಿದ್ಯಾಲಯವು 'ಪ್ರಚಾರ ಪುಸ್ತಕಮಾಲೆ'ಯನ್ನು ಕಳೆದ ಶತಮಾನದ ಮೂರನೆಯ ದಶಕದಲ್ಲಿಯೇ ಆರಂಭಿಸಿತ್ತು. ಶಿಕ್ಷಣವು ವ್ಯಾಪಕವಾಗಿದ್ದಿರದ ಆ ಕಾಲದಲ್ಲಿ ತೀರ ಕೈಗೆಟಕುವ ಬೆಲೆಯಲ್ಲಿ, ಸರಳ ನುಡಿಯಲ್ಲಿ ಬದುಕಿಗೆ ಅಗತ್ಯವಾದ ಅನೇಕ ಸಂಗತಿಗಳನ್ನು ಜನತೆಗೆ ಒದಗಿಸುವ ಉದ್ದೇಶ ಆ ಮಾಲಿಕೆಗೆ ಇತ್ತು. ಈಗ ಇಪ್ಪತ್ತೊಂದನೆಯ ಶತಮಾನದ ಎರಡನೆಯ ದಶಕಕ್ಕೆ ಕಾಲಿಡುತ್ತಿರುವಾಗ ನಾವು ಇನ್ನೊಂದು ಬಗೆಯ ತೊಡಕಿನಲ್ಲಿ ಸಿಲುಕಿದ್ದೇವೆ. ಕನ್ನಡದಲ್ಲೇ ಶಿಕ್ಷಣ ಪಡೆದವರ ತಿಳಿವಳಿಕೆಯೂ ಶಿಕ್ಷಣದ ಧಾರೆಯಿಂದ ಹೊರಗೆ ಉಳಿದವರಿಗೆ ತಲುಪಲಾಗದಂಥ ಪರಿಸ್ಥಿತಿ ಇದೆ. ಅಲ್ಲದೆ ಕನ್ನಡದ ಮೂಲಕವೇ ಉನ್ನತ ಶಿಕ್ಷಣ ಪಡೆಯಲು ಬಯಸುವ ವಿದ್ಯಾರ್ಥಿಗಳು ಕೂಡ ಮಾನವಿಕ ವಿಷಯಗಳಲ್ಲಿ ಎದುರಿಸುವ ತೊಡಕುಗಳು ಅನೇಕ. ಅದರಲ್ಲಿ ಮೊದಲನೆಯದು ವಿವಿಧ ಅಧ್ಯಯನ ಶಿಸ್ತುಗಳು ರೂಪಿಸಿಕೊಂಡಿರುವ ಪರಿಭಾಷೆ ಮತ್ತು ವಿಷಯ ಮಂಡನೆಯ ಕ್ರಮದ್ದು. ಇಲ್ಲಿನ ಪ್ರಶ್ನೆ ಕೇವಲ ಇಂಗ್ಲಿಶ್ ಪದಕ್ಕೆ ಸಂವಾದಿಯಾದ ಕನ್ನಡ ಪದವನ್ನು ಹುಡುಕಿಕೊಳ್ಳುವುದಲ್ಲ. ಹೊಸ ಪರಿಕಲ್ಪನೆ ಮತ್ತು ವಿಚಾರಗಳ ಇತಿಹಾಸವನ್ನೂ ಅರಿಯುವುದು ಅಗತ್ಯವಾಗುತ್ತದೆ.

ಚರಿತ್ರೆ, ತತ್ವಶಾಸ್ತ್ರ, ಧರ್ಮ, ವಿಜ್ಞಾನ, ಮಾನವಿಕ, ರಾಜ್ಯಶಾಸ್ತ್ರ, ಇಂಥ ಹಲವು ವಿಷಯಗಳಲ್ಲಿ ಕನ್ನಡದಲ್ಲಿಯೇ ಉನ್ನತ ಶಿಕ್ಷಣ ಪಡೆಯಲು ಬಯಸುವವರು ಮಾತ್ರವಲ್ಲದೆ ಆಸಕ್ತ ಓದುಗರೂ ತಿಳಿಯುವುದು ಅಗತ್ಯ. ತಿಳಿವಳಿಕೆಯ ಇಂಥ ಪ್ರಸರಣೆ ನಡೆಯದಿದ್ದರೆ ಶಿಕ್ಷಣಕ್ಕೂ ಕನ್ನಡದ ಜನಜೀವನಕ್ಕೂ ಇರುವ ಅಂತರ ಹೆಚ್ಚುತ್ತಲೇ ಹೋಗುತ್ತದೆ. ಸಾಮಾಜಿಕ ಪರಿಸ್ಥಿತಿ ಮತ್ತು ವಿಚಾರಗಳ ಲೋಕ ಶೀಘ್ರವಾಗಿ ಬದಲಾಗುತ್ತಿರುವ ಕಾಲದಲ್ಲಿ ನಾವಿದ್ದೇವೆ. ನಂಬಿಕೆಗಳೂ, ಸ್ಥಿರವೆಂದು

ನಂಬಿದ್ದ ಮೌಲ್ಯಗಳೂ ಆಸ್ಫೋಟಗೊಳ್ಳುತ್ತಿವೆ. ಇಂಥ ಸಂದರ್ಭದಲ್ಲಿ ಗಹನವಾದ ವಿಚಾರಗಳನ್ನು ಸರಳವಾದ ಭಾಷೆಯಲ್ಲಿ ವಿದ್ಯಾರ್ಥಿಗಳಿಗೂ ಆಸಕ್ತ ಓದುಗರಿಗೂ ತಿಳಿಸುವ ಪ್ರಯತ್ನ ಈ ಮಾಲೆಯದ್ದು.

ಮುಖ್ಯ ವೈಚಾರಿಕ ಕಲ್ಪನೆಗಳು ಮತ್ತು ಪ್ರಮುಖ ಚಿಂತಕರ ಆಲೋಚನೆಗಳನ್ನು ಪರಿಚಯ ಮಾಡಿಕೊಡುವುದು ಈ ಮಾಲಿಕೆಯ ಉದ್ದೇಶ. ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಶ್ಶಾಸ್ತ್ರ, ತತ್ತ್ವಶಾಸ್ತ್ರ, ಭೂವಿಜ್ಞಾನ, ಸಾಹಿತ್ಯ, ಭಾಷೆ ಇಂಥ ವಿಷಯಗಳ ವಿವಿಧ ಪರಿಕಲ್ಪನೆಗಳು ಮತ್ತು ಚಿಂತಕರು, ಹಾಗೂ ವಿವಿಧ ತತ್ವ– ವಾದ– ಸಿದ್ಧಾಂತಗಳ ಬಗ್ಗೆ ಆಯಾ ವಲಯದಲ್ಲಿ ಕೆಲಸ ಮಾಡಿರುವ ಪರಿಣತರಿಂದ ಸರಳವಾದ ಭಾಷೆಯಲ್ಲಿ ಕಿರು ಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವುದು ಈ ಮಾಲಿಕೆಯ ಉದ್ದೇಶ.

ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯದ **ಪ್ರಾಧ್ಯಾಪಕರಾದ ಡಾ. ಎಚ್. ಎಂ. ಹೇಮಲತಾ** ಅವರು ಮಹಿಳಾ ಸಶಕ್ತೀಕರಣವನ್ನು ಈ ಹೊತ್ತಿಗೆಯಲ್ಲಿ ಪರಿಚಯಿಸಿದ್ದಾರೆ. ಶಕ್ತಿಯ ಕಲ್ಪನೆಯ ವಿವಿಧ ಆಯಾಮಗಳು, ಸಶಕ್ತೀಕರಣ ಅನ್ನುವುದರ ಅರ್ಥವ್ಯಾಪ್ತಿಯನ್ನು ವಿವರಿಸಿ ಮಹಿಳಾ ಸಬಲೀಕರಣದ ವಿವಿಧ ಆಯಾಮಗಳನ್ನು ಸ್ತ್ರೀವಾದ, ಸಾಮಾಜಿಕ, ಅಭಿವೃದ್ಧಿ, ರಾಜಕೀಯ, ಆರ್ಥಿಕ, ಮನೋವಿಶ್ಲೇಷಣಾತ್ಮಕ ಹಾಗೂ ಕಾನೂನು ಚಿಂತನೆಗಳ ದೃಷ್ಟಿಯಿಂದ ಪರಿಶೀಲಿಸಿದ್ದಾರೆ. ಅನಂತರದಲ್ಲಿ ಮಹಿಳಾ ಸಶಕ್ತೀಕರಣದ ಬೆಳವಣಿಗೆಯ ಹಂತಗಳನ್ನು ತಳಮಟ್ಟದಿಂದ ಹಿಡಿದು ಅಂತಾರಾಷ್ಟ್ರೀಯ ಮಟ್ಟದವರೆಗೆ ವಿವಿಧ ಹಂತಗಳಲ್ಲಿ ಪರಿಶೀಲಿಸಿದ್ದಾರೆ. ಈ ಪರಿಕಲ್ಪನೆಯ ಪರಿಣಾಮಗಳು, ಅದರ ಅನುಷ್ಠಾನಕ್ಕೆ ಇರುವ ಅಡ್ಡಿ ಮತ್ತು ಸವಾಲುಗಳು ಹಾಗೂ ಅಳವಡಿಸಿಕೊಳ್ಳಬೇಕಾದ ಕಾರ್ಯತಂತ್ರಗಳನ್ನು ಪರಿಚಯಿಸಿದ್ದಾರೆ. ಮಹಿಳಾ ಅಧ್ಯಯನದಲ್ಲಿ ತೊಡಗಿರುವವರಿಗೆ, ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಹುಡುಕುವುದರಲ್ಲಿ ತೊಡಗಿರುವವರಿಗೆ, ಮತ್ತು ಸ್ತ್ರೀವಾದದ ವಿವಿಧ ಮಗ್ಗುಲುಗಳ ಬಗ್ಗೆ ಆಸಕ್ತರಾದವರಿಗೆ ಈ ಪುಸ್ತಕ ಉಪಯುಕ್ತವಾಗುತ್ತದೆಂದು ನಂಬಿದ್ದೇನೆ.

ಈ ಮಾಲೆಯನ್ನು ಆರಂಭಿಸಲು ಒಪ್ಪಿಗೆ ನೀಡಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರಿಗೆ, ಎಲ್ಲ ರೀತಿಯ ನೆರವು ನೀಡಿರುವ ಪ್ರಾಧಿಕಾರದ ಸಿಬ್ಬಂದಿವರ್ಗದವರಿಗೆ ಕೃತಜ್ಞನಾಗಿದ್ದೇನೆ.

**–ಓ.ಎಲ್. ನಾಗಭೂಷಣ ಸ್ವಾಮಿ**

ಪ್ರಮುಖ ಪರಿಕಲ್ಪನೆಗಳು ಮಾಲೆಯ ಸಂಪಾದಕರು

# ಪರಿವಿಡಿ

ಅಧ್ಯಕ್ಷರ ಮಾತು v
ಮೊದಲ ಮಾತು vii
ಪ್ರಮುಖ ಪರಿಕಲ್ಪನೆಗಳು ಮಾಲೆ ix

**ಅಧ್ಯಾಯ ೧**

ಪೀಠಿಕೆ ೧
ಶಕ್ತಿ ಪರಿಕಲ್ಪನೆ ೩
ಸಶಕ್ತೀಕರಣ ೧೧

**ಅಧ್ಯಾಯ ೨**

ಮಹಿಳಾ ಸಶಕ್ತೀಕರಣದ ವಿವಿಧ ಆಯಾಮಗಳು ೧೫
ಸ್ತ್ರೀವಾದಿ ಆಯಾಮ ೨೧
ಆರ್ಥಿಕ ಆಯಾಮ ೨೪
ಅಭಿವೃದ್ಧಿ ಆಯಾಮ ೨೬
ರಾಜಕೀಯ ಆಯಾಮ ೩೧
ಮನೋವಿಶ್ಲೇಷಣಾತ್ಮಕ ಆಯಾಮ ೩೨
ಆರೋಗ್ಯ ಮತ್ತು ಪೌಷ್ಠಿಕತೆಯ ಆಯಾಮ ೩೬
ಕಾನೂನು ಆಯಾಮ ೩೭

**ಅಧ್ಯಾಯ ೩**

ಮಹಿಳಾ ಸಶಕ್ತೀಕರಣದ ಬೆಳವಣಿಗೆಯ ಹಂತಗಳು ೪೦
ಅಂತಾರಾಷ್ಟ್ರೀಯ ಮಟ್ಟ – ತಾತ್ವಿಕ, ಪ್ರಾಯೋಗಿಕ ಮತ್ತು ಸಾಂಸ್ಥಿಕ ಪ್ರಯತ್ನಗಳು ೪೩

ರಾಷ್ಟ್ರೀಯಮಟ್ಟ – ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ ೬೯
ರಾಜ್ಯಮಟ್ಟ– ತಳಮಟ್ಟದ ಕಾರ್ಯತಂತ್ರಗಳು ೭೬

**ಅಧ್ಯಾಯ ೪**

ಮಹಿಳಾ ಸಶಕ್ತೀಕರಣದ ಪರಿಣಾಮ, ಅಡ್ಡಿ ಹಾಗು ಸವಾಲುಗಳು ೮೧

# ಅಧ್ಯಾಯ – ೧

## ಪೀಠಿಕೆ

ಒಂದು ಸಾಮಾನ್ಯ ವಿಷಯವು ಜ್ಞಾನಶಾಖೆಯಾಗಿ, ಶೈಕ್ಷಣಿಕ ಶಿಸ್ತಾಗಿ ಬೆಳೆಯುವಾಗ ಸಿದ್ಧಾಂತ ಪರಿಕಲ್ಪನೆಗಳು ಮೂಲಾಧಾರವಾಗುತ್ತವೆ. ಹೆಚ್ಚು ಹೆಚ್ಚು ಸಿದ್ಧಾಂತ ಹಾಗೂ ಪರಿಕಲ್ಪನೆಗಳು ಸೇರಿಕೊಂಡಂತೆ ಆ ಶಿಸ್ತು ಗಟ್ಟಿಯಾಗುತ್ತಾ ಹೋಗುತ್ತದೆ. ಸ್ತ್ರೀವಾದಿ ಸಿದ್ಧಾಂತ ಹಾಗೂ ಮಹಿಳಾ ಚಳವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಮಹಿಳಾ ಅಧ್ಯಯನವು ನೇರ ಪರಿಕಲ್ಪನೆಗಳನ್ನು ಹುಟ್ಟುಹಾಕಿ ತಾನು ಗಟ್ಟಿಗೊಳ್ಳುತ್ತಾ ಬೆಳೆಯುತ್ತಿದೆ.

ನಾವು ದಿನನಿತ್ಯ ಬಳಸುವ ಪದ/ಶಬ್ದಗಳು ವಿವಿಧ ಆಯಾಮ, ತಾಂತ್ರಿಕ ಲಕ್ಷಣಗಳನ್ನು ಒಳಗೊಂಡು ಪರಿಕಲ್ಪನೆಯಾಗಿ ಮೂಡುತ್ತವೆ. ಪರಿಕಲ್ಪನೆಯು ವಿಶಾಲ ಅರ್ಥ ನಿರೂಪಣೆ ಹಾಗೂ ಅರ್ಥೈಸುವಿಕೆಗಳನ್ನು ಹೊಂದಿರುತ್ತದೆ. ವಿವಿಧ ದೃಷ್ಟಿಕೋನ, ಆಯಾಮಗಳನ್ನೊಳಗೊಂಡ ಪರಿಕಲ್ಪನೆಯು ಚಿಂತನೆ, ಸಿದ್ಧಾಂತ ಹಾಗೂ ಪ್ರಾಯೋಗಿಕ ಕಾರ್ಯಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ. ಕಲ್ಪನೆಗಳಲ್ಲಿದ್ದ ಚಿಂತನೆ ಸಂಗತಿಗಳು ವಾಸ್ತವದಲ್ಲಿ ರೂಪುಗೊಳ್ಳಲು ಸಹಾಯ ಮಾಡುತ್ತದೆ. ಕಾಲ್ಪನಿಕವಾಗಿ ಮಾಡಿದ ಸಂಗತಿಗಳು ವಾಸ್ತವಕ್ಕೆ ಎದುರಾಗಿ ವಿವಿಧ ಅರ್ಥಗಳನ್ನು ಪಡೆದುಕೊಂಡು ಪರಿಕಲ್ಪನೆಗಳಾಗಿ ಹೊರಹೊಮ್ಮುತ್ತವೆ. ಈ ಪರಿಕಲ್ಪನೆಗಳು ಒಂದು ಜ್ಞಾನಶಾಖೆ ಅಥವಾ ಶಿಸ್ತಿನ ವ್ಯಾಪ್ತಿಯನ್ನು ವಿಶಾಲಗೊಳಿಸುತ್ತವೆ.

ಮಹಿಳಾ ಅಧ್ಯಯನವು ಅನೇಕ ಪರಿಕಲ್ಪನೆಗಳನ್ನು ಸ್ತ್ರೀವಾದಿ ಸಿದ್ಧಾಂತ ಹಾಗೂ ಮಹಿಳಾ ಚಳವಳಿಯಿಂದ ಪಡೆದುಕೊಂಡು, ಇತರ ಜ್ಞಾನಶಿಸ್ತುಗಳಿಂದಲೂ ಎರವಲು ಪಡೆದುಕೊಂಡು ಒಂದು ಕಠಿಣ ಹಾಗೂ ಖಚಿತವಾದ ಬಹುಶಾಸ್ತ್ರೀಯ ವಿಷಯವಾಗಿ ಬೆಳೆಯುತ್ತಿದೆ. ಈ ಪರಿಕಲ್ಪನೆಗಳು ಮಹಿಳಾ ವಿಷಯಗಳಿಗೆ ಆಳವಾದ ವಿಶಾಲವಾದ ಚಿಂತನಾ ಕ್ರಮವನ್ನು ಬೆಳೆಸುತ್ತಾ ತಾತ್ವಿಕ ನೆಲೆಯನ್ನು ನೀಡುತ್ತಿವೆ. ಜಂಡರ್, ಸಾಮಾಜೀಕರಣ, ಮಹಿಳಾ ದುಡಿಮೆ, ಮಹಿಳಾ ದುಡಿಮೆಯ ಅಗೋಚರತೆ, ಮಾತೃ ಪ್ರಧಾನತೆ, ಪುರುಷ ಪ್ರಧಾನತೆ, ಮಹಿಳೆಯರ ಸ್ಥಾನ,

ಜಂಡರ್ ನಿಷೇಧ, ಜಂಡರ್ ಸಂಬಂಧ, ಮಹಿಳಾಭಿವೃದ್ಧಿ, ಮಹಿಳಾ ಸಮಾನತೆ, ಮಹಿಳಾ ಹಕ್ಕುಗಳು, ಸಂತಾನೋತ್ಪತ್ತಿ ಹಕ್ಕು, ಮಹಿಳಾ ಚಳವಳಿ, ಜಂಡರ್ ತಾರತಮ್ಯ, ಜಂಡರ್ ಅಸಮಾನತೆ, ಶಕ್ತಿ, ಸಶಕ್ತೀಕರಣ, ಮಹಿಳಾ ಸಶಕ್ತೀಕರಣ, ಆಂತರೀಕರಣ, ಜಾಗೃತೀಕರಣ, ಇತ್ಯಾದಿ ಈ ಎಲ್ಲಾ ಪರಿಕಲ್ಪನೆಗಳ ಬಗ್ಗೆ ಸಾಕಷ್ಟು ಚರ್ಚೆ, ಬರವಣಿಗೆ, ವಿಷಯ ಮಂಡನೆಗಳು ನಡೆದಿವೆ. ಪ್ರಸ್ತುತ ಪುಸಕ್ತದಲ್ಲಿ ಮಹಿಳಾ ಸಶಕ್ತೀಕರಣ ಪರಿಕಲ್ಪನೆಯನ್ನು ಆಯ್ದುಕೊಂಡು ಚರ್ಚಿಸಲಾಗಿದೆ. ನಾನೇ ಇದರ ಬಗ್ಗೆ ಪುಸ್ತಕ, ಲೇಖನ, ಪ್ರಬಂಧಗಳನ್ನು ಬರೆದಿರುವುದರಿಂದ ಕೆಲವು ಕಡೆ ಪುನರಾವರ್ತನೆ ಎನಿಸಬಹುದು. ಅದು ಅನಿವಾರ್ಯ. ಆದಷ್ಟು ಹೊಸ ಆಯಾಮ, ಚರ್ಚೆ, ತಾತ್ವಿಕ ನೆಲೆಯಲ್ಲಿ ಮಹಿಳಾ ಸಬಲೀಕರಣವನ್ನು ಪ್ರಸ್ತುತಪಡಿಸಲು ಪ್ರಯತ್ನಿಸಿದ್ದೇನೆ.

ಮಹಿಳಾ ಸಶಕ್ತೀಕರಣವು ಒಂದು ಪರಿಕಲ್ಪನೆ ಹಾಗೂ ಪ್ರಕ್ರಿಯೆಯು ಹೌದು. ಒಂದು ಪರಿಕಲ್ಪನೆಯಾಗಿ ವಿವಿಧ ವಲಯಗಳಲ್ಲಿ ವ್ಯಾಪಕವಾಗಿ ಅದನ್ನು ಬಳಸಲಾಗುತ್ತಿದೆ. ಇದು ೧೯೮೦ರ ದಶಕದಲ್ಲಿ ಅಭಿವೃದ್ಧಿಯ ಮೂಸೆಯಿಂದ ಹೊರಬಂದ ಪರಿಕಲ್ಪನೆ. ಮುಖ್ಯವಾಹಿನಿ ಅಭಿವೃದ್ಧಿ ಪ್ರಕ್ರಿಯೆಯು ಜಂಡರೀಕರಣಗೊಂಡ ಪ್ರಕ್ರಿಯೆಯಲ್ಲಿ ಮೂಡಿಬಂದಿತು. ಅಭಿವೃದ್ಧಿಯು ಸಾಮಾಜಿಕ ನ್ಯಾಯ ಹಾಗೂ ಮಾನವ ಅಭಿವೃದ್ಧಿಗೆ ಒತ್ತುಕೊಡಲು ಪ್ರಾರಂಭಿಸಿದಾಗ ಅದು ಜನಕೇಂದ್ರಿತವಾಗಲಾರಂಭಿಸಿತು. ಜನರೊಳಗೆ ಮಹಿಳೆಯರು ಒಂದು ಭಾಗವಾಗಿರುವುದರಿಂದ ಅಭಿವೃದ್ಧಿಯೊಳಗೆ ಅವರೂ ಸೇರಿಕೊಳ್ಳಲು ಸಾಧ್ಯವಾಯಿತು. ಆರಂಭದಲ್ಲಿ ಟಾರ್ಗೆಟ್ ಗುಂಪಾಗಿ ಸೇರಿಕೊಂಡರು. ನಂತರ ಅಭಿವೃದ್ಧಿಯನ್ನು 'ಜನರಿಂದ ಜನರಿಗಾಗಿ ಜನರಿಗೋಸ್ಕರ' ರೂಪಿಸಿದಂತೆ ಮಹಿಳೆಯರನ್ನು ಸಹಭಾಗಿಗಳನ್ನಾಗಿ, ಪಾಲುದಾರರನ್ನಾಗಿ ನೋಡಬೇಕೆಂಬ ಚಿಂತನೆ ಶುರುವಾಯಿತು. ಅದರ ಜೊತೆಗೆ ಅಭಿವೃದ್ಧಿಯಲ್ಲಿ ಎಲ್ಲಾ ಜನರು ಪಾಲ್ಗೊಳ್ಳುವಂತೆ ಮಾಡಲು ಅವರ ಸಾಮರ್ಥ್ಯವನ್ನು ಹೆಚ್ಚಿಸುವ ಕ್ರಿಯೆಗೆ ಹೆಚ್ಚು ಒತ್ತು ನೀಡಲಾಯಿತು. ಮುಖ್ಯವಾಹಿನಿ ಅಭಿವೃದ್ಧಿಯ ಈ ಚಿಂತನೆಗಳನ್ನು ಬಳಸಿಕೊಂಡು ಸ್ತ್ರೀವಾದಿ ಅಭಿವೃದ್ಧಿ ಚಿಂತಕರು ಮಹಿಳೆಯರನ್ನು ಅಭಿವೃದ್ಧಿಯ ಪಾಲುದಾರರನ್ನಾಗಿ ನೋಡಬೇಕು, ಮಹಿಳೆಯರನ್ನು ಒಳಗೊಂಡರೆ ಮಾತ್ರ ಸಂಪೂರ್ಣ, ಪರಿಪೂರ್ಣ ಅಭಿವೃದ್ಧಿ ಸಾಧಿಸಲು ಸಾಧ್ಯ. ಆದುದರಿಂದ ಮಹಿಳೆಯರ ಸಾಮರ್ಥ್ಯವನ್ನು ಹೆಚ್ಚಿಸಬೇಕು ಎಂಬ ಆಲೋಚನೆಯನ್ನು ಪ್ರಸ್ತುತಪಡಿಸಿದರು. ಈ ಸಂದರ್ಭದಲ್ಲೇ ಮಹಿಳಾ ಸಶಕ್ತೀಕರಣ ಪರಿಕಲ್ಪನೆ ಮೂಡಿಬಂದಿತು. ಮಹಿಳಾ ಸಶಕ್ತೀಕರಣವನ್ನು ವ್ಯಾಖ್ಯಾನಿಸುವ, ಅರ್ಥೈಸುವ ಅದರ ವಿವಿಧ ಆಯಾಮ, ಅದಕ್ಕಿರುವ ಅಡ್ಡಿ,

ಅದರಿಂದ ಉಂಟಾಗುವ ಪರಿಣಾಮಗಳ ಕುರಿತು ಸಾಕಷ್ಟು ಚಿಂತನೆ, ಚರ್ಚೆ, ಬರವಣಿಗೆ ಕಾರ್ಯಗಳು ನಡೆದವು, ನಡೆಯುತ್ತಿವೆ. ಇದನ್ನೆಲ್ಲ ವಿವರವಾಗಿ ಮಹಿಳಾ ಸಶಕ್ತೀಕರಣ ಪರಿಕಲ್ಪನೆಯ ಭಾಗದಲ್ಲಿ ವಿವರಿಸಲಾಗುವುದು.

ಮಹಿಳಾ ಸಶಕ್ತೀಕರಣ ಒಂದು ಪರಿಕಲ್ಪನೆಯಾಗಿ ತನ್ನೊಳಗೆ ಮತ್ತೆರಡು ಪರಿಕಲ್ಪನೆಗಳನ್ನು ಒಳಗೊಂಡಿದೆ. ಒಂದು ಶಕ್ತಿ, ಇನ್ನೊಂದು ಸಶಕ್ತೀಕರಣ. ಇವೆರಡನ್ನು ಅರ್ಥಮಾಡಿಕೊಂಡರೆ ಮಹಿಳಾ ಸಬಲೀಕರಣವನ್ನು ಕೂಲಂಕಷವಾಗಿ, ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬಹುದು.

## ಶಕ್ತಿ ಪರಿಕಲ್ಪನೆ

ಶಕ್ತಿ ಪದವನ್ನು ಸಾಮಾನ್ಯ ಪದವಾಗಿ ಮತ್ತು ಪರಿಕಲ್ಪನೆಯಾಗಿ ಬಳಸಲಾಗುತ್ತದೆ. ಸಾಮಾನ್ಯ ಅರ್ಥದಲ್ಲಿ ಶಕ್ತಿಯನ್ನು ದೈಹಿಕ ಸಾಮರ್ಥ್ಯಕ್ಕೆ ಅನ್ವಯವಾಗುವಂತೆ ಉಪಯೋಗಿಸಲಾಗುತ್ತದೆ. ಬಲ, ಚೈತನ್ಯ, ಸಾಮರ್ಥ್ಯ, ಅಧಿಕಾರ, ಪ್ರಾಬಲ್ಯ, ಪ್ರಭಾವ, ನಿಯಂತ್ರಣ, ಅರ್ಹತೆ, ಸಾಹಸ, ಮುಂತಾದ ಪದಗಳಿಗೆ ಪರ್ಯಾಯವಾಗಿ ಶಕ್ತಿಯನ್ನು ಬಳಸಲಾಗುತ್ತದೆ. ಯಾವುದೇ ಒಂದು ಜೀವಿಯಲ್ಲಿ ಜೀವ ಅಂಕುರವಾಗಿ ಅದು ಅಳಿಯುವವರೆಗೆ ಶಕ್ತಿಯು ಚೈತನ್ಯದ ರೂಪದಲ್ಲಿ ಇರುತ್ತದೆ. ಅದು ವಿವಿಧ ರೂಪ ಪಡೆದು ದೈಹಿಕ, ಮಾನಸಿಕ ಹಂತಗಳಿಗೆ ಹರಡಿಕೊಂಡಿರುತ್ತದೆ. ಅದು ಮಾನವರಲ್ಲಿ ಮಾನಸಿಕ ಹಂತದಲ್ಲಿ ಪ್ರಬಲವಾಗಿರುತ್ತದೆ. ಅದಕ್ಕೆ ಅವರನ್ನು ಬುದ್ಧಿಜೀವಿಗಳು ಎಂದು ಕರೆಯುವುದು. ದೇಹದ ಶಕ್ತಿಯು ದೈಹಿಕ ಕಾರ್ಯಗಳನ್ನು ಮಾಡಲು ಸಹಾಯಕವಾದರೆ ಮಾನಸಿಕ ಶಕ್ತಿಯು ವಿಚಾರ ಮಾಡಲು, ವಿವೇಚಿಸಲು, ಆಲೋಚಿಸಲು ಸಹಾಯಮಾಡುತ್ತದೆ. ಇವೆರಡೂ ಸೇರಿ ಮಾನವರನ್ನು ಇತರ ಜೀವಿಗಳಿಗಿಂತ ಭಿನ್ನವಾಗಿಸಿವೆ.

ಈ ಶಕ್ತಿ ಎಂಬ ಸಾಮಾನ್ಯ ಪದವನ್ನು ವಿವಿಧ ಆಯಾಮಗಳಲ್ಲಿ ಪರಿಶೀಲಿಸಿ, ಅರ್ಥ ನಿರೂಪಣೆಯನ್ನು ನೀಡಿದಾಗ ಅದು ಪರಿಕಲ್ಪನೆಯಾಗಿ ರೂಪುಗೊಳ್ಳುತ್ತದೆ. ಶಕ್ತಿಯು ಜೈವಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಪೌರಾಣಿಕ, ಜಂಡರ್ ಹಾಗೂ ಆಧ್ಯಾತ್ಮಿಕ ನೆಲೆಯಲ್ಲಿ ಒಂದು ಪರಿಕಲ್ಪನೆಯಾಗಿ ಬೆಳೆಯುತ್ತದೆ. ಅಂದರೆ ಮೇಲಿನ ಎಲ್ಲಾ ನೆಲೆಗಳಲ್ಲಿ 'ಶಕ್ತಿ' ಪದವನ್ನು ಅರ್ಥೈಸಬಹುದು. ಅಂತಹ ಒಂದು ಪ್ರಯತ್ನವನ್ನು ಈ ಭಾಗದಲ್ಲಿ ಮಾಡಲಾಗುವುದು.

ಮೊದಲಿಗೆ ಜೈವಿಕ ನೆಲೆಯಲ್ಲಿ ನೋಡೋಣ. ಜೀವಿಯಲ್ಲಿ, ವ್ಯಕ್ತಿಯಲ್ಲಿ ಸಂಚಯವಾಗುವ ಶಕ್ತಿಯು ದೈಹಿಕವಿರಬಹುದು, ಮಾನಸಿಕವಿರಬಹುದು, ಪ್ರಕೃತಿದತ್ತವಾಗಿರಬಹುದು, ತಂದೆತಾಯಿಯಿಂದ ವಂಶಪಾರಂಪರ್ಯದಿಂದ

ಬಂದಿರಬಹುದು, ವ್ಯಕ್ತಿಯೇ ಸ್ವಪ್ರಯತ್ನದಿಂದ ಬೆಳೆಸಿಕೊಂಡಿರಬಹುದು. ಅದು ಹೇಗೆ ಬಂದಿರಲಿ 'ಶಕ್ತಿ' ಇರುವ ಇಲ್ಲದಿರುವ ಜೀವಿಗಳನ್ನು, ವ್ಯಕ್ತಿಗಳನ್ನು ಗುರುತಿಸಿ ಭಿನ್ನವಾಗಿ ನೋಡಲಾಗುತ್ತದೆ. ದೈಹಿಕ ಬಲ ಹೆಚ್ಚಾಗಿದ್ದರೆ ಬಲಶಾಲಿ/ಶಕ್ತಿಶಾಲಿ/ಬಲಾಢ್ಯ ಎಂದು ಗುರುತಿಸಲಾಗುತ್ತದೆ. ಅದು ಪ್ರಾಣಿಯಿರಲಿ, ಮಾನವರಿರಲಿ ಇವರು ಮನ್ನಣೆ, ಗೌರವ ಪಡೆದುಕೊಳ್ಳುತ್ತಾರೆ. ಮೇಲಿನ, ಆಳ್ವಿಕೆ ಸ್ಥಾನ ಪಡೆದುಕೊಳ್ಳುತ್ತಾರೆ. ದೈಹಿಕ ಬಲವಿಲ್ಲದವರು ದುರ್ಬಲರು, ಅಸಹಾಯಕರು, ಅಶಕ್ತರು ಎಂದು ಪರಿಗಣಿಸಲಾಗುತ್ತದೆ. ಕೀಳಾಗಿ ನೋಡಲಾಗುತ್ತದೆ. ಇವರು ಅವಲಂಬಿತರಾಗಿರುತ್ತಾರೆ, ಕೆಳಸ್ಥಾನದಲ್ಲಿರುತ್ತಾರೆ. ಆದರೂ ಇವರು ಸಂಪೂರ್ಣ ಅಶಕ್ತರು ಎಂದಲ್ಲ. ಅವರಲ್ಲೂ ಒಂದಲ್ಲಾ ಒಂದು ರೀತಿಯ ಶಕ್ತಿಯಿರುತ್ತದೆ. ಅದನ್ನು ವಿಚಾರವಂತರೆನಿಸಿಕೊಳ್ಳುವವರು ಗುರುತಿಸಬೇಕಷ್ಟೆ.

ಜೈವಿಕ ನೆಲೆಯಲ್ಲಿ 'ಯಾರು ಸಮರ್ಥರೋ/ಅರ್ಹರೋ ಅವರು ಉಳಿಯುತ್ತಾರೆ' ಅನ್ನುವ ನಾಣ್ನುಡಿಯಿದೆ. ಅಂದರೆ ಲಕ್ಷಾಂತರ ಜೀವಿಗಳು ಉಳಿವಿಗಾಗಿ ಹೋರಾಡುತ್ತಿರುವಾಗ ಯಾರು ಅರ್ಹರಾಗಿರುತ್ತಾರೋ ಅವರು ಉಳಿಯುತ್ತಾರೆ. ಇಲ್ಲಿ ದೈಹಿಕ ಸಾಮರ್ಥ್ಯ, ಚಾತುರ್ಯ, ಯುಕ್ತಿ ಮುಖ್ಯವಾಗುತ್ತದೆ. ಉಳಿವಿಗಾಗಿ ಜೀವಿಗಳು ಜೈವಿಕ ಆವಶ್ಯಕತೆಗಳನ್ನು ಪೂರೈಸಿಕೊಂಡು ಶಕ್ತಿಯನ್ನು ಪಡೆದುಕೊಳ್ಳುತ್ತವೆ. ಮಾನವ ಜೀವಿಗಳು ಇದರ ಜೊತೆಗೆ ಮಾನಸಿಕ ಬಲವನ್ನು ಬೆಳೆಸಿಕೊಂಡು (ಸಾಮಾಜೀಕರಣದ ಮೂಲಕ) ಸಾಮಾಜಿಕ ನೆಲೆಯನ್ನು ಕಟ್ಟಿಕೊಳ್ಳುತ್ತಾರೆ. ಕುಟುಂಬದೊಂದಿಗೆ ಪ್ರಾರಂಭವಾಗುವ ಸಾಮಾಜಿಕ ನೆಲೆ ವಿಸ್ತಾರಗೊಂಡು ವ್ಯಕ್ತಿಗೆ ಸಾಮಾಜಿಕ ಶಕ್ತಿಯನ್ನು ಒದಗಿಸುತ್ತದೆ. ಅಂದರೆ ಪ್ರಾಣ ರಕ್ಷಣೆ, ಮೂಲಭೂತ ಆವಶ್ಯಕತೆಗಳು, ಶಿಕ್ಷಣ, ಆರ್ಥಿಕ ಭದ್ರತೆ, ಮಾನಸಿಕ, ಭಾವನಾತ್ಮಕ ಬೆಂಬಲ, ಆರೋಗ್ಯ ರಕ್ಷಣೆ ನೀಡುವುದರ ಮೂಲಕ ಒಂದು ಮಗುವು ವ್ಯಕ್ತಿಯಾಗಿ ರೂಪುಗೊಳ್ಳುವಂತೆ ಸಮಾಜದಲ್ಲಿ ಒಂದು ಸ್ಥಾನ ದೊರಕುವಂತೆಮಾಡುತ್ತದೆ. ಇಲ್ಲಿ ಶಕ್ತಿಯು ಸಾಮಾಜಿಕ ನೆಲೆಯನ್ನು ಪಡೆದುಕೊಳ್ಳುತ್ತದೆ.

ಶಕ್ತಿ ಪರಿಕಲ್ಪನೆಯು ಆರ್ಥಿಕ ಅಂಶಗಳನ್ನು ಒಳಗೊಂಡಿದೆ, ಅವುಗಳಿಂದ ಪ್ರಭಾವಿಸಲ್ಪಡುತ್ತದೆ, ಆಧರಿಸಲ್ಪಟ್ಟಿದೆ. ಮೂಲಭೂತ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದರಿಂದ ಹಿಡಿದು ಕೌಶಲ್ಯ ಬೆಳವಣಿಗೆ, ಶಿಕ್ಷಣ, ಆದಾಯಗಳಿಸುವ ಸಾಮರ್ಥ್ಯ, ಸಂಪನ್ಮೂಲಗಳ ಲಭ್ಯತೆ, ಹಂಚಿಕೆಗಳವರೆಗಿನ ಆರ್ಥಿಕ ಅಂಶಗಳು ಶಕ್ತಿಯನ್ನು ಕಟ್ಟಿಕೊಡುತ್ತವೆ. ಯಾವ ವ್ಯಕ್ತಿಗಳು ಇವೆಲ್ಲವುಗಳನ್ನು ಹೊಂದುತ್ತಾರೋ, ಅವರು ಆರ್ಥಿಕವಾಗಿ ಬಲಾಢ್ಯರೆನಿಸಿಕೊಳ್ಳುತ್ತಾರೆ ಅವರು ಇತರರನ್ನು ನಿಯಂತ್ರಿಸುತ್ತಾರೆ, ಆಳುತ್ತಾರೆ. ಇಲ್ಲದವರು ಅಧೀನಕ್ಕೊಳಗಾಗುತ್ತಾರೆ ಹಾಗೂ ಆರ್ಥಿಕವಾಗಿ ಅಶಕ್ತರಾಗುತ್ತಾರೆ.

ಒಂದು ಜೈವಿಕ ಜೀವಿಯನ್ನು ಸಾಮಾಜಿಕ ಜೀವಿಯನ್ನಾಗಿಸುವಲ್ಲಿ ಮನೋಶ್ಯಕ್ತಿಯು ಪ್ರಮುಖ ಪಾತ್ರವಹಿಸುತ್ತದೆ. ಮಾನಸಿಕವಾಗಿ ಸ್ವಸ್ಥರಾಗಿರುವವರು ಶಕ್ತ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ. ಚಿಂತನೆ, ವಿಚಾರ, ವಿವೇಚನಾ ಶಕ್ತಿಯಿಂದ ಬುದ್ಧಿಜೀವಿ ಎನಿಸಿಕೊಂಡಿರುವ ಮಾನವರಿಗೆ ಪ್ರಕೃತಿಯ ಮೇಲೆ ಹಾಗೂ ಇತರ ಜೀವವರ್ಗಗಳ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಗಿದೆ. ಇದನ್ನು ಸಮಾಜಕ್ಕೂ ವಿಸ್ತರಿಸಿಕೊಂಡು ಜನರ ಮೇಲೂ ನಿಯಂತ್ರಣ ಆಳ್ವಿಕೆ ನಡೆಸಲಾಗುತ್ತದೆ.

ಮಾನವರು ಸಂಘಜೀವಿಗಳಾಗಿ ವಿವಿಧ ಸಂಘ ಸಂಸ್ಥೆ, ವ್ಯವಸ್ಥೆಗಳನ್ನು ಕಟ್ಟಿಕೊಂಡು ಅದರ ಆಡಳಿತ ನಡೆಸುವ ಕಾರ್ಯವನ್ನು ಕೈಗೊಳ್ಳುತ್ತಾರೆ. ಮೇಲೆ ಹೆಸರಿಸಿದ ಶಕ್ತಿಯ ಸ್ವರೂಪಗಳನ್ನು ಹೊಂದಿ, ವ್ಯಕ್ತಿಗಳು ಆಳ್ವಿಕೆ ಬಲವನ್ನು ಪಡೆಯುತ್ತಾರೆ. ಸಾಮಾನ್ಯ ಜನರೆಲ್ಲರಿಗೂ ಆಡಳಿತದಲ್ಲಿ ಭಾಗವಹಿಸಲು ಅವಕಾಶವಿರುವ ಜನರಿಂದ ಜನರು ಜನರಿಗಾಗಿ ನಡೆಸುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಕೆಲವೇ ಜನರು ಆಡಳಿತದ ಚುಕ್ಕಾಣಿ ಹಿಡಿದು ಇತರರನ್ನು ಆಳುತ್ತಾರೆ. ಇಲ್ಲಿ 'ಶಕ್ತಿ' ರಾಜಕೀಯ ಆಯಾಮವನ್ನು ಪಡೆದುಕೊಳ್ಳುತ್ತದೆ.

## ಪೌರಾಣಿಕ ಹಿನ್ನೆಲೆಯಲ್ಲಿ ಶಕ್ತಿ ಪರಿಕಲ್ಪನೆ

ಶಕ್ತಿ ಪರಿಕಲ್ಪನೆಗೆ ಧಾರ್ಮಿಕ ಹಾಗೂ ಪೌರಾಣಿಕ ಹಿನ್ನೆಲೆಯಿದೆ. ಇದನ್ನು ತಾಂತ್ರಿಕ ಪದವಾಗಿ ಬಳಸಲಾಗುತ್ತದೆ. ಹಿಂದು ಧರ್ಮ ಪುರಾಣದಲ್ಲಿ & ಗ್ರೀಕ್ ರೋಮನ್ನರ ಪುರಾಣಗಳಲ್ಲೂ ಶಕ್ತಿ ಪರಿಕಲ್ಪನೆ ಕಂಡುಬರುತ್ತದೆ. ಗ್ರೀಕರಲ್ಲಿ 'ಸೈಕಿ' ರೋಮನ್ನರಲ್ಲಿ 'ಅನಿಮಾ', ಗಾಸಿಕ್‌ರಲ್ಲಿ 'ಸೋಫಿಯಾ' ಹಾಗೂ ಕಬ್ಬಾಲಿಸಕರಲ್ಲಿ 'ಶೇಕಿನ' ಎಂಬ ಹೆಸರುಗಳು ಶಕ್ತಿಯನ್ನು ಆಧರಿಸಿವೆ. ಶಕ್ತಿಯು 'ವಿಶ್ವ ಚೈತನ್ಯ' ಹಾಗೂ ಅಧಿದೇವತೆ. ನಿಯಂತ್ರಣ, ಯೋಗ್ಯತೆ, ಸಾಮರ್ಥ್ಯ, ಕಾರ್ಯಶಕ್ತಿ, ಬಲ, ಶೌರ್ಯ, ಸಾಹಸ, ಕಟ್ಟುವ ಶಕ್ತಿ, ಕಾವ್ಯಶಕ್ತಿ, ಮೇಧಾವಿತನ, ಪರಿಣಾಮ ಉಂಟಾಗಲು ಕಾರಣವಾಗುವ ಸ್ವಾಭಾವಿಕ ಬಲವೇ ಶಕ್ತಿ. ಸ್ತ್ರೀತ್ವವು ಮೂಲವಾಗಿದ್ದು ಅದರಲ್ಲಿ ಪುರುಷತ್ವ ಅಡಗಿದ್ದು 'ಸ್ತ್ರೀತ್ವ' ಪರಮ ದೈವವಾಗಿದೆ ಎಂದು ತಾಂತ್ರಿಕ ವಿದ್ಯೆ ನಂಬುತ್ತದೆ. ಸಾಧು ಸಂತರು ಸ್ತ್ರೀಯನ್ನು ದೇವತೆಯೆಂದು, ಶಕ್ತಿಯ ಮೂಲವೆಂದು ಪೂಜಿಸುತ್ತಾರೆ. ಅವಳಿಗೆ ಅವಮಾನ ಮಾಡುವುದು ಅಪರಾಧ ಎಂದು ತಿಳಿಯುತ್ತಾರೆ. ಸ್ತ್ರೀ ಎಂದರೆ ಶಕ್ತಿ, ಶಕ್ತಿ ಎಂದರೆ ಸ್ತ್ರೀ ಎಂದು ಹೇಳುತ್ತಾರೆ. ಸಕಲ ಚರಾಚರ ವಸ್ತುಗಳ ಮೂಲವಾಗಿರುವ, ಎಲ್ಲೆಡೆ ವ್ಯಾಪಿಸಿರುವ ಓಜಸ್ಸೇ 'ಶಕ್ತಿ' ಎಂದು ಹಿಂದು ಪುರಾಣ ಹೇಳುತ್ತದೆ. ಅಲ್ಲದೆ ಸೃಷ್ಟಿಕ್ರಿಯೆಯನ್ನು ಶಕ್ತಿಯ ಪ್ರತಿರೂಪ ಎಂದು ತಿಳಿಯುತ್ತದೆ.

ಇತಿಹಾಸಪೂರ್ವ ಕಾಲದಲ್ಲಿ ಮಾತೃಪ್ರಧಾನ ವ್ಯವಸ್ಥೆ ಅಸ್ತಿತ್ವದಲ್ಲಿದ್ದು, 'ಶಕ್ತಿ' ಆರಾಧನೆ ವ್ಯಾಪಕವಾಗಿತ್ತು ಎಂದು ಹೇಳಲಾಗುತ್ತದೆ. ಆರ್ಯರು ಬಂದು ಪುರುಷಪ್ರಧಾನ ವ್ಯವಸ್ಥೆಯನ್ನು ಬೆಳೆಸಿದಂತೆ 'ಶಕ್ತಿ' ಪರಿಕಲ್ಪನೆ ಭಿನ್ನ ಅರ್ಥವನ್ನು ಪಡೆದುಕೊಳ್ಳಲಾರಂಭಿಸಿತು.

ತಾಯಿ ಹಾಗೂ ಪತ್ನಿಯ ಸ್ವರೂಪದಲ್ಲೂ 'ಶಕ್ತಿ'ಯನ್ನು ಗುರುತಿಸಲಾಗುತ್ತದೆ. ಜೀವನ ಮತ್ತು ಜೀವನದಾಚೆ ಪುರುಷನನ್ನು ಕಾಪಾಡುವುದೇ ಶಕ್ತಿಯಾಗಿದ್ದು, ಅದನ್ನು ಸ್ತ್ರೀಲಿಂಗ ರೂಪದಲ್ಲೇ ನೋಡಲಾಗುತ್ತದೆ. ಪುರುಷ ತನ್ನ ಜೀವನ ಪಯಣದಲ್ಲಿ ಕಾಣುವ, ತನ್ನನ್ನು ರಕ್ಷಿಸುವ, ಪೋಷಿಸುವ, ಪ್ರೀತಿಸುವ ದೈವಿಕ ಸ್ತ್ರೀಯೇ ಶಕ್ತಿಯೆಂದು ತಿಳಿಯುತ್ತಾನೆ.

ಸಾವು ಸಮೀಪವಾದಾಗ 'ಶಕ್ತಿ'ಯು ಹತ್ತಿರ ಬಂದು ಪುರುಷನ ದೇಹ ಮತ್ತು ಆತ್ಮವನ್ನು ಸಾಂಸಾರಿಕ ಜೀವನದಿಂದ ಮುಕ್ತಗೊಳಿಸಿ ತನ್ನಲ್ಲಿ ಲೀನವಾಗಿಸಿಕೊಳ್ಳುತ್ತಾಳೆ ಎಂದು ತಾಂತ್ರಿಕ ಸಿದ್ಧಾಂತವು ನಂಬುತ್ತದೆ. ಅವಳನ್ನು ಪೂಜಿಸಿ ಸೌಂದರ್ಯ ಮತ್ತು ಅಮರತ್ವವನ್ನು ಪಡೆಯುವುದು ಈ ವಿದ್ಯೆಯ ಗುರಿಯಾಗಿರುತ್ತದೆ. ದೇವರಿಗೂ ದೈವತ್ವ ಬರಲು 'ಶಕ್ತಿ ದೇವತೆ' ಬೇಕು. ಶಕ್ತಿಯಿಲ್ಲದೆ ಹೋದರೆ ದೇವರಿಗೆ ಬಲವಿಲ್ಲ. ದೇವರಲ್ಲಿ ಶಕ್ತಿ ಸೇರಿದರೆ ಅಂದರೆ ಅವರಿಬ್ಬರೂ ಒಂದಾದರೆ ಮಾತ್ರ ಸೃಷ್ಟಿ ಸಾಧ್ಯ. 'ನಾನೇ ಸೃಷ್ಟಿಕರ್ತೆ, ನಾನೇ ಎಲ್ಲಾ' ಎಂದು ಶಕ್ತಿ ದೇವತೆ ಹೇಳುತ್ತಾಳೆ. ಲಲಿತಾ ಸಹಸ್ರನಾಮದಲ್ಲಿ ಶಕ್ತಿ ದೇವತೆಯು ಕಣ್ಣು ತೆರೆಯುವುದು ಮತ್ತು ಮುಚ್ಚುವುದರಿಂದ ವಿಶ್ವವು ಹುಟ್ಟುತ್ತದೆ, ನಾಶವಾಗುತ್ತದೆ ಎಂದು ಹೇಳಲಾಗಿದೆ. ದೇವರು ಕೂಡ ತಾನು ಬಲ ಪಡೆಯಲು 'ಶಕ್ತಿ' ಯನ್ನು ಪೂಜಿಸಬೇಕಾಗುತ್ತದೆ. ಇದರಿಂದ ಭೂಮಿ ಮೇಲೆ ಇರುವವರೆಲ್ಲರೂ 'ಶಕ್ತಿ'ಯನ್ನು ಇಷ್ಟದೇವತೆ ಎಂದು ಪೂಜಿಸಬೇಕು ಎಂದು ನಂಬಲಾಗುತ್ತದೆ.

ಸೂಫಿ ಸಂತರು ಪರಿಶುದ್ಧ ಪ್ರೇಮದಲ್ಲಿ ಶಕ್ತಿಯನ್ನು ಕಾಣುತ್ತಾರೆ. ಕ್ರೈಸ್ತರು, ಸೋಫಿಯಾ, ನ್ಯೂಮಾ, ಇದಾ, ಅಧ್ವ, ಅನಿಮಾ ಹೆಸರುಗಳಲ್ಲಿ ಶಕ್ತಿಯನ್ನು ಪೂಜಿಸುತ್ತಾರೆ. ಕೆಲವು ಗ್ರಾಫಿಕ್ ಬರಹಗಳಲ್ಲಿ ಲೈಂಗಿಕ ಚಿಹ್ನೆಗಳಿದ್ದು, ಸಾವಿನ ನಂತರ ಆತ್ಮವು ಶಕ್ತಿಯಲ್ಲಿ ಲೀನವಾಗುವುದನ್ನು ವಿವರಿಸುತ್ತವೆ.

ಹಿಂದೂ ಧರ್ಮದಲ್ಲಿ ಶಕ್ತಿ ಎಂದರೆ ಅನಂತ 'ಮೂಲ ಆದಿಶಕ್ತಿ'. ಹಿಂದುಗಳ ಪ್ರಮುಖ ದೇವರುಗಳಾದ ಬ್ರಹ್ಮ, ವಿಷ್ಣು, ಶಿವ ತ್ರಿಮೂರ್ತಿಗಳ ಶಕ್ತಿಗೆ ಸಮವಾದುದು ಶಕ್ತಿ ದೇವತೆ. ಶಕ್ತಿಯನ್ನು ಹೆಚ್ಚಾಗಿ ಶಿವನಿಗೆ ಸಂಬಂಧಿಸಿದಂತೆ ಚಿತ್ರಿಸಲಾಗುತ್ತದೆ. ಶಕ್ತಿಯಿಲ್ಲದೆ ಶಿವನಿಲ್ಲ. ಅವನ ಮೂಲ ಶಕ್ತಿ. ಅವರಿಬ್ಬರೂ ಯಾವಾಗಲೂ

ಒಂದಾಗಿರುವವರು. ಅವರನ್ನು ಬೇರೆ ಮಾಡಲಾಗುವುದಿಲ್ಲ. ಇವರಿಬ್ಬರೂ ವಿಶ್ವದ ಎಲ್ಲಾ ಸೃಷ್ಟಿಕ್ರಿಯೆಯ ಮೂಲ ಸಂಕೇತವಾಗಿದ್ದಾರೆ. ಶಕ್ತಿಯಿಲ್ಲದಿದ್ದರೆ ಶಿವ ಶೂನ್ಯ. ಶೂನ್ಯವನ್ನು ಪೂಜಿಸಲು ಸಾಧ್ಯವೆ. ಆದುದರಿಂದ ಶಿವನನ್ನು ಪೂಜಿಸಬೇಕೆಂದರೆ ಅವನ ಜೊತೆ ಶಕ್ತಿಯಿರಲೇಬೇಕು. ವಿಶ್ವದ ಸೃಷ್ಟಿಕರ್ತಳಾದ ಶಕ್ತಿ ಸ್ವತಂತ್ರಳು, ಅವಳು ಯಾರನ್ನೂ ಅವಲಂಬಿಸಿಲ್ಲ. ಶಿವನಿಲ್ಲದಿದ್ದರೂ ಅವಳು ಶಕ್ತಳು. ಅವಳೇ ಶಕ್ತಿಯ ಮೂಲವಾಗಿದ್ದಾಳೆ. ಕುಮಾರಿಯಾಗಿಯೂ ಅವಳು ಬಲಾಢ್ಯಳು. ಶಕ್ತಿಯನ್ನು ಉನ್ನತ ಕಾರ್ಯ ಸ್ವರೂಪದ 'ಕಾಳಿ' 'ದುರ್ಗೆ'ಯ ರೂಪದಲ್ಲಿ ಪೂಜಿಸಲಾಗುತ್ತದೆ.

ತಾಂತ್ರಿಕ ತತ್ತ್ವದಲ್ಲಿ ಶಕ್ತಿಯನ್ನು ಎರಡು ಲಿಂಗಗಳ ಮಿಲನ ಅಂದರೆ ಯೋನಿ ಸ್ವರೂಪಗಳಾದ ಶಕ್ತಿ, ಲಿಂಗ ಸ್ವರೂಪನಾದ ಶಿವ ಇವರಿಬ್ಬರ ಮಿಲನದ ಸಂಕೇತವನ್ನಾಗಿ ಪೂಜಿಸಲಾಗುತ್ತದೆ. ಶಿವ ಶಕ್ತಿಯರ ಮಿಲನ, ಅವಿಭಾಜ್ಯ ಸಂಬಂಧ ಹಾಗೂ ಅರ್ಧನಾರೀಶ್ವರ ಕಲ್ಪನೆಯೂ ಲೌಕಿಕ ಜೀವನದಲ್ಲಿ ಪತಿ ಪತ್ನಿಯರ ಹೊಂದಾಣಿಕೆಗೆ ಸಂಕೇತವಾಗಿ ಬಳಸಲಾಗುತ್ತದೆ. ಸಾಮಾಜಿಕ ಜೀವನದಲ್ಲಿ ಸ್ತ್ರೀಗೆ ಅತ್ಯುನ್ನತ ಸ್ಥಾನವನ್ನು ನೀಡುವುದಕ್ಕೆ ತಳಹದಿ ಹಾಕಿಕೊಡುತ್ತದೆ. ಜೊತೆಗೆ ವಿದ್ಯೆ ಮತ್ತು ಸಂಪತ್ತಿನ ದೇವತೆಗಳಾಗಿಯೂ ಹೆಣ್ಣನ್ನು ಬಿಂಬಿಸಲಾಗುತ್ತಿದೆ. ಆದರೆ ಇವೆಲ್ಲವೂ ಪೂಜಿಸುವುದಕ್ಕೆ, ಮಾತನಾಡುವುದಕ್ಕಷ್ಟೇ ಸೀಮಿತವಾಗಿ ವಾಸ್ತವದಲ್ಲಿ ಮಹಿಳೆಯನ್ನು ಕೀಳಾಗಿಸಿ, ಶೋಷಿಸುವುದು, ತುಳಿಯುವುದು ಕಂಡುಬರುವುದು ವಿಪರ್ಯಾಸವೇ ಸರಿ. ಪ್ರಸ್ತುತ ನಮ್ಮ ಮುಂದಿರುವ ಪ್ರಶ್ನೆ, ಪೌರಾಣಿಕತೆಯ ಕಾಲ್ಪನಿಕ ಭ್ರಮೆಯ ಲೋಕದಲ್ಲಿ ದೇವತೆ, ಅಧಿದೇವತೆ, ಶಕ್ತಿ ಸ್ವರೂಪಿಣಿ ಎಂದು ಪೂಜಿಸಿಕೊಳ್ಳುವುದರ ಮೂಲಕ ಗೌರವ ಪಡೆಯಬೇಕಾ ಅಥವಾ ಕ್ರೌರ್ಯ, ಭಯಾನಕ ಶಕ್ತಿ, ದೆವ್ವ ಎಂದು ಹೇಳಿ ಹೆದರಿಸಿ ರಕ್ಷಣೆ ಪಡೆಯಬೇಕಾ? ಇಲ್ಲವೇ ವ್ಯಕ್ತಿಗಳಾಗಿ ಸಮಾನತೆ, ಗೌರವ ಪಡೆಯಬೇಕಾ? ವ್ಯಕ್ತಿಯಾಗಿ ಗೌರವಿಸಲಾರದ, ಸಮಾನ ರೀತಿಯಲ್ಲಿ ಕಾಣಲಾಗದ ಪುರುಷನಿಗೆ ಕಾಲ್ಪನಿಕ, ಪೌರಾಣಿಕ ಕಟ್ಟುಕತೆಯ ಮೂಲಕವೇ ಸ್ತ್ರೀಯನ್ನು ಗೌರವಿಸುವಂತೆ ಮಾಡಬೇಕಾಗುತ್ತದಾ?

ಇನ್ನು ನಮ್ಮ ಭಾರತೀಯ ಸಂಸ್ಕೃತಿಯ ಪೌರಾಣಿಕತೆಯ ಹಿನ್ನೆಲೆಯಲ್ಲಿ ಶಕ್ತಿ ಪರಿಕಲ್ಪನೆಯನ್ನು ನೋಡಿದರೆ, ಜಗತ್ತನ್ನು ಸೃಷ್ಟಿಸುವ ಮೂಲವನ್ನೇ 'ಶಕ್ತಿ' ಎಂದು ಗುರುತಿಸಲಾಗುತ್ತದೆ. ಅಗೋಚರವಾದ ಶಕ್ತಿಯಿಂದ ಜಗತ್ತು ಉಗಮವಾಗಿದೆ. ಅದು ಜಗತ್ತನ್ನು ನಿಯಂತ್ರಿಸುತ್ತಾ ಲಯಗೊಳಿಸುತ್ತದೆ ಎಂದು ನಂಬಲಾಗುತ್ತದೆ. ಆ ಶಕ್ತಿಯನ್ನು ಹುಡುಕುವ, ಒಲಿಸಿಕೊಳ್ಳುವ, ಅದೇ ಶಕ್ತಿಯನ್ನು ಪಡೆಯುವ, ಅದರಲ್ಲೇ ಮುಕ್ತಿ ಹೊಂದುವ ಪ್ರಯತ್ನಗಳು ನಡೆದಾಗ, ಶಕ್ತಿಯು ಆಧ್ಯಾತ್ಮಿಕ ನೆಲೆಯನ್ನು ಪಡೆಯುತ್ತದೆ.

ಲಿಂಗದ ಆಯಾಮವನ್ನು ಹೊಂದಿರುವ ಶಕ್ತಿ ಪರಿಕಲ್ಪನೆಯು ಸ್ತ್ರೀ–ಪುರುಷ ಬಲಾಬಲವನ್ನು ಗುರುತಿಸುತ್ತದೆ. ಪ್ರಕೃತಿದತ್ತವಾಗಿ ಸ್ತ್ರೀಗೆ ಬಂದಿರುವ ಸಂತಾನೋತ್ಪತ್ತಿ ಕ್ರಿಯೆಯನ್ನು ಸೃಷ್ಟಿಯ ಮೂಲವೆಂದು ಪರಿಗಣಿಸಿ ಅವಳನ್ನು 'ಶಕ್ತಿ' ಎಂದು ಗುರುತಿಸಲಾಗುತ್ತದೆ. ಪುರುಷನೂ ಸೇರಿದಂತೆ ಸಕಲ ಜೀವಾಚರ ವಸ್ತುಗಳನ್ನು ಸೃಷ್ಟಿಸುವ ಆದಿಶಕ್ತಿಯನ್ನು ಸ್ತ್ರೀಲಿಂಗದ ರೂಪದಲ್ಲಿ ನೋಡಲಾಗುತ್ತದೆ. ಇಲ್ಲಿ ಸ್ತ್ರೀ ಪುರುಷರಿಗಿಂತ ಬಲಾಢ್ಯಳು, ಪುರುಷ ಅವಳ ಅಧೀನ, ಅವನನ್ನು ನಿಯಂತ್ರಿಸುವವಳು ಎಂದು ತಿಳಿಯುವುದರಿಂದ ಪುರುಷ ಅವಳನ್ನು ಪೂಜಿಸುತ್ತಾನೆ, ಆರಾಧಿಸುತ್ತಾನೆ, ಆವಾಹನೆ ಮಾಡಿಕೊಂಡು ತಾನು ಶಕ್ತಿವಂತನಾಗುತ್ತಾನೆ ಎಂದು ತಿಳಿಯಲಾಗುತ್ತದೆ.

ಶಕ್ತಿಯ ಆಯಾಮ ಯಾವುದೇ ಇರಲಿ, ಮೇಲಿನ ಅಂಶಗಳಿಂದ ತಿಳಿದು ಬರುವ ಒಂದು ಮುಖ್ಯ ಅಂಶವೆಂದರೆ 'ಶಕ್ತಿ'ಯು ಶ್ರೇಣೀಕೃತವಾಗಿ ಅಸಮಾನತೆಯ ಸ್ವರೂಪವನ್ನು ಹೊಂದಿದೆ. ಹಾಗಾಗಿ ಅದು ಎಲ್ಲೆಲ್ಲಿ ಹಾದುಹೋಗುತ್ತದೋ ಅಲ್ಲೆಲ್ಲ ಅಸಮಾನತೆಯ ಬೀಜವನ್ನು ಬಿತ್ತುತ್ತಾ ಬೆಳೆಸುತ್ತದೆ. ಪ್ರಸ್ತುತ ಜಂಡರ್ ಆಯಾಮಕ್ಕೆ ಕೇಂದ್ರೀಕರಿಸಿ ಶಕ್ತಿ ಪರಿಕಲ್ಪನೆಯನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಆಧುನಿಕ ಚಿಂತನೆಯ ಹಿನ್ನೆಲೆಯಲ್ಲಿ 'ಶಕ್ತಿ' ಪದವನ್ನು ಇಂಗ್ಲಿಷಿನ 'ಪವರ್' ಪದಕ್ಕೆ ಸಮನಾರ್ಥಕವಾಗಿ ಬಳಸಲಾಗುತ್ತದೆ. ಇದರಿಂದ ಪವರ್ ಪದದ ನಿಘಂಟಿನ ಅರ್ಥವನ್ನು ನೋಡಿದರೆ ಬಲ, ನಿಯಂತ್ರಣ, ಕಾರ್ಯಶಕ್ತಿ, ಅಧಿಕಾರ, ಯಾಂತ್ರಿಕ ಶಕ್ತಿ, ಸಾಮರ್ಥ್ಯ ಎಂಬ ಅರ್ಥಗಳು ದೊರಕುತ್ತವೆ. ಯಾರಲ್ಲಿ ಬಲ, ಸಾಮರ್ಥ್ಯ, ಅಧಿಕಾರವಿರುತ್ತದೋ ಅವರು ಶಕ್ತರು, ಶಕ್ತಿವಂತರು ಎಂದು ಕರೆಸಿಕೊಳ್ಳುತ್ತಾರೆ. ಇಲ್ಲದವರು ಅಶಕ್ತರು, ದುರ್ಬಲರು, ಅಧಿಕಾರ ಇಲ್ಲದವರು ಎಂದು ಗುರುತಿಸಲ್ಪಡುತ್ತಾರೆ.

ಶಕ್ತಿಯನ್ನು ಅಧಿಕಾರ ಎಂಬರ್ಥದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಅಧಿಕಾರ ಎಂದರೆ ಒಬ್ಬ ವ್ಯಕ್ತಿ ಅಥವಾ ಗುಂಪು ಇನ್ನೊಬ್ಬ ವ್ಯಕ್ತಿ ಅಥವಾ ಗುಂಪನ್ನು ನಿಯಂತ್ರಿಸುವುದು. ಇತರರನ್ನು ತಾವು ಹೇಳಿದಂತೆ ತಮ್ಮ ಇಚ್ಛೆಗೆ ತಕ್ಕಂತೆ ಅವರ ಇಚ್ಛೆಗೆ ವಿರುದ್ಧವಾಗಿ ನಡೆಸಿಕೊಳ್ಳುವುದು, ಪ್ರಭಾವಿಸುವುದೆ ಶಕ್ತಿ. ಶಕ್ತಿಯ ಪ್ರದರ್ಶನವು ಗುಂಪು, ಜಾತಿ, ವರ್ಗ, ಜನಾಂಗ, ಸಮುದಾಯ ರಾಜ್ಯ ರಾಷ್ಟ್ರಗಳ ನಡುವೆ ಕಂಡುಬರುತ್ತದೆ. ವಿವಿಧ ಕ್ಷೇತ್ರ, ಹಂತ, ಸ್ವರೂಪಗಳಲ್ಲಿ ಶಕ್ತಿ/ಅಧಿಕಾರದ ಪ್ರಯೋಗವಾಗುತ್ತದೆ. ವ್ಯಕ್ತಿಗಳು, ಗುಂಪುಗಳು ಅಧಿಕಾರವನ್ನು ಸ್ವಯಂ ಘೋಷಿಸಿಕೊಂಡಿರಬಹುದು ಅಥವಾ ಜನರು ನೀಡುವಂತೆ ಬಲಪ್ರಯೋಗ ಮಾಡಿರಬಹುದು ಅಥವಾ ಜನರೇ ತಾವೇ ದತ್ತವಾಗಿ ವಹಿಸಿಕೊಟ್ಟಿರಬಹುದು.

ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ರಾಜಕೀಯ ವಲಯಗಳಲ್ಲಿ ಅಧಿಕಾರ ಹರಡಿಕೊಂಡಿರುತ್ತದೆ. ಯಾವುದೇ ವಲಯ ಹಂತವಿರಲಿ ಅಧಿಕಾರ ಮತ್ತು ಶಕ್ತಿಯು ಮೂರು ಮುಖ್ಯ ಅಂಶಗಳನ್ನು ಒಳಗೊಂಡಿರುತ್ತದೆ. ಸ್ವಂತಿಕೆ, ಸಂಪನ್ಮೂಲ ಮತ್ತು ನಿರ್ಧಾರ ಕೈಗೊಳ್ಳುವಿಕೆ, ಯಾವ ವ್ಯಕ್ತಿಗೆ ಈ ಮೂರು ಅಂಶಗಳ ಮೇಲೆ ನಿಯಂತ್ರಣದಲ್ಲಿರುತ್ತದೊ ಅವಳು/ಅವನು ಸಶಕ್ತ ಮಹಿಳೆ/ಪುರುಷ ಎಂದು ಕರೆಸಿಕೊಳ್ಳುತ್ತಾರೆ. ಇವರು ಈ ಶಕ್ತಿಯನ್ನು ಬಳಸಿಕೊಂಡು ಇತರರನ್ನು ನಿಯಂತ್ರಿಸಬಹುದು, ಅಧಿಕಾರ ಚಲಾಯಿಸಬಹುದು. ಕೆಲವೊಮ್ಮೆ ಇದು ಎಷ್ಟು ಸಹಜವಾಗಿ ನಡೆಯುತ್ತಿರುತ್ತದೆ ಎಂದರೆ ಶಕ್ತಿ ಪ್ರಯೋಗ ಮಾಡುವವರು ಪ್ರಯೋಗಿಸಿಕೊಳ್ಳುವವರಿಬ್ಬರೂ ಆಂತರೀಕರಿಸಿಕೊಂಡು ಅಂತರ್ಗತ ಮಾಡಿಕೊಂಡಿರುತ್ತಾರೆ.

## ಅಮರ್ತ್ಯ ಸೇನ್ ಅವರ ಸಾಮರ್ಥ್ಯ ಪರಿಕಲ್ಪನೆ ಮತ್ತು ಸಶಕ್ತೀಕರಣ

ವ್ಯಕ್ತಿಯಲ್ಲಿ ಶಕ್ತಿ ಅಥವಾ ಬಲವನ್ನು ತುಂಬುವ ಕ್ರಿಯೆಗೆ ಅಮರ್ತ್ಯ ಸೇನ್ ಹೇಳುವ 'ಸಾಮರ್ಥ್ಯ ಪ್ರಕ್ರಿಯೆ'ಯನ್ನು ಇಲ್ಲಿ ಹೆಸರಿಸಬಹುದು. ವ್ಯಕ್ತಿಗಳು ಶಕ್ತರಾಗಲು ಅನೇಕ ಅಂಶಗಳು ಕಾರಣವಾಗುತ್ತವೆ. ಅವುಗಳಲ್ಲಿ ಸೇನ್ ಅವರು ಮುಖ್ಯ ಅಂಶಗಳನ್ನು ಗುರುತಿಸುತ್ತಾರೆ.

೧. ವ್ಯಕ್ತಿಯ ಶಾರೀರಿಕ ಸ್ವಚ್ಛತೆ, ಕಾಯಿಲೆ, ಅಂಗವಿಕಲತೆ, ವಯಸ್ಸು ಮತ್ತು ಜಂಡರ್ ಈ ಅಂಶಗಳು ವ್ಯಕ್ತಿಯ ದೈಹಿಕ ಸ್ಥಿತಿಯನ್ನು ನಿರ್ಣಯಿಸುತ್ತದೆ. ದೈಹಿಕ ರಚನೆ ಸುಸ್ಥಿತಿಯಲ್ಲಿದ್ದರೆ ಬೆಳವಣಿಗೆ ಪೂರಕವಾಗಿ ವ್ಯಕ್ತಿಯನ್ನು ಶಕ್ತವಾಗಿಸುತ್ತದೆ.

೨. ಭೌಗೋಳಿಕ/ ಪ್ರಾಕೃತಿಕ ವಾತಾವರಣವು ವ್ಯಕ್ತಿಯ ಶಕ್ತತೆ/ ಅಶಕ್ತತೆ ಕಾರಣವಾಗುತ್ತದೆ. ಉದಾ: ಹವಾಗುಣ ಮಾಲಿನ್ಯ, ಶೀತಪ್ರದೇಶ, ಮರುಭೂಮಿ ಮುಂತಾದವು ಜನರ ಜೀವನದ ಮೇಲೆ ಪ್ರಭಾವ ಬೀರುತ್ತವೆ.

೩. ಸಾಮಾಜಿಕ ಸ್ಥಿತಿಗತಿ–ಧಾರ್ಮಿಕ, ಜನಾಂಗೀಯತೆ, ಜಾತಿ ಮತ್ತು ವರ್ಗ ವ್ಯವಸ್ಥೆ, ಶಿಕ್ಷಣಮಟ್ಟ, ಸುರಕ್ಷತೆ, ಸಾಮಾಜಿಕ ಸಂಬಂಧಗಳು ಜನರ ಸಾಮರ್ಥ್ಯವನ್ನು ಪ್ರಭಾವಿಸುತ್ತವೆ, ರೂಪಿಸುತ್ತವೆ.

೪. ಜನರ ಮನೋಭಾವ ದೃಷ್ಟಿಕೋನ, ಇವುಗಳನ್ನು ಕಟ್ಟಿಕೊಡುವ ನಂಬಿಕೆ ಆಚರಣೆ ಪದ್ಧತಿ, ಪರಂಪರೆಗಳು, ಜನರ ನಡವಳಿಕೆ, ನಿರೀಕ್ಷೆ, ಆಹಾರ, ಉಡುಪು, ವಸ್ತುಗಳ ಸೇವನೆ ಇವುಗಳಲ್ಲಿ ಜನರ ಸಾಮರ್ಥ್ಯವನ್ನು ಬೆಳಸುವಲ್ಲಿ ಕುಗ್ಗಿಸುವಲ್ಲಿ ಪಾತ್ರವಹಿಸುತ್ತವೆ.

೫. ಕುಟುಂಬದೊಳಗಿನ ಸದಸ್ಯರ ನಡುವಿನ ಅಧಿಕಾರದ ಹಂಚಿಕೆ, ಆಹಾರ, ಆರೋಗ್ಯ ಸೇವೆ, ಆದಾಯ, ಸಂಪನ್ಮೂಲಗಳ ಲಭ್ಯತೆ, ಹಂಚಿಕೆಯೂ ಸಾಮರ್ಥ್ಯವನ್ನು ಬೆಳೆಸುತ್ತದೆ.

ಸೇನ್ ಅವರ ಸಾಮರ್ಥ್ಯ ಪರಿಕಲ್ಪನೆಯು ಜನರು ಶಕ್ತರೋ, ಅಶಕ್ತರೋ ಅನ್ನುವುದನ್ನು ಗುರುತಿಸಿ ಅವರನ್ನು ಸಶಕ್ತರನ್ನಾಗಿಸಲು ಏನು ಮಾಡಬೇಕು ಅನ್ನುವುದನ್ನು ಸೂಚಿಸುತ್ತದೆ.

ನಿಯಂತ್ರಣ, ಅಧಿಕಾರಕ್ಕೊಳಪಡುವವರು ಅಶಕ್ತರಾಗಿರುತ್ತಾರೆ. ಅಂತಹವರಲ್ಲಿ ಶಕ್ತಿಯನ್ನು ಸೃಷ್ಟಿಸಬೇಕಾಗುತ್ತದೆ, ತುಂಬಬೇಕಾಗುತ್ತದೆ. ಇದೇ ಸಶಕ್ತೀಕರಣವೆನಿಸಿಕೊಳ್ಳುತ್ತದೆ. ಸ್ವಂತಿಕೆ, ಸಂಪನ್ಮೂಲ, ನಂಬಿಕೆ, ಮೌಲ್ಯಗಳ ಕಟ್ಟುವಿಕೆ, ನಿರ್ಧಾರ ಕೈಗೊಳ್ಳುವಿಕೆಗಳು ಶಕ್ತಿಯ ಮೂಲಗಳಾದರೆ ಇವುಗಳನ್ನು ಕೆಲವರು ಜನ್ಮತಃವೋ, ಕುಟುಂಬದಿಂದಲೋ, ಸ್ವಪ್ರಯತ್ನದಿಂದಲೋ, ಅದೃಷ್ಟದಿಂದಲೋ ಪಡೆದುಕೊಳ್ಳಬಹುದು. ಇನ್ನು ಕೆಲವರು ಇವುಗಳಿಲ್ಲದೆ ಶಕ್ತಿಯನ್ನು ಪಡೆಯದಿರಬಹುದು. ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಕಾರಣಗಳಿಂದ ಶಕ್ತಿಯಿಂದ ವಂಚಿತರಾಗಬಹುದು. ಅಂತಹವರ ವಿಷಯದಲ್ಲೇ 'ಸಶಕ್ತೀಕರಣ ಪ್ರಕ್ರಿಯೆ'ಯ ಆವಶ್ಯಕತೆ ಉಂಟಾಗುವುದು.

ಶಕ್ತಿಯು ಒಂದು ಪರಿಕಲ್ಪನೆಯಾಗಿ ವಿವಿಧ ಸ್ವರೂಪಗಳನ್ನು ಪಡೆಯುತ್ತದೆ. ಸ್ವಶಕ್ತಿಯನ್ನು ಗುರುತಿಸಿಕೊಂಡು, ಇದ್ದರೆ ಬಳಸಿಕೊಳ್ಳಬೇಕು ಇಲ್ಲದಿದ್ದರೆ ಸೃಷ್ಟಿಸಿಕೊಳ್ಳಬೇಕು. ನಮ್ಮಲ್ಲಿರುವ ಶಕ್ತಿ ಸಾಮರ್ಥ್ಯವನ್ನು ಇತರರೊಂದಿಗೆ ಹಂಚಿಕೊಳ್ಳುವುದು, ಇತರರಲ್ಲಿ ಶಕ್ತಿಯನ್ನು ಬೆಳೆಸುವುದು, ಇತರರಲ್ಲಿರುವ ಶಕ್ತಿಯನ್ನು ಗುರುತಿಸುವುದು ಸಕರಾತ್ಮಕ ಶಕ್ತಿಯಾದರೆ; ಇತರರನ್ನು ನಿಯಂತ್ರಿಸುವುದು, ಅಧಿಕಾರ ಚಲಾಯಿಸುವುದು ಅಧಿಕಾರ ಬಳಿಸಿಕೊಂಡು ಶೋಷಿಸುವುದು ದೌರ್ಜನ್ಯ ನಡೆಸುವಂತಹ ಶಕ್ತಿಯು ನಕಾರಾತ್ಮಕವಾದುದು. ಇದು ಸಲ್ಲದು. ಏಕೆಂದರೆ ಇದು ಶೋಷಣೆ, ಹಿಂಸೆ, ಅಸಮಾನತೆಗೆ ಕಾರಣವಾಗುತ್ತದೆ. ಸಮಾಜವಾದ ಹಾಗೂ ಉದಾರವಾದದ ನೆಲೆಯಲ್ಲಿ 'ಶಕ್ತಿ'ಯು ಸಮಾನತೆ, ಹಂಚಿಕೆ, ಸ್ವಾತಂತ್ರ್ಯ, ಹಕ್ಕು, ಅಹಿಂಸೆಯ ತತ್ತ್ವಗಳನ್ನು ಅನುಸರಿಸಿಕೊಂಡು ನಡೆಯುತ್ತದೆ. ಇಲ್ಲದೆ ಹೋದರೆ ಇದುವರೆಗು ಹೇಗೆ ಕೆಲವು ವ್ಯಕ್ತಿಗಳು, ಕೆಲವು ಗುಂಪುಗಳು ಶಕ್ತಿಪ್ರಯೋಗ ಮಾಡಿಕೊಂಡು ಇತರರನ್ನು ಶೋಷಿಸುತ್ತಿವೆಯೋ ಅದೇ ಶಕ್ತಿಯನ್ನು ಪಡೆದುಕೊಂಡವರು ಮಾಡುವಂತಾಗುತ್ತದೆ. ಆಗ ಸಶಕ್ತೀಕರಣದ ಪ್ರಕ್ರಿಯೆಗೆ ಅರ್ಥ ಬರುವುದಿಲ್ಲ.

## ಸಶಕ್ತೀಕರಣ ಪರಿಕಲ್ಪನೆ

'ಶಕ್ತಿ' ಪರಿಕಲ್ಪನೆಯ ಸುತ್ತ ನಡೆಯುವ ಕ್ರಿಯೆಯೇ ಸಶಕ್ತೀಕರಣ. ಸಶಕ್ತೀಕರಣವು ಒಂದು ಪರಿಕಲ್ಪನೆಗಿಂತ ಹೆಚ್ಚಾಗಿ ಒಂದು ಪ್ರಕ್ರಿಯೆಯಾಗಿದೆ. ಅಂದರೆ ವ್ಯಕ್ತಿಗಳು ಶಕ್ತಿಯನ್ನು ಹೊಂದುವಂತೆ ಮಾಡುವ ಕ್ರಿಯೆಯೇ ಸಶಕ್ತೀಕರಣವೆನಿಸಿಕೊಳ್ಳುತ್ತದೆ. ಶಕ್ತಿಯನ್ನು ಹೊಂದುವಂತೆ ಮಾಡುವುದು ಎನ್ನುವುದು ಅವರು ಅಶಕ್ತ, ಶಕ್ತಿ ಇಲ್ಲದವರು ಅನ್ನುವುದನ್ನು ಸೂಚಿಸುತ್ತದೆ. ಏಕೆ ಅಶಕ್ತರಾಗಿದ್ದಾರೆ, ಅಶಕ್ತತೆಯ ಸ್ವರೂಪವೇನು, ಅವರನ್ನು ಹೇಗೆ ಸಶಕ್ತಗೊಳಿಸಬೇಕು ಅನ್ನುವುದನ್ನು 'ಶಕ್ತಿ' ಪರಿಕಲ್ಪನೆಯ ಅರ್ಥ, ಆಯಾಮಗಳನ್ನು ಅನ್ವಯಿಸಿಕೊಂಡು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಇಂಗ್ಲಿಷ್‌ನ 'ಎಂಪವರ್‌ಮೆಂಟ್' ಶಬ್ದಕ್ಕೆ ಕನ್ನಡದಲ್ಲಿ 'ಸಶಕ್ತೀಕರಣ ಅಥವಾ ಸಬಲೀಕರಣ' ಪದವನ್ನು ಸಮನಾರ್ಥವಾಗಿ ಬಳಸಲಾಗುತ್ತದೆ. ಅರ್ಥಕೋಶದಲ್ಲಿ ಎಂಪವರ್‌ಮೆಂಟ್‌ಗೆ 'ಶಕ್ತಿಕೊಡು', 'ಅಧಿಕಾರ ವಹಿಸು', 'ಕಾನೂನು ಹಕ್ಕುಗಳನ್ನು ನೀಡು', 'ಸಮರ್ಥ ಮಾಡು', 'ಅರ್ಹತೆಯನ್ನು ನೀಡು', 'ಆಸ್ತಿಕೊಡು', 'ಹೆಸರು ನೀಡು ಬಿರುದು ಕೊಡು' ಎಂದು ಅರ್ಥ ನೀಡಲಾಗಿದೆ. ಅಂದರೆ ಯಾರಲ್ಲಿ 'ಶಕ್ತಿ', 'ಅರ್ಹತೆ' 'ಸಾಮರ್ಥ್ಯ'ದ ಕೊರತೆಯಿದೆಯೋ (ಸಂಪೂರ್ಣವಾಗಿ ಏನೂ ಇಲ್ಲ ಎಂಬ ಅರ್ಥವಲ್ಲ, ಪ್ರತಿಯೊಬ್ಬರಲ್ಲೂ ಶಕ್ತಿ ಸಾಮರ್ಥ್ಯ ಅದೃಶ್ಯವಾಗಿರುತ್ತದೆ. ಅದನ್ನು ಬೆಳಕಿಗೆ ತರಬೇಕು, ಪುಷ್ಟೀಕರಿಸಬೇಕು) ಅದನ್ನು ತುಂಬುವ ಕಾರ್ಯವೇ ಸಶಕ್ತೀಕರಣ.

ಸಶಕ್ತೀಕರಣವು ದುರ್ಬಲ ವರ್ಗದವರು, ಅಂಚಿಗೆ ತಳ್ಳಲ್ಪಟ್ಟು ನಿರ್ಲಕ್ಷ್ಯಕ್ಕೆ ಒಳಗಾದವರು, ಬಡವರು, ಅವಕಾಶ ವಂಚಿತರು, ಅನನುಕೂಲ ಪರಿಸ್ಥಿತಿಯಲ್ಲಿರುವ ಜನರಿಗೆ ಸಂಬಂಧಿಸಿದಂತೆ ಹೆಚ್ಚಾಗಿ ಬಳಕೆಯಾಗುತ್ತದೆ. ವಿವಿಧ ಕಾರಣಗಳಿಂದ ಭೌಗೋಳಿಕ, ಧಾರ್ಮಿಕ, ಐತಿಹಾಸಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳಿಂದ ಕೆಲವು ಗುಂಪಿನ ಜನರು ಅವಕಾಶ ವಂಚಿತರಾಗುತ್ತಾರೆ, ದುರ್ಬಲರಾಗುತ್ತಾರೆ. ಅಂತಹವರಲ್ಲಿ ಶಕ್ತಿ ತುಂಬಿ ಅವರಿಗೆ ಅವಕಾಶ ಕಲ್ಪಿಸುವ, ಕಲ್ಪಿಸಿಕೊಳ್ಳುವಂತೆ ಸಾಮರ್ಥ್ಯ ಬೆಳೆಸುವ ಕ್ರಿಯೆಯೇ ಸಶಕ್ತೀಕರಣ. ಇಂತಹ ಗುಂಪುಗಳಲ್ಲಿ ಅನೇಕ ತರಹದ ಜನರು ಬರುತ್ತಾರೆ. ಬಡವರು, ಗ್ರಾಮೀಣ ಜನರು, ಕೊಳಚೆ ಪ್ರದೇಶದ ಜನರು, ಅನಕ್ಷರಸ್ಥರು, ದೈಹಿಕ ಕೆಲಸ ಮಾಡುವ ಅಸಂಘಟಿತ ವಲಯದ ಜನರು, ಬುಡಕಟ್ಟು ಜನರು, ಅಂಗವಿಕಲರು, ಬುದ್ಧಿಮಾಂದ್ಯರು, ವೃದ್ಧರು, ಜಾತಿ ಹೆಸರಿನಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದವರು,

ಭೌಗೋಳಿಕ ವಿಕೋಪಗಳಿಗೆ ಒಳಗಾದವರು, ಅನಾಥರು, ಮೂರನೇ ಜಂಡರ್‌ನವರು, ನಿರಾಶ್ರಿತರು, ಮುಂತಾದವರು. ಮಹಿಳೆಯರನ್ನು ಇಂತಹ ಗುಂಪಿಗೆ ಸೇರಿಸಲಾಗುತ್ತದೆ. ಸೇರುತ್ತಾರೋ ಇಲ್ಲವೋ ಅನ್ನುವುದನ್ನು 'ಮಹಿಳಾ ಸಶಕ್ತೀಕರಣ' ಭಾಗದಲ್ಲಿ ನೋಡೋಣ. ಇವರೆಲ್ಲರು ಜಾತಿ, ವರ್ಗ, ಜಂಡರ್, ಪ್ರಾದೇಶಿಕತೆ, ಧರ್ಮ, ದುಡಿಮೆ, ಭೌಗೋಳಿಕ ಪರಿಸರ, ಹವಾಗುಣ, ಮುಂತಾದ ನೆಲೆಗಟ್ಟಿನಲ್ಲಿ ಅಂಚಿಗೆ ತಳ್ಳಲ್ಪಟ್ಟಿರುತ್ತಾರೆ. ಇವರು ಸಮಾಜದ ಪ್ರಮುಖ ಭಾಗವಾಗಿರುವುದರಿಂದ ಇವರನ್ನು ಬಿಟ್ಟು ಸಮಾಜದ ಸಂಪೂರ್ಣ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ. ಇವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಬೇಕು. ಇವರು ಎರಡು ರೀತಿಯಲ್ಲಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಹಭಾಗಿಗಳಾಗಿ, ಪಾಲುದಾರರಾಗಿ ಪಾಲ್ಗೊಳ್ಳಬೇಕು ಮತ್ತು ಅಭಿವೃದ್ಧಿಯ ಲಾಭವನ್ನು ಪಡೆಯಬೇಕು. ಎರಡಕ್ಕೂ ಅವರನ್ನು ಸಿದ್ಧಗೊಳಿಸುವ ಕಾರ್ಯವೇ ಸಶಕ್ತೀಕರಣ.

ಹೇಗೆ ಇವರು ಬೇರೆ ಬೇರೆ ಕಾರಣಗಳಿಂದ ಅಶಕ್ತರಾಗಿದ್ದಾರೋ ಹಾಗೆಯೇ ಇವರನ್ನು ಸಶಕ್ತಗೊಳಿಸಲು ಅನುಸರಿಸುವ ವಿಧಾನ, ಕಾರ್ಯತಂತ್ರಗಳು ಸಶಕ್ತೀಕರಣದ ಪ್ರಕ್ರಿಯೆಯ ಸ್ವರೂಪ, ಗುರಿಗಳು ಕೂಡ ಭಿನ್ನವಾಗಿರುತ್ತವೆ. ಅರ್ಥೈಸುವ, ವ್ಯಾಖ್ಯಾನಿಸುವ ರೀತಿಯೂ ಭಿನ್ನವಾಗಿರುತ್ತದೆ. ಅಂದರೆ ಎಲ್ಲಾ ಗುಂಪಿನ ಸಶಕ್ತೀಕರಣದ ಅರ್ಥ, ಸ್ವರೂಪ. ಕಾರ್ಯತತ್ವ, ಗುರಿಗಳು ಒಂದೇ ರೀತಿಯಿರುವುದಿಲ್ಲ. ಹಾಗಾಗಿ ವಿವಿಧ ಕ್ಷೇತ್ರದವರು, ನೀತಿನಿರೂಪಕರು, ಹೋರಾಟದ ಕಾರ್ಯಕರ್ತರು, ಅಭಿವೃದ್ಧಿ ಆರ್ಥಿಕ ತಜ್ಞರು, ಧನಸಹಾಯ ನೀಡುವ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳವರು, ವಿಷಯ, ಕಾಲ, ಗುಂಪು, ದೇಶ, ಪ್ರದೇಶಗಳಿಗೆ ಸಂಬಂಧಿಸಿದಂತೆ ಸಶಕ್ತೀಕರಣವನ್ನು ವ್ಯಾಖ್ಯಾನಿಸಬೇಕಾಗುತ್ತದೆ. ಅದರ ಗುರಿ, ಸ್ವರೂಪ, ಕಾರ್ಯತಂತ್ರಗಳನ್ನು ಹೊಣೆ ಹೊತ್ತಿರುವವರು ನಿರ್ಧರಿಸಬೇಕು. ಅವರು ಸಶಕ್ತಗೊಳಿಸುತ್ತಿರುವ ಜನರ ಯಾವ ಆವಶ್ಯಕತೆಗಳನ್ನು ಪೂರೈಸಬೇಕು, ಯಾವ ತಂತ್ರ ವಿಧಾನಗಳನ್ನು ಅಳವಡಿಸಿಕೊಂಡರೆ ಅವರು ಸಶಕ್ತರಾಗುತ್ತಾರೆ ಎನ್ನುವುದನ್ನು ನಿರ್ಣಯಿಸಬೇಕು.

ಸಶಕ್ತೀಕರಣವು ನಿರಂತರವಾಗಿ ನಡೆಯುವ ಚಲನಶೀಲ ಪ್ರಕ್ರಿಯೆಯಾಗಿದೆ. ಈಗಿರುವ ಅಧಿಕಾರ ರಚನೆ, ಅಧಿಕಾರ ಸಂಬಂಧ ಎಲ್ಲರನ್ನು ಎಲ್ಲಿಯವರೆಗೆ ಒಳಗೊಳ್ಳುವುದಿಲ್ಲವೋ, ಒಳಗೊಳ್ಳುವಂತೆ ಮಾಡುವವರೆಗೆ ಸಶಕ್ತೀಕರಣ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಅಂಚಿಗೆ ತಳ್ಳಲ್ಪಟ್ಟ, ಹೊರಗಿಡಲ್ಪಟ್ಟ ಜನರು ತಮ್ಮ ಅಧೀನತೆಗೆ, ಪರಕೀಯತೆಗೆ ಕಾರಣವಾಗುವ ಸಾಮಾಜಿಕ ರಚನೆ ಮತ್ತು ವಿಚಾರಧಾರೆಗಳನ್ನು ಅರ್ಥಮಾಡಿಕೊಂಡು, ಬದಲಾಯಿಸುವಂತೆ ಮಾಡಲು,

ಅವರನ್ನು ಸಮರ್ಥರನ್ನಾಗಿ ಮಾಡುವುದೇ ಸಶಕ್ತೀಕರಣ. ಸಶಕ್ತೀಕರಣವು ಅಧಿಕಾರಕ್ಕೆ ಸಂಬಂಧಪಟ್ಟಿದ್ದು, ವ್ಯಕ್ತಿ ಹಾಗೂ ಗುಂಪುಗಳ ನಡುವಿನ ಅಧಿಕಾರ ಸಂಬಂಧ, ಹಂಚಿಕೆ, ಪುನರ್ ಹಂಚಿಕೆಯನ್ನು ಪ್ರತಿಪಾದಿಸುತ್ತದೆ.

ಸಶಕ್ತೀಕರಣ ಹಾಗೂ 'ಒಳಗೊಳ್ಳುವಿಕೆ' ಪರಿಕಲ್ಪನೆಗಳು ಒಂದಕ್ಕೊಂದು ಪೂರಕವಾಗಿದೆ. ಸಶಕ್ತೀಕರಣವು ಹೊರಗಿಡಲ್ಪಟ್ಟ ಅಥವಾ ಅಂಚಿಗೆ ತಳ್ಳಲ್ಪಟ್ಟ ಗುಂಪಿನವರಲ್ಲಿ ಸಾಮರ್ಥ್ಯವನ್ನು ತುಂಬುವ ಪ್ರಕ್ರಿಯೆ. ಇದು ಕೆಳಗಿನಿಂದ ಮೇಲಕ್ಕೆ ಚಲಿಸುವ ವಿಧಾನವಾಗಿದೆ. ಒಳಗೊಳ್ಳುವಿಕೆಯು ಮೇಲಿನಿಂದ ಕೆಳಗೆ ಚಲಿಸುವ ವಿಧಾನವಾಗಿದ್ದು, ಇದರಲ್ಲಿ ಹೊರಗಿಡಲ್ಪಟ್ಟ ಜನರು ಹಕ್ಕು, ಸಮಾನತೆ, ಅವಕಾಶಗಳನ್ನು ಪಡೆದುಕೊಳ್ಳುವಂತೆ ವಾತಾವರಣವನ್ನು ಸೃಷ್ಟಿಸುವ ಪ್ರಯತ್ನ ನಡೆಯುತ್ತದೆ. ಇವರೆಡೂ ವಿಧಾನಗಳನ್ನು ಏಕಕಾಲದಲ್ಲಿ ಅಳವಡಿಸಿಕೊಂಡು ನಿರ್ಲಕ್ಷ್ಯಕ್ಕೊಳಗಾದ ಗುಂಪುಗಳನ್ನು ಸಮಾನತೆಯೆಡೆಗೆ ಕೊಂಡೊಯ್ಯಬೇಕು.

ಅಶಕ್ತರಲ್ಲಿ ಜಾಗೃತಿ ಮೂಡಿಸಿ ಅವರು ತಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ತಮಗೆ ಬೇಕಾಗಿರುವುದನ್ನು ಪಡೆಯಲು ಸಮರ್ಥರನ್ನಾಗಿಸುವ ಪ್ರಕ್ರಿಯೆಯೇ ಸಶಕ್ತೀಕರಣ. ಫಾಟೋ ಫ್ರಯರ್ ಅವರು ತಮ್ಮ 'ಜಾಗೃತೀಕರಣ' ಸಿದ್ಧಾಂತದಲ್ಲಿ ಬಡಜನರು ಹಾಗೂ ದುರ್ಬಲ ಜನರಿಗೆ ಸಂಬಂಧಿಸಿದಂತೆ ಚರ್ಚಿಸುವಾಗ ಸಶಕ್ತೀಕರಣ ಪರಿಕಲ್ಪನೆಯನ್ನು ಬಳಸಿದ್ದಾರೆ. "ಬಡವರು ಅಧಿಕಾರ ರಚನೆಯನ್ನು ಪ್ರಶ್ನಿಸಿ ತಮ್ಮ ಜೀವನವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವಂತೆ ಮಾಡುವ ಪ್ರಕ್ರಿಯೆಯ ಜಾಗೃತೀಕರಣ" ಎಂದು ವ್ಯಾಖ್ಯಾನಿಸಿದ್ದಾರೆ. ಜಾಗೃತೀಕರಣವನ್ನು ಅಂಚಿಗೆ ತಳ್ಳಲ್ಪಟ್ಟ ಇತರ ಗುಂಪಿನವರಿಗೂ ಅನ್ವಯಿಸಿಕೊಂಡು ಹೆಚ್ಚು ವಿಶಾಲಾರ್ಥದಲ್ಲಿ ಮೂಡಿಬಂದುದೇ ಸಶಕ್ತೀಕರಣ.

ಬೇರೆ ಬೇರೆ ಅಂಶಗಳಿಗೆ ಒತ್ತುಕೊಟ್ಟು ವಿವಿಧ ಕ್ಷೇತ್ರದ ವಿದ್ವಾಂಸರು ಸಶಕ್ತೀಕರಣವನ್ನು ವ್ಯಾಖ್ಯಾನಿಸಿದ್ದಾರೆ. ಸ್ತ್ರೀವಾದಿಗಳು, ಆರ್ಥಿಕ ತಜ್ಞರು, ಅಭಿವೃದ್ಧಿ ಚಿಂತಕರು, ಅನುದಾನ ನೀಡುವ ಸಂಸ್ಥೆಗಳು, ಸರ್ಕಾರದ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳವರು, ಸಮಾಜ ಕಾರ್ಯಕರ್ತರು, ಚಳವಳಿ ಕಾರ್ಯಕರ್ತರು ತಮ್ಮ ಕಾರ್ಯಕ್ಷೇತ್ರ, ಒತ್ತು ನೀಡಿದ ಅಂಶ, ತಾವು ಯಾವ ಬಗೆಗೆ, ಯಾವ ಗುಂಪಿನ ಜನರ ಬಗೆಗೆ ಮಾತನಾಡುತ್ತಿದ್ದೇವೆ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು ಸಂದರ್ಭಕ್ಕೆ ತಕ್ಕಂತೆ ಸಶಕ್ತೀಕರಣವನ್ನು ವ್ಯಾಖ್ಯಾನಿಸುತ್ತಾರೆ.

ಆ ಎಲ್ಲಾ ವ್ಯಾಖ್ಯೆಗಳ ಒಟ್ಟು ಸಾರವನ್ನು ಇಟ್ಟುಕೊಂಡು ಸಶಕ್ತೀಕರಣದ ಕೆಲವು ಲಕ್ಷಣ ಅಥವಾ ಘಟಕಗಳನ್ನು ಗುರುತಿಸಬಹುದು.

- ಸ್ವಾಯತ್ತತೆ
- ಜೀವನದ ಮೇಲೆ ನಿಯಂತ್ರಣ ಹೊಂದುವುದು.
- ಆಯ್ಕೆಯ ಹಕ್ಕನ್ನು ಪಡೆಯುವುದು.
- ಆತ್ಮವಿಶ್ವಾಸ ಹೊಂದುವುದು.
- ಸಂಪನ್ಮೂಲಗಳ ಲಭ್ಯತೆ.
- ಸಂಪನ್ಮೂಲಗಳ ಮೇಲೆ ನಿಯಂತ್ರಣ.
- ಪರಾಧೀನತೆಯಿಂದ ಹೊರಬರುವುದು.
- ಜನರು ತಮ್ಮದೇ ಕಾರ್ಯಸೂಚಿಗಳನ್ನು ರೂಪಿಸಿಕೊಳ್ಳುವುದು.
- ವೈಯಕ್ತಿಕ ಮತ್ತು ಸಾಮುದಾಯಿಕ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳುವುದು.
- ಅಸಮಾನತೆಯಿಂದ ಕೂಡಿದ ಅಧಿಕಾರ ಸಂಬಂಧವನ್ನು ಪ್ರಶ್ನಿಸುವುದು, ಅದನ್ನು ಪುನರ್ ಹಂಚಿಕೆ ಮಾಡುವುದು.
- ಜನರನ್ನು ಅಶಕ್ತಗೊಳಿಸುವ ಸಾಮಾಜಿಕ ರಚನೆಯನ್ನು ಬದಲಾಯಿಸುವುದು.
- ಸ್ವಂತದ ಅರಿವು, ಸಾಮಾಜಿಕ ಅರಿವು.
- ಮುಕ್ತ ಸಂಚಲನೆ ಹೊಂದುವುದು.
- ಕೌಶಲ್ಯ ಬೆಳೆಸಿಕೊಂಡು, ಉತ್ಪಾದನಾ ಶಕ್ತಿ ಹಾಗೂ ಆದಾಯ ಗಳಿಸುವುದು.
- ಹಕ್ಕುಗಳನ್ನು ರಕ್ಷಿಸಿಕೊಳ್ಳುವುದು.
- ಅನ್ಯಾಯ, ಶೋಷಣೆಯನ್ನು ಪ್ರತಿಭಟಿಸುವುದು.
- ನ್ಯಾಯ ಕೇಳುವುದು.
- ಸಾರ್ವಜನಿಕ ಚಟುವಟಿಕೆ ಹಾಗೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.
- ಬೇಡಿಕೆ, ಹಕ್ಕು, ಅಭಿಲಾಷೆಗಳನ್ನು ವ್ಯಕ್ತಪಡಿಸುವುದು. ಅವುಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುವುದು, ಈಡೇರಿಸಿಕೊಳ್ಳುವುದು.

* * * * *

## ಅಧ್ಯಾಯ –೨

# ಮಹಿಳಾ ಸಶಕ್ತೀಕರಣ: ವಿವಿಧ ಆಯಾಮಗಳು

ಮೂಲ ಪರಿಕಲ್ಪನೆಗಳಾದ ಶಕ್ತಿ ಮತ್ತು ಸಶಕ್ತೀಕರಣಗಳನ್ನು ಅರ್ಥ ಮಾಡಿಕೊಂಡ ನಂತರ ಮತ್ತೊಂದು ಪರಿಕಲ್ಪನೆ 'ಮಹಿಳಾ ಸಶಕ್ತೀಕರಣ'ವನ್ನು ವಿಶೇಷವಾಗಿ ಗಮನಿಸಬೇಕಾಗಿದೆ. 'ಮಹಿಳಾ ಸಶಕ್ತೀಕರಣ'ವನ್ನು ಪ್ರತ್ಯೇಕವಾಗಿ ಅರ್ಥಮಾಡಿಕೊಳ್ಳಬೇಕಾ? ಪ್ರತ್ಯೇಕವಾಗಿ ಏಕೆ ಚರ್ಚಿಸಬೇಕು? ಎಂಬ ಪ್ರಶ್ನೆಗಳು ಏಳುತ್ತವೆ. ಖಂಡಿತ ಬೇಕು. ಈ ಪರಿಕಲ್ಪನೆಯು, ವ್ಯಾಖ್ಯಾನಿಸುವುದರಿಂದ ಹಿಡಿದು ಅರ್ಥಮಾಡಿಕೊಳ್ಳುವುದು, ಮಹಿಳೆಯರಲ್ಲಿ ಪುರುಷರಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸುವುದು, ಅದರ ಸಾಮಾಜಿಕ, ಮಾನಸಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಆಯಾಮಗಳು, ಅದಕ್ಕಿರುವ ಅಡ್ಡಿಗಳು, ಪರಿಣಾಮಗಳು ತುಂಬ ಸಂಕೀರ್ಣವಾಗಿವೆ. ಒಂದು ಕಡೆ ಮಹಿಳೆಯರನ್ನು ಅಶಕ್ತರು ದುರ್ಬಲರು ಎಂದು ನೋಡಿದರೆ ಇನ್ನೊಂದು ಕಡೆ ಸೃಷ್ಟಿಕರ್ತೃಳು, ಆದಿಶಕ್ತಿ ಕುಟುಂಬದ ಕಣ್ಣು ಎಂದು ಪ್ರಬಲಶಕ್ತಿಯ ಸಂಕೇತವಾಗಿಯೂ ನೋಡಲಾಗುತ್ತದೆ. ಹೀಗಿರುವಾಗ ಮಹಿಳೆಯರನ್ನು ಅಶಕ್ತರೆಂದು ಪರಿಗಣಿಸಿ ಸಶಕ್ತಗೊಳಿಸಬೇಕೆ? ಈಗಾಗಲೆ ಸಶಕ್ತರಾಗಿದ್ದಾರೆಂದು ವೈಭವೀಕರಿಸಬೇಕೆ? ಆಲೋಚನೆ, ನಂಬಿಕೆ, ಮಾತು ಮತ್ತು ವಾಸ್ತವ ಇವುಗಳ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸಿ ಪ್ರಶ್ನಿಸಬೇಕೆ? ಎಂಬ ಪ್ರಶ್ನೆಗಳು ಮಹಿಳಾ ಸಶಕ್ತೀಕರಣವನ್ನು ಹೆಚ್ಚು ಅಮೂರ್ತ ಮತ್ತು ಸಂಕೀರ್ಣಗೊಳಿಸುತ್ತವೆ.

ಜಂಡರ್ ಆಯಾಮವನ್ನು ಹೊಂದಿರುವ 'ಶಕ್ತಿ' ಹಾಗೂ 'ಸಶಕ್ತೀಕರಣ' ಪರಿಕಲ್ಪನೆಗಳು 'ಮಹಿಳಾ ಸಶಕ್ತೀಕರಣ'ವನ್ನು ವಿಶೇಷವಾಗಿ ರೂಪಿಸುತ್ತವೆ. ಜೈವಿಕವಾಗಿ ಭಿನ್ನವಾಗಿರುವ ಜಂಡರ್ ಅಂಶಗಳ ಕಾರಣದಿಂದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪರಿಸ್ಥಿತಿಗಳಲ್ಲಿ ವಿಶಿಷ್ಟ ಸ್ಥಾನದಲ್ಲಿರುವ ಮಹಿಳೆಯರು ಅಶಕ್ತರಾಗುವ ಸಾಧ್ಯತೆ ಹೆಚ್ಚಿರುವುದರಿಂದ ಮಹಿಳಾ ಸಶಕ್ತೀಕರಣವು ಪುರುಷರದಕ್ಕಿಂತ ಭಿನ್ನವಾಗಿದ್ದು ಅದನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಪುರುಷರಲ್ಲಿ

ಅಶಕ್ತರಿರುವುದಿಲ್ಲವಾ? ಅವರನ್ನು ಸಶಕ್ತಗೊಳಿಸಬೇಕಲ್ಲವಾ? ಅವರನ್ನು ಸಶಕ್ತಗೊಳಿಸಬೇಕು. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗು ರಾಜಕೀಯ ಅಂಶಗಳಿಂದ ಪುರುಷರೂ ಅವಕಾಶ ವಂಚಿತರಾಗಿ, ಅಂಚಿಗೆ ತಳ್ಳಲ್ಪಟ್ಟು ಅಶಕ್ತರಾಗಿರುತ್ತಾರೆ. ಆದರೆ ಜಂಡರ್ ಕಾರಣಗಳಿಂದ ಮಹಿಳೆಯರಿಗಿಂತ ಶಕ್ತರಾಗಿರುತ್ತಾರೆ. ಪುರುಷರಾಗಿ ಕೆಲವು ಸವಲತ್ತುಗಳನ್ನು ಹೊಂದಿರುತ್ತಾರೆ. ಅನುಕೂಲ ಸ್ಥಿತಿಯಲ್ಲಿರುತ್ತಾರೆ. ಜಾತಿ, ಧರ್ಮ, ವರ್ಗ, ಪ್ರದೇಶ, ಕುಲ, ಜನಾಂಗೀಯ ಹಿನ್ನೆಲೆಯಲ್ಲಿ ಮಹಿಳೆಯರೊಂದಿಗೆ ದುರ್ಬಲರಾಗಿದ್ದರೂ ಜಂಡರ್ ಅಂಶದಿಂದ ಮೇಲಿನ ಸ್ಥಾನ, ವಿಶೇಷ ಸವಲತ್ತುಗಳನ್ನು ಅನುಭವಿಸುತ್ತಿರುತ್ತಾರೆ. ಇತರ ಅಂಶಗಳೊಂದಿಗೆ ಜಂಡರ್ ಕೂಡ ಸೇರಿ ಮಹಿಳೆಯರು ಹೆಚ್ಚು ಅಶಕ್ತರಾಗುವಂತೆ ಮಾಡುತ್ತವೆ. ಆದುದರಿಂದ ಮಹಿಳಾ ಸಶಕ್ತೀಕರಣವನ್ನು ಪುರುಷರದಕ್ಕಿಂತ ಭಿನ್ನವಾಗಿ ನೋಡಬೇಕಾಗಿರುತ್ತದೆ.

ಮಹಿಳಾ ಸಶಕ್ತೀಕರಣವನ್ನು ವಿಶೇಷವಾಗಿ ವ್ಯಾಖ್ಯಾನಿಸಿಕೊಂಡು ಬೇರೆ ಬೇರೆ ಆಯಾಮಗಳಲ್ಲಿ ಚರ್ಚಿಸಬೇಕಾಗಿರುತ್ತದೆ. 'ಸಶಕ್ತೀಕರಣದ' ವ್ಯಾಖ್ಯಾನ, ಲಕ್ಷಣ, ಘಟಕ, ಪ್ರಕಾರಗಳು ಮಹಿಳೆಯರಿಗೂ ಅನ್ವಯವಾದರೂ ಮಹಿಳಾ ಸಶಕ್ತೀಕರಣಕ್ಕೆ ಇನ್ನೂ ಹೆಚ್ಚಿನ ಕೆಲವು ಅಂಶಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಪುರುಷರ ಸಶಕ್ತೀಕರಣಕ್ಕೆ ನೀಡಬೇಕಿಲ್ಲದಿರುವ ವಿಷಯಗಳಿಗೆ ಮಹಿಳಾ ಸಶಕ್ತೀಕರಣದಲ್ಲಿ ವಿಶೇಷ ಒತ್ತು ನೀಡಬೇಕಾಗುತ್ತದೆ. ಜಂಡರ್ ಅಂಶಗಳಿಂದ ಮಹಿಳಾ ಸಶಕ್ತೀಕರಣವು ಪುರುಷರದಕ್ಕಿಂತ ಹೆಚ್ಚು ಸಂಕೀರ್ಣವಾಗಿದ್ದು ತುಂಬ ಎಚ್ಚರಿಕೆಯಿಂದ ಅದರ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗುತ್ತದೆ.

ಮಹಿಳಾ ಸಶಕ್ತೀಕರಣವು ಪರಿಕಲ್ಪನೆಯೂ ಹೌದು, ಪ್ರಕ್ರಿಯೆಯೂ ಹೌದು. ಪರಿಕಲ್ಪನೆಯಾಗಿ ಅದನ್ನು ವ್ಯಾಖ್ಯಾನಿಸಿ ಗ್ರಹಿಸಿಕೊಳ್ಳಬೇಕು. ಪ್ರಕ್ರಿಯೆಯಾಗಿ ಮಹಿಳೆಯರನ್ನು ಶಕ್ತಗೊಳಿಸುವ ಕಾರ್ಯಗಳನ್ನು ನಿರಂತರವಾಗಿ ಕೈಗೊಳ್ಳಬೇಕು. ಮಹಿಳಾ ಸಶಕ್ತೀಕರಣ ಅಂದರೆ ಏನು, ಅದು ಏನನ್ನು ಒಳಗೊಳ್ಳಬೇಕು, ಯಾವ ಯಾವ ಆಯಾಮಗಳಲ್ಲಿ ಅದನ್ನು ಗ್ರಹಿಸಿಕೊಳ್ಳಬೇಕು ಎಂದು ತಿಳಿದರೆ ಅನುಷ್ಠಾನಗೊಳಿಸುವುದು ಸುಲಭವಾಗುತ್ತದೆ.

ಮಹಿಳಾ ಸಶಕ್ತೀಕರಣವನ್ನು ಎರಡು ರೀತಿಯಲ್ಲಿ ಗ್ರಹಿಸಿಕೊಳ್ಳಬಹುದು. ಒಂದು ಏಕರೂಪವಾಗಿ ಅಂದರೆ ಇಡೀ ಮಹಿಳಾ ಸಮುದಾಯವನ್ನು ಒಂದು ಗುಂಪಾಗಿಟ್ಟುಕೊಂಡು ಸಶಕ್ತೀಕರಣವನ್ನು ಪರಿಕಲ್ಪಿಸುವುದು. ಇನ್ನೊಂದು ವೈವಿಧ್ಯ ಅಥವಾ ಬಹುರೂಪಿ ಗುಂಪುಗಳಾಗಿರುವ ಮಹಿಳೆಯರ ಸಶಕ್ತೀಕರಣ. ಇಲ್ಲಿ

ಜಾತಿ, ಧರ್ಮ, ವರ್ಗ, ಜನಾಂಗ ಹಾಗೂ ಪ್ರಾದೇಶಿಕ ಹಿನ್ನೆಲೆಯಲ್ಲಿ ಭಿನ್ನವಾಗಿರುವ ಮಹಿಳಾ ಸಶಕ್ತೀಕರಣ ಪರಿಕಲ್ಪನೆ ಮೊದಲನೆಯದರಲ್ಲಿ ಜೈವಿಕ ಹಾಗೂ ಜಂಡರ್ ಕಾರಣದಿಂದ ಜಗತ್ತಿನಾದ್ಯಂತ ಮಹಿಳೆಯರು ಅಸಮಾನತೆ, ತಾರತಮ್ಯಕ್ಕೊಳಗಾಗಿ, ಹಕ್ಕು ಸ್ವಾತಂತ್ರ್ಯಗಳಿಂದ ವಂಚಿತರಾಗಿದ್ದಾರೆ. ಮೂಲಭೂತ ಬದಲಾವಣೆ ತರಲು, ಜನರ ಮನಸ್ಥಿತಿಯಲ್ಲಿ ಬೇರೂರಿರುವ ಜಂಡರ್ ತಾರತಮ್ಯ ಮನೋಭಾವವನ್ನು ಹೋಗಲಾಡಿಸಲು, ಮಹಿಳಾ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಮಗ್ರ ದೃಷ್ಟಿಕೋನ ಹೊಂದಲು, ಅದಕ್ಕಿರುವ ಜಾಗತಿಕ ಆಯಾಮವನ್ನು ಗ್ರಹಿಸಲು ಮಹಿಳಾ ಸಶಕ್ತೀಕರಣವನ್ನು ಏಕರೂಪವಾಗಿ ಗ್ರಹಿಸಿಕೊಳ್ಳಬೇಕಾಗುತ್ತದೆ. ಆದರೆ ಪ್ರಕ್ರಿಯೆಯನ್ನು ಅನುಷ್ಠಾನಕ್ಕೆ ತರಲು ವೈವಿಧ್ಯತೆಯ ಸ್ವರೂಪದಲ್ಲಿ ಮಹಿಳಾ ಸಶಕ್ತೀಕರಣವನ್ನು ವ್ಯಾಖ್ಯಾನಿಸಿಕೊಳ್ಳಬೇಕು. ಅಂದರೆ ವಿವಿಧ ಗುಂಪುಗಳ ಮಹಿಳೆಯರಿಗೆ ಒಂದೇ ಸಶಕ್ತೀಕರಣದ ಪರಿಕಲ್ಪನೆಯ ಅರ್ಥವನ್ನು ಅನ್ವಯಿಸಲು ಸಾಧ್ಯವಿಲ್ಲ. ಬೇರೆ ಬೇರೆ ಗುಂಪಿನವರಿಗೆ ಭಿನ್ನ ವ್ಯಾಖ್ಯೆ, ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳಬೇಕು. ಉದಾಹರಣೆಗೆ ಮಹಿಳೆಯರಾಗಿ ನಗರ ಹಾಗು ಗ್ರಾಮೀಣ ಮಹಿಳೆಯರು ಕೆಲವೊಂದು ಸಾಮಾನ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಪ್ರಾದೇಶಿಕತೆಯಲ್ಲಿ ವಿಭಿನ್ನ ಸಮಸ್ಯೆಗಳನ್ನು ಎರುರಿಸುತ್ತಿರುತ್ತಾರೆ. ಅವರ ಸ್ಥಿತಿ, ಸ್ಥಾನ, ದುಡಿಮೆ ಭಿನ್ನವಾಗಿರುವುದರಿಂದ ಅವರ ಸಶಕ್ತೀಕರಣದ ವ್ಯಾಖ್ಯೆಗಳೂ ಭಿನ್ನವಾಗಿರುತ್ತವೆ. ಅದೇ ರೀತಿ ಭಿನ್ನ ಜಾತಿ, ವರ್ಗ, ಧರ್ಮದ ಮಹಿಳೆಯರ ಸಶಕ್ತೀಕರಣವನ್ನು ಭಿನ್ನವಾಗಿ ವ್ಯಾಖ್ಯಾನಿಸಿಕೊಳ್ಳಬೇಕಾಗುತ್ತದೆ. ಎರಡನೆಯದು ಪ್ರಕ್ರಿಯೆಯ ಹಂತದಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಎರಡೂ ಸೇರಿದಂತೆ ಮಹಿಳಾ ಸಶಕ್ತೀಕರಣದ ಕೆಲವು ಪ್ರಮುಖ ಅಂಶಗಳನ್ನು ಗುರುತಿಸಬಹುದು. ಕಳೆದ ೧೫ ವರ್ಷಗಳಿಂದ ಮಹಿಳಾ ಸಶಕ್ತೀಕರಣವನ್ನು ವಿವಿಧ ತಜ್ಞರು ವ್ಯಾಖ್ಯಾನಿಸಿದ್ದಾರೆ, ಚರ್ಚಿಸಿದ್ದಾರೆ. ಅವುಗಳನ್ನು ಮತ್ತೆ ಮತ್ತೆ ಹೇಳುವ ಆವಶ್ಯಕತೆ ಇಲ್ಲವೆನಿಸುತ್ತದೆ. ಅಲ್ಲದೆ ಎಲ್ಲಾ ಕಾಲಕ್ಕೂ, ಎಲ್ಲಾ ಪ್ರದೇಶಗಳಿಗೂ, ಎಲ್ಲಾ ಗುಂಪುಗಳಿಗೂ ಅನ್ವಯವಾಗುವ ಸಾರ್ವತ್ರಿಕ ವ್ಯಾಖ್ಯೆಯನ್ನು ನೀಡಲಾಗುವುದಿಲ್ಲ. ಅದರಿಂದ ವಿವಿಧ ವ್ಯಾಖ್ಯಾನಗಳ ಮುಖ್ಯಾಂಶಗಳನ್ನು ಇಟ್ಟುಕೊಂಡು ಮಹಿಳಾ ಸಶಕ್ತೀಕರಣವನ್ನು ಅರ್ಥ ಮಾಡಿಕೊಳ್ಳಬಹುದು. ಪಂಡಿತರು ಬೇರೆ ಬೇರೆ ಅಂಶಗಳಿಗೆ ಒತ್ತು ನೀಡಿ ವ್ಯಾಖ್ಯಾನಿಸಿದ್ದಾರೆ. ಅವುಗಳನ್ನು ಎರಡು ಗುಂಪಾಗಿ ವಿಂಗಡಿಸಿಕೊಳ್ಳಬಹುದು. ಒಂದು ಮಹಿಳೆಯರಲ್ಲಿಯೆ ಉಂಟಾಗಬೇಕಾಗಿರುವ ಆಂತರಿಕ ಅಂಶಗಳು. ಇನ್ನೊಂದು ಹೊರಗಿನಿಂದ

ಬರಬೇಕಾದ ಸರ್ಕಾರ, ಸಂಘಗಳಿಂದ ಮಧ್ಯಪ್ರವೇಶಿಕೆ, ಸಮಾಜದ ವಿವಿಧ ಸ್ತರಗಳಲ್ಲಿ ಉಂಟಾಗಬೇಕಾದ ಬದಲಾವಣೆಗಳು ಮಹಿಳೆಯರನ್ನು ಶಕ್ತಗೊಳಿಸುವ ಬಾಹ್ಯ ಅಂಶಗಳು.

ಆಂತರಿಕ ಅಂಶಗಳಲ್ಲಿ ಸ್ವಾವಲಂಬನೆ, ಆತ್ಮವಿಶ್ವಾಸ, ಗೌರವ, ಸ್ವ–ಅರಿವು, ಆರ್ಥಿಕ ಸ್ವಾಂತಂತ್ರ್ಯ, ಸಂಪನ್ಮೂಲದ ಲಭ್ಯತೆ ಮತ್ತು ನಿಯಂತ್ರಣ ಹೊಂದುವುದು, ಕೌಶಲ್ಯ, ಉತ್ಪಾದಕ ಶಕ್ತಿಯನ್ನು ಪಡೆದಿರುವುದು, ಮುಕ್ತ ಸಂಚಲನೆ, ಸ್ವ–ನಿರ್ಧಾರ, ಆಯ್ಕೆ ಸ್ವಾಂತಂತ್ರ್ಯ, ಸ್ವ–ಅಭಿವ್ಯಕ್ತಿ, ಖಚಿತವಾಗಿ ಹೇಳುವುದು, ಅನ್ಯಾಯವಾದ ಶೋಷಣೆಯನ್ನು ಪ್ರಶ್ನಿಸುವುದು, ಪ್ರತಿಭಟಿಸುವುದು, ಸಮಾನತೆ, ಅವಕಾಶ, ಹಕ್ಕಿಗಾಗಿ ಹೋರಾಡುವುದು, ಮುಂತಾದವುಗಳು ಸೇರಿವೆ. ಇವೆಲ್ಲವು ಮಹಿಳೆಯ ವೈಯಕ್ತಿಕ ಮಟ್ಟದ ಸಶಕ್ತೀಕರಣವನ್ನು ಬಿಂಬಿಸುವ ಅಂಶಗಳಾಗಿವೆ. ಸಶಕ್ತೀಕರಣದ ಆಂತರಿಕ ಅಂಶಗಳು ಮೂರು ಮೂಲಗಳಿಂದ ಮೂಡಿಬರುತ್ತವೆ. ಒಂದು ವಂಶಪಾರಂಪರ್ಯವಾಗಿ ಜನ್ಮತಃ ಬರುವಂತದ್ದು, ಎರಡನೆಯದು ಮಹಿಳೆಯ ವೈಯಕ್ತಿಕ ಗುಣ ಸ್ವಭಾವದಿಂದ ಬರುತ್ತದೆ. ಮೂರನೆಯದು ಪರಿಸರ, ಬೆಳೆಸಿದ ರೀತಿ, ಕುಟುಂಬ, ಶಾಲಾ ಕಾಲೇಜು, ಉದ್ಯೋಗ ಸ್ಥಳ ಹಾಗು ಸಾರ್ವಜನಿಕ ಕ್ಷೇತ್ರಗಳಲ್ಲಿನ ವಾತಾವರಣ. ಮೂರನೆಯದು ಬಾಹ್ಯ ಅಂಶಗಳಾಗಿಯೂ ಮಹಿಳೆಯರನ್ನು ಅಶಕ್ತಗೊಳಿಸಲೂಬಹುದು, ಸಶಕ್ತಗೊಳಿಸಲೂಬಹುದು. ಅಶಕ್ತಗೊಳಿಸುವಂತಿದ್ದರೆ ಹೊರಗಿನ ಮಧ್ಯಪ್ರವೇಶಿಕೆಯಿಂದ ಬದಲಾಯಿಸಿ ಮಹಿಳೆಯರನ್ನು ಶಕ್ತಗೊಳಿಸುವುದೇ ಮಹಿಳಾ ಸಶಕ್ತೀಕರಣ. ಇದರಲ್ಲಿ ವಿವಾಹದ ಶಾಸ್ತ್ರ, ಆಚರಣೆ, ಕುಟುಂಬದ ರಚನೆ, ಸಾಂಸ್ಕೃತಿಕ ನಂಬಿಕೆ, ಆಚರಣೆಗಳು, ಶಿಕ್ಷಣ ವ್ಯವಸ್ಥೆ, ಉದ್ಯೋಗದ ಅವಕಾಶಗಳು, ರಾಜಕೀಯ ಪರಿಸ್ಥಿತಿಗಳು ಮಹಿಳಾ ವಿರೋಧಿಯಾಗಿದ್ದು, ಅವರನ್ನು ಅಶಕ್ತಗೊಳಿಸುತ್ತಿರುತ್ತವೆ. ಅಂತಹವುಗಳನ್ನು ಗುರುತಿಸಿ ಹೋಗಲಾಡಿಸುವುದು ಮಹಿಳಾ ಸಶಕ್ತೀಕರಣ.

ಅಸಮಾನತೆ, ತಾರತಮ್ಯ ಮತ್ತು ಶ್ರೇಣೀಕೃತವಾಗಿರುವ ಜಂಡರ್ ಸಂಬಂಧವನ್ನು ಪುನರ್‌ರಚಿಸಿ ಸ್ತ್ರೀ–ಪುರುಷರ ನಡುವೆ ಸಮಾನತೆ ಸಾಧಿಸುವುದೇ ಮಹಿಳಾ ಸಶಕ್ತೀಕರಣ. ಮಹಿಳೆಯರು ಸ್ವಾವಲಂಬನೆ, ಸ್ವಾತಂತ್ರ್ಯ, ಹಕ್ಕು, ಆಯ್ಕೆ, ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವಂತೆ ಮಾಡುವುದೇ ಸಶಕ್ತೀಕರಣ. ಪರಾಧೀನತೆ, ಅನ್ಯಾಯ, ತಾರತಮ್ಯ ಹಾಗು ಅಸಮಾನತೆಯನ್ನು ಪ್ರಶ್ನಿಸಿ ಹೋಗಲಾಡಿಸುವ ಸಲುವಾಗಿ ಸಂಘಟಿತರಾಗುವ ಸಾಮರ್ಥ್ಯವನ್ನು ಪಡೆಯುವಂತೆ ಮಾಡುವ ಪ್ರಕ್ರಿಯೆಯೆ ಮಹಿಳಾ ಸಶಕ್ತೀಕರಣ.

ಮಹಿಳಾ ಸಶಕ್ತೀಕರಣವು ನೇರವಾಗಿ ಪುರುಷಪ್ರಧಾನ ವ್ಯವಸ್ಥೆಗೆ ಸಂಬಂಧಪಟ್ಟಿದೆ. ಪುರುಷಪ್ರಧಾನ ವ್ಯವಸ್ಥೆಯ ಮೌಲ್ಯ, ನಂಬಿಕೆ, ಆಚರಣೆಗಳು ಕೆಲವೊಂದು ವಿಚಾರಗಳಲ್ಲಿ ಮಹಿಳೆಯರ ಕುರಿತು ಅತಿಯಾಗಿ ಗೌರವಿಸುವ, ಆರಾಧಿಸುವ, ಪೂಜಿಸುವ, ರಕ್ಷಿಸುವ ಧೋರಣೆಯನ್ನು ಹೊಂದಿದ್ದರೆ, ಅನೇಕ ವಿಚಾರಗಳಲ್ಲಿ ಮಹಿಳೆಯರು ಪರಾವಲಂಬಿಗಳು, ಅಸಾಹಯಕರು, ಪುರುಷರ ಆಶ್ರಯದಲ್ಲಿರಬೇಕಾದವರು, ಸ್ವಾತಂತ್ರ್ಯ ಹಕ್ಕುಗಳಿಗೆ ಅನರ್ಹರು, ತಮ್ಮ ಅಧೀನದಲ್ಲಿರಬೇಕು, ತಮ್ಮ ಆಸ್ತಿ ಎಂಬ ಮನೋಭಾವವನ್ನು ಹೊಂದಿದೆ. ಇವು ಅವರನ್ನು ಅಶಕ್ತಗೊಳಿಸುತ್ತದೆ. ಆದುದರಿಂದ ಪುರುಷ ಪ್ರಧಾನತೆಯನ್ನು ಹೋಗಲಾಡಿಸುವುದೇ ಮಹಿಳಾ ಸಶಕ್ತೀಕರಣದ ಪ್ರಮುಖ ಗುರಿಯಾಗಿದೆ.

## ಮಹಿಳಾ ಸಶಕ್ತೀಕರಣದ ಆಯಾಮಗಳು

ಮಹಿಳಾ ಸಶಕ್ತೀಕರಣವನ್ನು ವಿವಿಧ ಆಯಾಮಗಳ ಹಿನ್ನೆಲೆಯಲ್ಲಿ ಚರ್ಚಿಸಬಹುದು. ಅದಕ್ಕೆ ಬಹುರೂಪಿ ಅಥವಾ ವೈವಿಧ್ಯದ ನೆಲೆಯಿರುವುದರಿಂದ ಎಲ್ಲಾ ಗುಂಪಿನ ಮಹಿಳೆಯರನ್ನು ಏಕರೂಪ ಚೌಕಟ್ಟಿನಲ್ಲಿ ತರಲು ಆಗುವುದಿಲ್ಲ. ಅಲ್ಲದೆ ಬೇರೆ ಬೇರೆ ಕ್ಷೇತ್ರದ ಚಿಂತಕರು, ತಜ್ಞರು, ನೀತಿ ನಿರೂಪಕರು, ಧಾರ್ಮಿಕ ಮುಖಂಡರು, ಕಾರ್ಯಕರ್ತರು, ಹೋರಾಟಗಾರರು, ಆಡಳಿತಗಾರರು, ಮಹಿಳಾ ಸಶಕ್ತೀಕರಣವನ್ನು ಭಿನ್ನ ನೆಲೆಗಳ ನೋಡುತ್ತಾರೆ. ಹಾಗಾಗಿ ಅದಕ್ಕೆ ವಿವಿಧ ಆಯಾಮಗಳಿವೆ. ಅವುಗಳಲ್ಲಿ ಪ್ರಮುಖವಾಗಿ ಪೌರಾಣಿಕ, ಸ್ತ್ರೀವಾದಿ, ಆರ್ಥಿಕ, ಸಾಮಾಜೀಕರಣ, ಕಾನೂನು ಮತ್ತು ಮನೋವೈಜ್ಞಾನಿಕ ಅಭಿವೃದ್ಧಿ ಹಾಗು ರಾಜಕೀಯ ಆಯಾಮಗಳಲ್ಲಿ ಮಹಿಳಾ ಸಶಕ್ತೀಕರಣವನ್ನು ಚರ್ಚಿಸಬಹುದು.

## ಪೌರಾಣಿಕ, ಧಾರ್ಮಿಕ ಹಿನ್ನೆಲೆಯಲ್ಲಿ ಮಹಿಳಾ ಸಶಕ್ತೀಕರಣ

ಪೌರಾಣಿಕ, ಧಾರ್ಮಿಕ ಹಿನ್ನೆಲೆಯ ಶಕ್ತಿ ಪರಿಕಲ್ಪನೆಯನ್ನು ಇಟ್ಟುಕೊಂಡು ಮಹಿಳಾ ಸಶಕ್ತೀಕರಣವನ್ನು ನೋಡುವುದಾದರೆ ದೇವತೆ, ದೆವ್ವ, ಮಾಯಾವಿನಿ, ಆದಿಶಕ್ತಿ ಎಂದು ಕಾಲ್ಪನಿಕ, ಭ್ರಮೆಯ ಕಟ್ಟುಕತೆಯ ಮೂಲಕ ಸ್ತ್ರೀಯನ್ನು ಸಶಕ್ತಳನ್ನಾಗಿ ನೋಡುವುದು ಕಂಡುಬರುತ್ತದೆ. ಇದು ವಾಸ್ತವದ ದೃಷ್ಟಿಯಿಂದ ನಕಾರಾತ್ಮಕ ವಿಧಾನವೆನಿಸುತ್ತದೆ. ಭಯ, ಮುಕ್ತಿ, ಆರಾಧನೆ, ಬೇಡಿಕೆಗಳ ಪೂರೈಕೆಗೆಂದು ದೇವಸ್ಥಾನ, ದೇವರ ಕೋಣೆಯಲ್ಲಿ ಪೂಜೆ, ಅದರಿಂದ ಹೊರ ಬಂದ ತಕ್ಷಣ ಕೀಳುದೃಷ್ಟಿಯಿಂದ ನೋಡುವ, ಹಿಂಸಿಸುವ ಅನ್ಯಾಯ ಮಾಡುವ ಕ್ರಮಗಳಿಂದ ಏನು ಪ್ರಯೋಜನವಿಲ್ಲ. ದುರ್ಗೆ, ಕಾಳಿಯನ್ನು ಆರಾಧಿಸುವುದು ಹೆಂಡತಿ, ಮಕ್ಕಳನ್ನು ಕೀಳಾಗಿ ನೋಡುವ

ದ್ವಂದ್ವ, ವಿರೋಧಾಸ್ಪದ ನೀತಿ ಬೇಕೆ? ಪೂಜೆ, ಆರಾಧನೆ ಸ್ತ್ರೀಯರಿಗೆ ಸಮಾನತೆ ತಂದುಕೊಡುವುದಿಲ್ಲ.

ವಿದ್ಯೆ, ಸಂಪತ್ತು ಹಾಗು ಧೈರ್ಯದ ಪ್ರತಿರೂಪವಾಗಿ ಹೆಣ್ಣನ್ನು ಸರಸ್ವತಿ, ಲಕ್ಷ್ಮಿ ಹಾಗು ಪಾರ್ವತಿಯೆಂದು ಪೂಜಿಸುವ ನಮ್ಮ ಸಮಾಜದಲ್ಲಿ ಈಗಲೂ ಶೇ. ೫೦ರಷ್ಟು ಮಹಿಳೆಯರು ಏಕೆ ಅನಕ್ಷರಸ್ಥರಾಗಿದ್ದಾರೆ, ಆರ್ಥಿಕವಾಗಿ ಪರಾವಲಂಬಿಗಳಾಗಿದ್ದಾರೆ ಹಾಗು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ? ಅಂದರೆ, ಪೂಜಿಸುವುದಕ್ಕು ವಾಸ್ತವದಲ್ಲಿ ನಡೆಸಿಕೊಳ್ಳುವುದಕ್ಕು ತುಂಬ ವ್ಯತ್ಯಾಸವಿದೆ. ಪೂಜಿಸುವಾಗ ಸೃಷ್ಟಿಯ ಮೂಲ ಆದಿಶಕ್ತಿ, ಮಿಕ್ಕಲ್ಲ ದೇವತೆಗಳಿಗು ಮಿಗಿಲು ಎಂದು ಹೇಳುತ್ತ ವಾಸ್ತವದಲ್ಲಿ ಹೆಣ್ಣು ಅಬಲೆ, ಅಸಹಾಯಕಳು, ಸ್ವಾತಂತ್ರ್ಯಕ್ಕೆ ಅನರ್ಹಳು, ಆಶ್ರಯ ರಕ್ಷಣೆಗೆ ಒಳಪಡುವವಳು ಎಂದು ನೋಡುವುದು ದ್ವಂದ್ವದ ಪ್ರತೀಕವಾಗಿದೆ. ಸಶಕ್ತೀಕರಣ ಪ್ರಕ್ರಿಯೆಯು ಮಹಿಳೆಯನ್ನು ಅಮಾನುಷ ಶಕ್ತಿ, ಸೃಷ್ಟಿಸುವವಳು, ನಾಶ ಮಾಡುವವಳು, ಅವಳಿಂದ ಅಪಾರ ಶಕ್ತಿ, ತಂತ್ರ, ವಿದ್ಯೆ, ಮುಕ್ತಿ ಪಡೆಯಬಹುದು ಎಂದು ಆರಾಧಿಸುವುದನ್ನು ಪ್ರೋತ್ಸಾಹಿಸುವುದಿಲ್ಲ. ಬದಲಿಗೆ ಸಮಾನತೆ, ಸ್ವಾತಂತ್ರ್ಯ ಬಯಸುವ ಭಾವನೆ, ಅಭಿಪ್ರಾಯವಿರುವ ಸಾಮಾನ್ಯ ವ್ಯಕ್ತಿಯೆಂದು ಅವಳನ್ನು ಪರಿಗಣಿಸಿ ಅವಳ ಹಕ್ಕನ್ನು ಗುರುತಿಸಿ ಸಮಾನ ಅವಕಾಶ ನೀಡುವುದಾಗಿದೆ.

ಪುರುಷರಿಂದಲೇ ಕಟ್ಟಲ್ಪಟ್ಟ ಬಹುತೇಕ ಧರ್ಮಗಳು ದೇವರ ದೃಷ್ಟಿಯಲ್ಲಿ ಎಲ್ಲರು ಸಮಾನರು ಎಂದು ಹೇಳುತ್ತವೆ. ಆದರೆ ಸ್ತ್ರೀ–ಪುರುಷರನ್ನು ಅಸಮಾನವಾಗಿ ನೋಡುತ್ತವೆ. ಒಂದು ವೇಳೆ ಧರ್ಮದಲ್ಲಿ, ಧರ್ಮಗ್ರಂಥಗಳಲ್ಲಿ ಮಹಿಳೆಯನ್ನು ಶಕ್ತಗೊಳಿಸುವ ಕೆಲವು ಅಂಶಗಳಿದ್ದರೂ ಆಚರಣೆಯಲ್ಲಿ ವಿರುದ್ಧವಾಗಿದ್ದು ಅವರನ್ನು ಅಶಕ್ತಗೊಳಿಸುತ್ತವೆ. ಇಸ್ಲಾಂ ಧರ್ಮದಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹವಿದೆ, ಆಸ್ತಿಯ ಹಕ್ಕು ಇದೆ. (ಆಸ್ತಿಯು ಪುರುಷನ ಅಧೀನದಲ್ಲಿದ್ದು ಸಂಬಂಧಿ ಮಹಿಳೆಯರು ಒಂದೊಂದು ಭಾಗ ಪಡೆಯುತ್ತಾರೆ. ಇಲ್ಲಿ ಸಮಾನ ಹಕ್ಕು ಇಲ್ಲ). ಆದರೆ ಅಚರಣೆಯಲ್ಲಿ ಎರಡೂ ದೊರಕುತ್ತಿಲ್ಲ.

ಅನೇಕ ಪೌರಾಣಿಕ, ಧಾರ್ಮಿಕ, ನಂಬಿಕೆ ಆಚರಣೆಗಳು ಮಹಿಳೆಯರನ್ನು ಶಕ್ತಗೊಳಿಸುವ ಪ್ರಕ್ರಿಯೆಗೆ ಅಡ್ಡಿಯನ್ನುಂಟುಮಾಡುತ್ತವೆ. ಉಡುಪು ಇರಬಹುದು, ಹೆಣ್ಣುಮಕ್ಕಳಲ್ಲಿ ನಿರೀಕ್ಷಿಸುವ ಗುಣವಿರಬಹುದು, ದುಡಿಮೆ, ಸಂಪನ್ಮೂಲ, ಸಭ್ಯತೆ, ನಿಯಂತ್ರಣವಿಲ್ಲದಿರುವುದು, ನಿರ್ಧಾರ ಕೈಗೊಳ್ಳುವ ಹಕ್ಕಿಲ್ಲದಿರುವುದು ಅವರ ಸಶಕ್ತೀಕರಣಕ್ಕೆ ಹಿನ್ನಡೆ ಉಂಟುಮಾಡುತ್ತವೆ. ಯಾವ ಯಾವ ನಂಬಿಕೆ ಆಚರಣೆಗಳು

ಸ್ತ್ರೀ ವಿರೋಧಿಯಾಗಿರುತ್ತವೋ ಅವುಗಳನ್ನು ಹೋಗಲಾಡಿಸಬೇಕು ಅಥವಾ ಸುಧಾರಿಸಬೇಕು. ಪೌರಾಣಿಕ, ಧಾರ್ಮಿಕ ನಂಬಿಕೆಗಳು ತುಂಬ ಪ್ರಬಲವಾಗಿರುತ್ತವೆ, ಜನರ ಜೀವನವನ್ನು ನಿಯಂತ್ರಿಸುತ್ತಿರುತ್ತವೆ. ಅಲ್ಲದೆ ಅವು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿವೆ ಮತ್ತು ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿಬಿಟ್ಟಿರುತ್ತವೆ. ಈಗಲೂ ದಿನನಿತ್ಯ ಜೀವನದಲ್ಲಿ ಅವುಗಳನ್ನು ವಿರೋಧಿಸುವುದಾಗಲಿ, ಬದಲಾಯಿಸುವುದಾಗಲಿ ಸುಲಭದ ಕಾರ್ಯವಲ್ಲ. ಕ್ರಮೇಣವಾಗಿ ಅರಿವು, ತಿಳುವಳಿಕೆ ನೀಡುವುದರ ಮೂಲಕ, ವೈಜ್ಞಾನಿಕ, ತಾರ್ಕಿಕ ಮನೋಭಾವವನ್ನು ಬೆಳೆಸುವುದರ ಮೂಲಕವೇ ಬದಲಾವಣೆ ತಂದು ಮಹಿಳೆಯರನ್ನು ಸಶಕ್ತತೆಯೆಡೆಗೆ ಒಯ್ಯಬೇಕು. ಮಹಿಳೆಯರನ್ನು ಗೌರವದಿಂದ, ಸಕಾರಾತ್ಮಕವಾಗಿ, ಸಮಾನವಾಗಿ ನೋಡುವ, ಬಿಂಬಿಸುವ ಅಂಶಗಳನ್ನು ಖಂಡಿತ ಉಳಿಸಿಕೊಂಡು ಬೆಂಬಲಿಸಬಹುದು.

## ಸ್ತ್ರೀವಾದಿ ಆಯಾಮ

ಮಹಿಳಾ ಸಶಕ್ತೀಕರಣಕ್ಕೆ ಸ್ತ್ರೀವಾದಿ ಚಿಂತನೆ ಮೂಲಾಧಾರವಾಗಿದ್ದು ಚಾಲಕ ಶಕ್ತಿಯಾಗಿದೆ. ಸಮಾನತೆ, ಸ್ವಾತಂತ್ರ್ಯ ಹಾಗು ಹಕ್ಕುಗಳನ್ನು ಎತ್ತಿಹಿಡಿಯುವ ಸ್ತ್ರೀವಾದವು ಮಹಿಳಾ ಸಶಕ್ತೀಕರಣಕ್ಕೆ ಮೂಲಾಂಶಗಳನ್ನು ಒದಗಿಸುತ್ತದೆ. ಮಹಿಳಾಪರ ಕಾಳಜಿಯನ್ನು ಬೆಳೆಸುವ, ಮಹಿಳೆಯರ ವಿರುದ್ಧ ನಡೆಯುವ ಅನ್ಯಾಯ ಶೋಷಣೆಯನ್ನು ಪ್ರತಿಭಟಿಸಿ ಹೋರಾಡುವ, ಮಹಿಳೆಯರ ಹಕ್ಕು ಸಮಾನತೆಗೆ ಹೊಸ ಕಾರ್ಯತಂತ್ರಗಳನ್ನು ರೂಪಿಸುವ, ಪುರುಷಪ್ರಧಾನತೆಯನ್ನು ಪ್ರಶ್ನಿಸಿ ಅದನ್ನು ಹೋಗಲಾಡಿಸಿ ಸಮಾಜದಲ್ಲಿ ಜಂಡರ್ ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವ ಸ್ತ್ರೀವಾದವು ಮಹಿಳಾ ಸಶಕ್ತೀಕರಣಕ್ಕೆ ಬೆಂಬಲ ನೀಡುವ ತಾತ್ವಿಕ ನೆಲೆಯಾಗಿದೆ. ಬಹುಶಃ ಸ್ತ್ರೀವಾದಿ ಚಿಂತನೆ ಹುಟ್ಟಿಕೊಳ್ಳದಿದ್ದರೆ ನಾವು ಇವತ್ತು ಮಹಿಳಾ ಸಶಕ್ತೀಕರಣದ ಬಗ್ಗೆ ಮಾತನಾಡಲು ಆಗುತ್ತಿರಲಿಲ್ಲ.

ಮಹಿಳೆಯರ ಪರಿಸ್ಥಿತಿ, ಪರಾಧೀನತೆ, ಶೋಷಣೆ, ಅನ್ಯಾಯ, ತುಳಿತಕ್ಕೆ ವಿಭಿನ್ನ ನೆಲೆಯ ಕಾರಣಗಳನ್ನು ಹುಡುಕುತ್ತಾ, ಬೇರೆ ಬೇರೆ ಅಂಶಗಳಿಗೆ ಒತ್ತು ನೀಡಿ, ಬೇರೆ ಬೇರೆ ಕಾರ್ಯತಂತ್ರ ತತ್ವಗಳನ್ನು ರೂಪಿಸಿಕೊಂಡು ಸ್ತ್ರೀವಾದಿ ಸಿದ್ಧಾಂತಗಳು ಹುಟ್ಟಿಕೊಂಡವು. ಅವುಗಳ ಆಶಯ, ಗುರಿ ಸ್ತ್ರೀ ವಿಮೋಚನೆಯಾದರೂ ಅನುಸರಿಸಿದ ತತ್ತ್ವ, ವಿಧಾನಗಳು ವಿಭಿನ್ನವಾದವು. ಆದರೆ ಎಲ್ಲವು ಮಹಿಳಾ ಸಶಕ್ತೀಕರಣಕ್ಕೆ ಎಡೆಮಾಡಿಕೊಟ್ಟವು. ಪ್ರಾರಂಭದ ಸ್ತ್ರೀವಾದಿ ಚಿಂತನೆಗಳು 'ಮಹಿಳಾ ಸಶಕ್ತೀಕರಣ' ಎಂಬ ಪರಿಕಲ್ಪನೆಯನ್ನು ನೇರವಾಗಿ ಬಳಸದಿದ್ದರೂ ಇವತ್ತಿನ ಮಹಿಳಾ ಸಶಕ್ತೀಕರಣ ಒಳಗೊಂಡಿರುವ ಎಲ್ಲಾ ಅಂಶಗಳನ್ನು ಅವು

ಪ್ರತಿಬಿಂಬಿಸುತ್ತಿದ್ದವು. ೧೯೯೦ರ ದಶಕದ ಆಧುನಿಕೋತ್ತರ ಸ್ತ್ರೀವಾದಿ ಚಿಂತನೆಗಳಲ್ಲಿ 'ಮಹಿಳಾ ಸಶಕ್ತೀಕರಣ'ದ ಪರಿಕಲ್ಪನೆ ಚರ್ಚಿತವಾಯಿತು. ಅದರಲ್ಲೂ ಅಭಿವೃದ್ಧಿ ಹಿನ್ನೆಲೆಯಲ್ಲಿ ಅದು ರೂಪುಗೊಂಡಿತು. ಸ್ತ್ರೀವಾದವು 'ಸ್ತ್ರೀ–ವಿಮೋಚನೆಯೇ' ಮಹಿಳಾ ಸಶಕ್ತೀಕರಣ ಎಂದು ಪರಿಭಾವಿಸಿತು. ಸ್ತ್ರೀ ವಿಮೋಚನೆಗೆ ವಿವಿಧ ತತ್ತ್ವ ವಿಧಾನ, ಕಾರ್ಯತಂತ್ರಗಳನ್ನು ಹೇಳುವ ಸಂದರ್ಭದಲ್ಲಿ ಉದಾರವಾದಿ ಸ್ತ್ರೀವಾದವು ಶಿಕ್ಷಣ, ಉದ್ಯೋಗ ಹಾಗು ಕಾನೂನು ತಿದ್ದುಪಡಿ ಮೂಲಕ ಇರುವ ವ್ಯವಸ್ಥೆಯೊಳಗೆ ಮಹಿಳೆಯರ ಪರಿಸ್ಥಿತಿ, ಸ್ಥಾನವನ್ನು ಉತ್ತಮಪಡಿಸಬೇಕೆಂದು ಹೇಳುತ್ತದೆ. ಅಂದರೆ ತೀವ್ರಗಾಮಿ ಸ್ತ್ರೀ–ವಾದವು ಪುರುಷಪ್ರಧಾನತೆ, ಕುಟುಂಬ ವ್ಯವಸ್ಥೆ, ತಾಯ್ತನ, ವೈವಾಹಿಕ ಬಂಧನ ಇವುಗಳು ಸ್ತ್ರೀಯರನ್ನು ಅಧೀನತೆಗೆ ತಳ್ಳಿ ಶೋಷಣೆಗೆ ಗುರಿಮಾಡುತ್ತವೆ. ಇದರಿಂದ ಇವುಗಳನ್ನು ಬೇರು ಸಮೇತ ಕಿತ್ತು ಹಾಕಿದರೆ ಸ್ತ್ರೀಯರು ವಿಮೋಚನೆಗೊಳ್ಳುತ್ತಾರೆ ಎಂದು ಹೇಳುತ್ತದೆ. ಬಂಡವಾಳಶಾಹಿ, ವರ್ಗಭೇದ ಹಾಗು ಪುರುಷಪ್ರಧಾನತೆ ಇವು ಮಹಿಳೆಯರ ಅಧೀನತೆಗೆ ಕಾರಣವಾಗುವುದರಿಂದ ಸ್ತ್ರೀಯರು ಮನೆಯಿಂದ ಹೊರಗೆ ದುಡಿಯುವಂತಾಗಿ, ವರ್ಗಭೇದ ವಿರುದ್ಧದ ಹೋರಾಟದಲ್ಲಿ ತೊಡಗಿ ಬಂಡವಾಳಶಾಹಿ ಹಾಗು ಪುರುಷ ಪ್ರಧಾನತೆ ಎರಡನ್ನು ನಿರ್ಮೂಲನೆ ಮಾಡಿದರೆ ಸಮಾನತೆ, ಸ್ವಾತಂತ್ರ್ಯ, ಹಕ್ಕುಗಳನ್ನು ಪಡೆದು ಸಶಕ್ತರಾಗಲು ಸಾಧ್ಯ ಎಂದು ಮಾರ್ಕ್ಸ್‌ವಾದಿ ಸ್ತ್ರೀವಾದವು ಪ್ರತಿಪಾದಿಸುತ್ತದೆ. ಸಮಾಜವಾದಿ ಸ್ತ್ರೀವಾದವು ಸ್ತ್ರೀ ಶೋಷಣೆಯು ಎಲ್ಲಾ ಮಿತಿಯನ್ನು ಮೀರಿದ್ದು ಇದರ ಇತರ ಪ್ರಕಾರದ ಭೇದ, ಉದಾ: ವರ್ಗ, ಜಾತಿ, ಧರ್ಮ, ಜನಾಂಗೀಯ ಭೇದಗಳೊಂದಿಗೆ ತಳುಕು ಹಾಕಿಕೊಂಡಿದ್ದು ಸ್ತ್ರೀಯರು ವಿಮೋಚನೆ ಹೊಂದಬೇಕೆಂದರೆ ಈ ಎಲ್ಲಾ ಭೇದಗಳ ವಿರುದ್ಧ ಏಕಕಾಲದಲ್ಲಿ ಹೋರಾಡಬೇಕು, ಇದಕ್ಕಾಗಿ ಲಿಂಗತಾರತಮ್ಯದ ಬಗ್ಗೆ ಸಮಗ್ರ ದೃಷ್ಟಿಕೋನ ಇಟ್ಟುಕೊಂಡು ಹೋರಾಡಬೇಕೆನ್ನುತ್ತದೆ.

ಮಹಿಳಾ ಗುಂಪನ್ನು ವೈವಿಧ್ಯಮಯ ಗುಂಪನ್ನಾಗಿ ನೋಡುವ ಆಧುನಿಕೋತ್ತರ ಸ್ತ್ರೀವಾದವು, ಗುಂಪು ಹಾಗು ವಿಷಯಾಧಾರಿತವಾಗಿ ಮಹಿಳಾ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಪರಿಹರಿಸಬೇಕು. ಎಲ್ಲಾ ಗುಂಪಿನ ಮಹಿಳೆಯರಿಗೂ ಒಂದೇ ರೀತಿಯ ವಿಧಾನ, ತತ್ತ್ವ ಹಾಗು ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಲಾಗುವುದಿಲ್ಲ. ಬದಲಿಗೆ ಆಯಾ ಗುಂಪಿನ ಆವಶ್ಯಕತೆ, ಸಮಸ್ಯೆ, ಪ್ರದೇಶಕ್ಕೆ ತಕ್ಕಂತೆ ತತ್ತ್ವ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳುತ್ತದೆ. ಆದರೂ ಇಡೀ ಮಹಿಳಾ ಸಮುದಾಯಕ್ಕೆ ಅನ್ವಯವಾಗುವ ಸಮಸ್ಯೆಯಾಗಿದ್ದರೆ ಎಲ್ಲರೂ ಸಂಘಟಿತರಾಗಿ ಹೋರಾಟ ಮಾಡಿ ಸಮಗ್ರ ದೃಷ್ಟಿಕೋನವನ್ನಿಟ್ಟುಕೊಂಡು

ಪರಿಹರಿಸಿಕೊಳ್ಳಬೇಕಾಗುತ್ತದೆ ಎಂದು ಆಧುನಿಕೋತ್ತರ ಸ್ತ್ರೀವಾದ ಪ್ರತಿಪಾದಿಸುತ್ತದೆ. ಮಹಿಳೆಯರು ಹಾಗು ಮಹಿಳಾ ವಿಷಯಗಳ ಬಗ್ಗೆ ಇರುವ ತಪ್ಪು ನಂಬಿಕೆ, ಮಿಥ್ಯೆಗಳನ್ನು ತೊಡೆದುಹಾಕಿ ವಾಸ್ತವದ ನೆಲೆಗಟ್ಟಿನಲ್ಲಿ ಅವುಗಳನ್ನು ಪುನರ್‌ರಚಿಸಿ ಅದರ ಮೂಲಕ ಮಹಿಳಾ ಸಮುದಾಯವನ್ನು ಬಲಪಡಿಸಬೇಕೆನ್ನುತ್ತದೆ. ೧೯೯೦ ಹಾಗು ೨೦೦೦ ದಶಕಗಳಿಂದ ವಿವಿಧ ಗುಂಪಿನ ಮಹಿಳೆಯರು ತಮ್ಮದೆ ವಿಷಯ, ಸಮಸ್ಯೆಗಳನ್ನಿಟ್ಟುಕೊಂಡು ತಾತ್ವಿಕ ಚಿಂತನೆಗೆ ಹೋರಾಟಕ್ಕೆ ಮುಂದಾಗುತ್ತಾ ಮಹಿಳಾ ಸಶಕ್ತೀಕರಣದತ್ತ ಮುನ್ನಡೆಯುತ್ತಿದ್ದಾರೆ. ಈ ರೀತಿಯ ಚಿಂತನೆ ಮಹಿಳಾ ಚಳವಳಿಯಲ್ಲಿ ಒಡಕನ್ನುಂಟುಮಾಡಬಹುದೆಂಬ ಸಂಶಯ ಹುಟ್ಟಿಕೊಳ್ಳುತ್ತದೆ. ಆದರೂ ಪ್ರತ್ಯೇಕ ಹಾಗು ಒಗ್ಗೂಡಿದ ಪ್ರಯತ್ನಗಳೆರಡೂ ಒಟ್ಟು ಮಹಿಳಾ ಸಮುದಾಯದ ಸಬಲೀಕರಣಕ್ಕೆ ಸಾಧನವಾಗಲಿದೆ.

ಇನ್ನು ಮಹಿಳಾ ಸಶಕ್ತೀಕರಣದ ಪರಿಕಲ್ಪನೆ ಕುರಿತು ಸ್ತ್ರೀವಾದದ ನಿಲುವೇನು ಎಂದು ನೋಡಿದರೆ, ಅದು ಸಶಕ್ತೀಕರಣವನ್ನು ತುಂಬ ವಿಶಾಲ ದೃಷ್ಟಿಕೋನದಿಂದ ನೋಡುತ್ತದೆ. ಪೌರಾಣಿಕ, ಸಾಂಪ್ರದಾಯಿಕ ಶಕ್ತಿ ಪರಿಕಲ್ಪನೆಯನ್ನು ಮೀರಿ ಅಧಿಕಾರ ಸ್ಥಾಪನೆ / ಅಧಿಕಾರ ಕಸಿದುಕೊಳ್ಳುವ ಭಯ, ಭ್ರಾಂತಿಗಳ ಮೂಲಕ ಇತರರನ್ನು ಅಧೀನಕ್ಕೊಳಪಡಿಸಿಕೊಳ್ಳುವ ಶಕ್ತಿಗಿಂತ ಆತ್ಮವಿಶ್ವಾಸ, ಸ್ವಾವಲಂಬನೆ ಹಾಗು ಸಾಮರ್ಥ್ಯವನ್ನು ಗಳಿಸಿಕೊಳ್ಳುವ ಆಂತರಿಕ ಶಕ್ತಿಗೆ ಹೆಚ್ಚು ಮಹತ್ವ ನೀಡುತ್ತದೆ. ಶೋಷಣೆ, ತುಳಿತ, ಅಧೀನತೆಯ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ, ಆಂತರಿಕಗೊಳಿಸಿಕೊಳ್ಳುವ ಮತ್ತು ಅವುಗಳನ್ನು ಹಿಮ್ಮೆಟ್ಟಿಸುವ ಶಕ್ತಿಯನ್ನು ಮುಖ್ಯವಾಗಿ ಅದು ಗುರುತಿಸುತ್ತದೆ.

ಈಗಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಧಿಕಾರ ರಚನೆಯಲ್ಲಿ ಪುರುಷರು ಮಹಿಳೆಯರ ಮೇಲೆ ಮತ್ತು ಪುರುಷರ ಮೇಲೆ ಅಧಿಕಾರ ಹೊಂದಿದ್ದಾರೆ. ಇದನ್ನು ಬದಲಿಸಬೇಕೆಂದರೆ ಮಹಿಳೆಯರು ಪುರುಷರ ಮೇಲೆ ಅಧಿಕಾರ ಹೊಂದುವುದು ಎಂದಾಗುತ್ತದೆ. ಆದರೆ ಸ್ತ್ರೀವಾದವು ಪುರುಷರ ಮೇಲೆ ಆಧಿಪತ್ಯ ಸಾಧಿಸುವುದನ್ನು ಸಶಕ್ತೀಕರಣ ಎಂದು ವ್ಯಾಖ್ಯಾನಿಸುವುದಿಲ್ಲ. ಸ್ವಾತಂತ್ರ್ಯ, ನಿರ್ಧಾರ ಕೈಗೊಳ್ಳುವ ಅಧಿಕಾರ, ಹಕ್ಕು , ಅಧಿಕಾರ ಪಡೆಯುವುದಷ್ಟೆ ಸಶಕ್ತೀಕರಣ ಎಂದು ಭಾವಿಸುವುದಿಲ್ಲ. ಮಹಿಳೆಯರಲ್ಲಿ ತಾವು ಸಮರ್ಥರು ಎಂದು ಭಾವಿಸಿಕೊಳ್ಳುವುದು, ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು, ಆತ್ಮವಿಶ್ವಾಸ, ಅರಿವು, ಗೌರವ ಬೆಳೆಸಿಕೊಳ್ಳುವಂತೆ ಮಾಡುವುದೇ ಸಶಕ್ತೀಕರಣ ಎನ್ನುತ್ತಾರೆ.

ಸ್ತ್ರೀವಾದವು ಮಹಿಳಾ ಸಶಕ್ತೀಕರಣದ ಪ್ರಕ್ರಿಯೆಯಲ್ಲಿ ಹಕ್ಕುಗಳ ಪ್ರತಿಪಾದನೆ ಹಾಗು ದೌರ್ಜನ್ಯಮುಕ್ತ ಜೀವನ ಸಾಗಿಸುವುದಕ್ಕೆ ಹೆಚ್ಚು ಒತ್ತು ನೀಡುತ್ತದೆ. ಅದಕ್ಕಾಗಿ ಮಹಿಳೆಯರು ಸಂಘಟಿತರಾಗಿ ನಿರಂತರ ಹೋರಾಡುವುದು ಅನಿವಾರ್ಯ ಎಂದು ಭಾವಿಸುತ್ತದೆ.

## ಆರ್ಥಿಕ ಆಯಾಮ

ಭೂಮಿಯ ಮೇಲಿನ ಪ್ರತಿಯೊಂದು ಜೀವಿಗೂ ಬದುಕಲು ಕೆಲವು ಮೂಲಭೂತ ಆವಶ್ಯಕತೆಗಳು ಬೇಕು. ಬುದ್ಧಿಜೀವಿ ಮನುಷ್ಯರಿಗೆ ಆವಶ್ಯಕತೆಗಳು ಹೆಚ್ಚು. ಈ ಮೂಲಭೂತ ಆವಶ್ಯಕತೆಗಳನ್ನು ಪ್ರಕೃತಿಯಲ್ಲಿ ದೊರಕುವ ವಸ್ತುಗಳಿಂದ ಪೂರೈಸಿಕೊಳ್ಳಬೇಕು. ಪ್ರಾಣಿ ಪಕ್ಷಿಗಳು ಆಹಾರ ಹಾಗು ಜೀವರಕ್ಷಕಗಳನ್ನು ಪ್ರಕೃತಿಯಿಂದ ನೇರವಾಗಿ ಬಳಸಿಕೊಳ್ಳುತ್ತವೆ. ಒಂದು ಕಾಲದಲ್ಲಿ ಮಾನವರೂ ಹಾಗೆಯೇ ಬಳಸಿಕೊಳ್ಳುತ್ತಿದ್ದರು. ಆದರೆ ನಾಗರೀಕತೆ ಬೆಳೆದಂತೆ ಪ್ರಕೃತಿಯ ಸಂಪನ್ಮೂಲಗಳನ್ನು ಸಂಸ್ಕರಿಸಿ ಬಳಸುವುದನ್ನು ಕಲಿತರು. ಇದೆ ದುಡಿಮೆಯಾಗಿ ರೂಪುಗೊಂಡಿತು. ಪ್ರಾಣಿ ಪಕ್ಷಿಗಳು ತಮ್ಮ ಆಹಾರ, ಪ್ರಾಣ ರಕ್ಷಣೆಯ ಕಾರ್ಯವನ್ನು ತಾವೇ ಮಾಡಿಕೊಳ್ಳುತ್ತವೆ. ಹಾಗಾಗಿ ಅವು ಸ್ವತಂತ್ರವಾಗಿರುತ್ತವೆ. ಮಾನವರ ಆವಶ್ಯಕತೆಗಳು ಹೆಚ್ಚಾಗಿ ಪ್ರಕೃತಿಯ ಸಂಪನ್ಮೂಲಗಳನ್ನು ಬಳಸಿಕೊಂಡು ವಸ್ತುಗಳನ್ನು ಉತ್ಪಾದಿಸುವ ಕಾರ್ಯಗಳನ್ನು ಸಂಕೀರ್ಣವಾಗಿಸುತ್ತಾ ಹೋದವು. ಮಾನವರ ಪರಸ್ಪರ ಅವಲಂಬನೆಯು ಅಧಿಕವಾಯಿತು. ಎಲ್ಲರು ಎಲ್ಲಾ ಕೆಲಸಗಳನ್ನು ಮಾಡಲಾಗದಿದ್ದುದರಿಂದ ಶ್ರಮದ ಹಂಚಿಕೆಯಾಯಿತು. ಸಂಪನ್ಮೂಲ ಬಳಕೆ, ಉತ್ಪಾದನೆ, ದುಡಿಮೆ, ಹಂಚಿಕೆ ಇವೆಲ್ಲವೂ ಒಗ್ಗೂಡಿ ಅತಿ ದೊಡ್ಡ ಅರ್ಥವ್ಯವಸ್ಥೆ ರೂಪುಗೊಂಡಿತು. ಪ್ರಜಾಪ್ರಭುತ್ವದ ಈ ಅರ್ಥವ್ಯವಸ್ಥೆಯಲ್ಲಿ ಭಾಗವಹಿಸಿ ಅದರ ಪ್ರತಿಫಲವನ್ನು ಪಡೆಯುವ ಹಕ್ಕನ್ನು ಎಲ್ಲಾ ಗುಂಪಿನ ಜನರಿಗೆ ಸಂವಿಧಾನ ಹಾಗು ಕಾನೂನು ವ್ಯವಸ್ಥೆ ಒದಗಿಸಿಕೊಡುತ್ತದೆ. ಆದರೆ ಸಾಮಾಜಿಕ, ಐತಿಹಾಸಿಕ, ರಾಜಕೀಯ, ಧಾರ್ಮಿಕ ಅಂಶಗಳ ಕಾರಣದಿಂದ ಎಲ್ಲಾ ಗುಂಪಿನ ಜನರು ಭಾಗವಹಿಸಲಾಗದೆ ಪ್ರತಿಫಲವನ್ನು ಪಡೆಯುವುದರಿಂದ ವಂಚಿತರಾಗುತ್ತಾರೆ. ಒಂದು ವೇಳೆ ಭಾಗವಹಿಸಿದರೂ ಸೂಕ್ತ ಪ್ರತಿಫಲವನ್ನು ಪಡೆಯುವುದಿಲ್ಲ. ಪ್ರತಿಫಲವು ಸಿಗದಿದ್ದರೆ ಸಂಪನ್ಮೂಲಗಳ ಲಭ್ಯತೆ, ನಿಯಂತ್ರಣ ದೊರಕುವುದಿಲ್ಲ. ಹೀಗಾಗಿ ಅವರು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಿಂದ ದೂರ ಉಳಿಯುತ್ತಾರೆ. ಇವೆಲ್ಲವು ಅವರನ್ನು ಆರ್ಥಿಕವಾಗಿ ಅಶಕ್ತರನ್ನಾಗಿಸುತ್ತವೆ.

ಸಶಕ್ತೀಕರಣ ಪ್ರಕ್ರಿಯೆಯಲ್ಲಿ ಜನರಿಗೆ ಸಂಪನ್ಮೂಲಗಳ ಲಭ್ಯತೆ, ನಿಯಂತ್ರಣ, ಮೂಲಭೂತ ಆವಶ್ಯಕತೆಗಳ ಪೂರೈಕೆ, ಸ್ವಾವಲಂಬನೆ, ಶಿಕ್ಷಣ, ಕೌಶಲ್ಯ, ತರಬೇತಿ, ಮುಂತಾದವು ಅತ್ಯಾವಶ್ಯಕ. ಆದರೆ ಜಾತಿ, ಧರ್ಮ, ವರ್ಗ, ಲಿಂಗ, ವರ್ಣ, ಪ್ರಾದೇಶಿಕ ಭೇದಗಳಿಂದ ಜನರು ಇವುಗಳಿಂದ ವಂಚಿತರಾಗಿ ಅಶಕ್ತರಾಗಿರುತ್ತಾರೆ. ಜಂಡರ್ ಹಿನ್ನೆಲೆಯಲ್ಲಿ ನೋಡುವುದಾದರೆ, ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಎರಡು ರೀತಿಯಲ್ಲಿ ಆರ್ಥಿಕವಾಗಿ ಅಶಕ್ತರನ್ನಾಗಿ ಮಾಡಲಾಗುತ್ತದೆ. ಒಂದು ಯಾವುದೇ ಸಂಪನ್ಮೂಲಗಳ ಲಭ್ಯತೆ ನಿಯಂತ್ರಣದಿಂದ ದೂರವಿರಿಸಿ ಅವರನ್ನು ಪರಾವಲಂಬಿಗಳನ್ನಾಗಿ ಮಾಡಲಾಗುತ್ತದೆ. ಇನ್ನೊಂದು ತಮ್ಮ ಶ್ರಮ ದುಡಿಮೆಯ ಮೂಲಕ ಆರ್ಥಿಕತೆಗೆ ಅಪಾರವಾದ ಕೊಡುಗೆ ಸಲ್ಲಿಸುತ್ತಿದ್ದರೂ ಅವರ ದುಡಿಮೆಯನ್ನು ಅಗೋಚರಗೊಳಿಸಿ ಪ್ರತಿಫಲದಿಂದ ಅವರನ್ನು ವಂಚಿತರನ್ನಾಗಿ ಮಾಡಲಾಗುತ್ತದೆ. ಅಂದರೆ ಕುಟುಂಬದೊಳಗೆ ಅವರ ದುಡಿಮೆಯನ್ನು ಕರ್ತವ್ಯ ಸೇವೆಯೆಂದು ಪರಿಗಣಿಸಿ ಆದಾಯ, ಸಂಪನ್ಮೂಲ ದೊರಕದಂತೆ ಮಾಡಿದರೆ, ಮನೆಯ ಹೊರಗೆ ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರಿಗೆ ಅಸಮಾನ ವೇತನ, ಕನಿಷ್ಠ ವೇತನ ನೀಡದಿರುವುದು, ಕೆಳಸ್ತರದ, ಕೌಶಲ್ಯರಹಿತ ಕಡಿಮೆ ಕೂಲಿಯ ಕೆಲಸಗಳಲ್ಲಿ ನೇಮಿಸಿಕೊಳ್ಳುವುದು, ಉದ್ಯೋಗಭದ್ರತೆ ಹಾಗು ಇತರ ಸೌಲಭ್ಯಗಳನ್ನು ನೀಡದಿರುವುದು, ಮಹಿಳೆಯರ ಕೆಲಸಗಳನ್ನು ಅವೈಜ್ಞಾನಿಕವಾಗಿ ಮಾಪನ ಮಾಡಿ ಕಡಿಮೆ ಕೂಲಿ ನಿಗದಿಪಡಿಸುವುದು ಇವುಗಳಿಂದ ಪುರುಷರಿಗೆ ಸಮನಾಗಿ ದುಡಿದರೂ ಸಮಾನ ಸಂಭಾವನೆಯಿಂದ ವಂಚಿತರನ್ನಾಗಿ ಮಾಡಲಾಗಿದೆ. ಒಟ್ಟಿನಲ್ಲಿ ಸಂಪನ್ಮೂಲ, ಅದು ಹಣಕಾಸಿನ ಸಂಪನ್ಮೂಲವಾಗಿರಬಹುದು, ಭೌತಿಕ ಮಾನವ ಸಂಪನ್ಮೂಲವಿರಬಹುದು – ಇವುಗಳಿಂದ ಮಹಿಳೆಯರನ್ನು ದೂರವಿಸಿರುವುದರಿಂದ ಅವರು ಅಶಕ್ತ, ದುರ್ಬಲ, ಅಂಚಿಗೆ ತಳ್ಳಲ್ಪಟ್ಟ ಗುಂಪಿಗೆ ಸೇರಿದವರಾಗಿದ್ದಾರೆ.

ಸಾಮಾಜಿಕ ರಚನೆಯ ವಿವಾಹ, ಕುಟುಂಬ ವ್ಯವಸ್ಥೆ, ಧಾರ್ಮಿಕ ನಂಬಿಕೆ, ಆಚರಣೆಗಳು ಇದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಉದಾಹರಣೆಗೆ, ವಿವಾಹದ ವ್ಯವಸ್ಥೆಯಲ್ಲಿ ವರದಕ್ಷಿಣೆ, ಮದುವೆ ನಂತರ ಹುಡುಗಿ ಹುಡುಗನ ಮನೆಯಲ್ಲಿ ವಾಸಿಸಬೇಕೆಂಬ ನಿಯಮ, ಆಸ್ತಿ ಹಕ್ಕಿನ ನಿರಾಕರಣೆ, ವಿವಾಹದ ಶಾಸ್ತ್ರಗಳು, ಕೌಟುಂಬಿಕ ರಚನೆಯಲ್ಲಿ ವಿವಾಹದ ನಂತರದ ಹುಡುಗಿಯ ಪಾತ್ರ, ಗುಣಗಳು, ನಿರೀಕ್ಷೆ, ಪುರುಷನ ಯಜಮಾನಿಕೆ, ಹೆಂಡತಿ, ತಾಯಿ ಪಾತ್ರದ ದುಡಿಮೆಯ ಅಗೋಚರತೆ, ಮುಂತಾದವುಗಳು ಮಹಿಳೆಯನ್ನು ಪರಾವಲಂಬಿ, ಆಶ್ರಯಕ್ಕೆ

ಯೋಗ್ಯಳು, ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದು ನೋಡುವುದು ಅವಳ ಅಶಕ್ತತೆಗೆ ಕಾರಣವಾಗುತ್ತವೆ. ಧರ್ಮಶಾಸ್ತ್ರಗಳು, ಧಾರ್ಮಿಕ ಆಚರಣೆಗಳು ಇವುಗಳನ್ನೇ ಪ್ರಚುರಪಡಿಸಿ ಗಟ್ಟಿಗೊಳಿಸುತ್ತವೆ. ಇಂತಹ ಪರಿಸರದಲ್ಲಿ ರೂಪುಗೊಂಡು ಹೆಣ್ಣುಮಕ್ಕಳು ಅಶಕ್ತರಾಗುವ ಸಾಧ್ಯತೆಯೆ ಹೆಚ್ಚು.

ಮಹಿಳಾ ಸಶಕ್ತೀಕರಣದ ಪ್ರಾರಂಭಿಕ ಹಂತವೆಂದರೆ, ಅವರ ಆರ್ಥಿಕ ಸಬಲೀಕರಣ. ಯಾವ ಯಾವ ಅಂಶಗಳು ಅವರನ್ನು ಆರ್ಥಿಕವಾಗಿ ಅಬಲರನ್ನಾಗಿ ಮಾಡುತ್ತವೋ ಅವುಗಳನ್ನು ಹೋಗಲಾಡಿಸಿ ಆರ್ಥಿಕ ಸಶಕ್ತತೆಯೆಡೆಗೆ ಅವರನ್ನು ಕರೆದೊಯ್ಯಬೇಕು. ಮಹಿಳೆಯರ ಆರ್ಥಿಕ ಸಶಕ್ತೀಕರಣವು ಅನೇಕ ವಿಧಾನ, ಕಾರ್ಯತಂತ್ರಗಳನ್ನು ಒಳಗೊಂಡಿದೆ. ಅವುಗಳೆಂದರೆ, ಹೆಣ್ಣುಮಕ್ಕಳಿಗೆ ಆರ್ಥಿಕ ಭದ್ರತೆ, ಕುಟುಂಬದ ಆಸ್ತಿಯಲ್ಲಿ ಸಮಪಾಲು ಈಗ ಇದು ದೊರೆಯುತ್ತಿದೆ. ಶಿಕ್ಷಣ, ಕೌಶಲ್ಯ, ಅಭಿವೃದ್ಧಿ, ತರಬೇತಿ, ಹಣಕಾಸಿನ ನೆರವು, ಮೂಲಭೂತ ಆವಶ್ಯಕತೆಗಳು ಪೂರೈಕೆ, ಸಾರ್ವಜನಿಕ ಸಂಪನ್ಮೂಲಗಳ ಬಳಕೆ ಹಾಗು ನಿಯಂತ್ರಣ, ಗೃಹಕೃತ್ಯಗಳಿಗೆ ಆರ್ಥಿಕ ಮನ್ನಣೆ, ಉದ್ಯೋಗಸ್ಥ ಮಹಿಳೆಯರಿಗೆ ಸೌಲಭ್ಯಗಳು, ಆರ್ಥಿಕಾಭಿವೃದ್ಧಿಯ ಲಾಭದಲ್ಲಿ ಸಮಪಾಲು, ವ್ಯಕ್ತಿತ್ವ ವಿಕಸನ, ಆತ್ಮವಿಶ್ವಾಸ, ಅರಿವು ಮೂಡಿಸುವಿಕೆ, ಇತ್ಯಾದಿ. ಆರ್ಥಿಕ ಸಶಕ್ತೀಕರಣವು ಮೂಲಭೂತ ಪ್ರಥಮ ಹಂತವಾದರೂ ಇದೊಂದೇ ಕ್ರಮದಿಂದ ಮಹಿಳೆಯರನ್ನು ಸಶಕ್ತಗೊಳಿಸಲು ಸಾಧ್ಯವಿಲ್ಲ. ಹಾಗೊಂದು ವೇಳೆ ಹಾಗಾಗುವುದಿದ್ದರೆ ಶ್ರೀಮಂತ ಮಹಿಳೆಯರು, ಉದ್ಯೋಗಸ್ಥ ಮಹಿಳೆಯರೆಲ್ಲರೂ ಸಂಪೂರ್ಣ ಸಶಕ್ತ ಮಹಿಳೆಯರಾಗಬೇಕಿತ್ತು. ಕೌಟುಂಬಿಕ, ಸಾಮಾಜಿಕ ರಚನೆ, ನಂಬಿಕೆ, ಮೌಲ್ಯ, ಆಚರಣೆ, ಅರ್ಥವ್ಯವಸ್ಥೆ, ಇವುಗಳು ಮಹಿಳಾ ಸಶಕ್ತೀಕರಣದ ಮೇಲೆ ಪ್ರಭಾವ ಬೀರುತ್ತವೆ.

## ಅಭಿವೃದ್ಧಿ ಆಯಾಮ


೧೯೮೦ರ ದಶಕದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಾನವ ಅಭಿವೃದ್ಧಿಗೆ ಒತ್ತು ನೀಡಿದ ಸಂದರ್ಭದಲ್ಲಿ 'ಮಹಿಳಾ ಸಶಕ್ತೀಕರಣ'ವು ಹುಟ್ಟಿಕೊಂಡಿತು ಎಂದು ಹೇಳಲಾಗುತ್ತದೆ. ನಾನು ಒಂದು ಸಂದರ್ಶನಕ್ಕೆ ಹೋದಾಗ ಮಹಿಳಾ ಅಭಿವೃದ್ಧಿಗೂ ಮಹಿಳಾ ಸಶಕ್ತೀಕರಣಕ್ಕೂ ವ್ಯತ್ಯಾಸವೇನು? ಎಂದು ಕೇಳಿದರು. ತುಂಬಾ ದಿನಗಳಿಂದ ನನ್ನನ್ನು ಈ ಪ್ರಶ್ನೆ ಕಾಡುತ್ತಿತ್ತು. ಸಂದರ್ಶನದ ಪ್ರಶ್ನೆ ನನ್ನನ್ನು ಈ ನಿಟ್ಟಿನಲ್ಲಿ ಚಿಂತಿಸುವಂತೆ ಮಾಡಿತು. ಅಭಿವೃದ್ಧಿ ಪರಿಕಲ್ಪನೆ ಹಾಗು ಪ್ರಕ್ರಿಯೆ ವಿವಿಧ ಹಂತಗಳನ್ನು ದಾಟಿ ಬಂದಿದೆ. ಅದು ಆರ್ಥಿಕ ಬೆಳವಣಿಗೆಯ ಮೇಲೆ ಮೊದಲು ಕೇಂದ್ರೀಕೃತವಾಗಿದ್ದು, ನಂತರ ಸಾಮಾಜಿಕ ನ್ಯಾಯ, ಮಾನವ ಅಭಿವೃದ್ಧಿಯ

ಕಡೆಗೆ ಹಾಗು ಸುಸ್ಥಿರ ಅಭಿವೃದ್ಧಿಗೆ ಪಲ್ಲಟಗೊಂಡಿತು. ಪ್ರಸ್ತುತ ಜಾಗತೀಕರಣ, ಮಾರುಕಟ್ಟೆ ವಿಸ್ತರಣೆ, ಅನುಭೋಗೀಕರಣ, ಸ್ಪರ್ಧೆ, ಲಾಭ ಇವುಗಳ ಸೂತ್ರದಿಂದ ಅಭಿವೃದ್ಧಿಯು ಕಟ್ಟಲ್ಪಡುತ್ತದೆ. ೮೦ರ ದಶಕದಲ್ಲಿ ಮಾನವ ಅಭಿವೃದ್ಧಿಗೆ ಒತ್ತು ನೀಡಿ ಜನರ ಸಾಮರ್ಥ್ಯ, ಆಯ್ಕೆಯ ಸ್ವಾತಂತ್ರ್ಯವನ್ನು ಹೆಚ್ಚಿಸುವುದರ ಮೂಲಕ ಮಾನವ ಅಭಿವೃದ್ಧಿ ಸಾಧಿಸಬಹುದೆಂಬ ಚಿಂತನೆ ಹುಟ್ಟಿಕೊಂಡಿತು. ಜನರಲ್ಲಿ ಒಂದು ಭಾಗವಾಗಿರುವ ಮಹಿಳೆಯರ ಮಾನವ ಅಭಿವೃದ್ಧಿಯು ಮಹತ್ವ ಪಡೆದುಕೊಂಡಿತು. ಮಾನವ ಅಭಿವೃದ್ಧಿಯ ಸರ್ವಾಂಗೀಣ ಅಭಿವೃದ್ಧಿಯ ಪ್ರಮುಖ ಭಾಗವಾಯಿತು. ಕಲ್ಯಾಣ ಕಾರ್ಯಕ್ರಮ ಹಾಗು ಬಡತನ ನಿರ್ಮೂಲನ ಕಾರ್ಯಕ್ರಮಗಳಲ್ಲಿ ಮಹಿಳೆಯರನ್ನು ಮೊಟ್ಟ ಮೊದಲಿಗೆ ಟಾರ್ಗೆಟ್ ಗುಂಪಿನಲ್ಲಿ ಸೇರಿಸಿಕೊಳ್ಳಲಾಯಿತು. ಮಹಿಳೆಯರು ಅಭಿವೃದ್ಧಿಗೆ ಅಪಾರವಾದ ಕೊಡುಗೆ ಸಲ್ಲಿಸುತ್ತಿದ್ದಾರೆ ಎನ್ನುವುದು ತಿಳಿದು ಬಂದ ನಂತರ ಅವರನ್ನು ಅಭಿವೃದ್ಧಿಯ ಪಾಲುದಾರರು, ಸಹಭಾಗಿಗಳನ್ನಾಗಿ ನೋಡಲಾಯಿತು. ಅದು ಮುಂದುವರೆದು 'ಮಹಿಳಾಭಿವೃದ್ಧಿ' ಎಂಬ ಪರಿಕಲ್ಪನೆಯು ಹುಟ್ಟಿಕೊಂಡಿತು.

ಮಹಿಳಾಭಿವೃದ್ಧಿಯಲ್ಲಿ ಎರಡು ಅಂಶಗಳನ್ನು ಗುರುತಿಸಬಹುದು. ಒಂದು ಅಭಿವೃದ್ಧಿಯ ಲಾಭ ಮಹಿಳೆಯರಿಗೆ ತಲುಪುವಂತೆ ಮಾಡುವುದು. ಇನ್ನೊಂದು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಭಾಗವಹಿಸುತ್ತಿರುವುದನ್ನು ಗುರುತಿಸಿ ಸಹಭಾಗಿಗಳನ್ನಾಗಿ ಸೇರಿಸಿಕೊಳ್ಳುವುದು. ಅಂದರೆ ಪುರುಷರಿಗೆ ಸಮನಾಗಿ ಅಥವಾ ಇನ್ನೂ ಹೆಚ್ಚಾಗಿ ಅಭಿವೃದ್ಧಿಗೆ ಕೊಡುಗೆ ಸಲ್ಲಿಸುತ್ತಿರುವಾಗ ಅದರ ಲಾಭಗಳನ್ನು ಪಡೆಯುವಲ್ಲಿಯೂ ಅವರು ಪಾಲುದಾರರಾಗಬೇಕು, ಅದರಿಂದ ವಂಚಿತರಾಗಬಾರದು. ಇದಕ್ಕಾಗಿ ಮೊದಲು ಅವರ ಕೊಡುಗೆಯನ್ನು ಪರಿಗಣಿಸುವ, ಗುರುತಿಸುವ, ಲೆಕ್ಕಾಚಾರ ಹಾಕುವ ಪ್ರಯತ್ನಗಳು ನಡೆದವು. ಅದೃಶ್ಯವಾಗಿದ್ದ ಅವರ ದುಡಿಮೆ, ಕೊಡುಗೆಗಳು ಗೋಚರವಾದವು. ಕೇವಲ ಫಲಾನುಭವಿಗಳನ್ನಾಗಿ ನೋಡುವುದಷ್ಟೇ ಅಲ್ಲ, ಸಹಭಾಗಿಗಳನ್ನಾಗಿ ನೋಡುವ ದೃಷ್ಟಿಕೋನವು ಬೆಳೆಯಿತು. ಅಭಿವೃದ್ಧಿಯನ್ನು ಜಂಡರ್ ವಿಶ್ಲೇಷಣೆಗೆ ಒಳಪಡಿಸಲಾಯಿತು.

ಅಭಿವೃದ್ಧಿ ಸ್ತ್ರೀವಾದಿ ಚಿಂತಕರು ಅದುವರೆಗೆ ಇದ್ದ ಕೆಲವು ತಪ್ಪು ನಂಬಿಕೆ, ಮಿಥ್ಯೆಗಳನ್ನು ಗುರುತಿಸಿ ಅವುಗಳು ಸುಳ್ಳು ಎಂದು ಸಾಬೀತುಪಡಿಸಿದರು. ಅಲ್ಲದೆ ಅಭಿವೃದ್ಧಿಗೆ ಮಹಿಳೆಯರು ನೀಡುತ್ತಿರುವ ಕೊಡುಗೆಗಳನ್ನು, ಅಭಿವೃದ್ಧಿಯ ಪರಿಣಾಮಗಳು ಸ್ತ್ರೀ–ಪುರುಷರ ಮೇಲೆ ಭಿನ್ನವಾಗಿ ಪರಿಣಾಮ ಬೀರುವುದನ್ನು ಬೆಳಕಿಗೆ ತಂದರು. ಅಭಿವೃದ್ಧಿಯಲ್ಲಿ ಮಹಿಳೆಯರನ್ನು ಒಳಗೊಳ್ಳದ ಹೊರತು

ಸಂಪೂರ್ಣ ಅಭಿವೃದ್ಧಿ ಸಾಧಿಸಲಾಗದು ಎಂದು ಪ್ರತಿಪಾದಿಸಿದರು. ಮಹಿಳೆಯರ ಅಭಿವೃದ್ಧಿ ಹಾಗು ಜಂಡರ್ ಅಂಶಗಳನ್ನು ಒಳಗೊಂಡ ಚಿಂತನೆಯು 'ಮಹಿಳಾ ಅಭಿವೃದ್ಧಿ' ಎಂಬ ಪರಿಕಲ್ಪನೆಯಾಗಿ ಹೊರಹೊಮ್ಮಿತ್ತು. ಇದು ಅಭಿವೃದ್ಧಿಯನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಇದರಲ್ಲಿ ಮಹಿಳೆಯರ ಪಾತ್ರವೇನು, ಅವರನ್ನು ಯಾವ ದೃಷ್ಟಿಕೋನದಿಂದ ನೋಡಲಾಗುತ್ತದೆ, ಅವರ ಕೊಡುಗೆಯೇನು, ಪಡೆಯುತ್ತಿರುವ ಲಾಭವೆಷ್ಟು, ಅವರ ಮೇಲೆ ಉಂಟಾಗುತ್ತಿರುವ ಪರಿಣಾಮಗಳೇನು ಎಂಬ ಅಂಶಗಳನ್ನು ಚರ್ಚಿಸುತ್ತದೆ. ದೇಶದ ಅಭಿವೃದ್ಧಿಗಾಗಿ ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವುದು, ಸಮಸ್ಯೆಗಳನ್ನು ಗುರುತಿಸಿ ಬಗೆಹರಿಸುವುದು, ಮಹಿಳೆಯರು ಇನ್ನೂ ಹೆಚ್ಚು ಕೊಡುಗೆ ಸಲ್ಲಿಸುವಂತೆ ಮಾಡುವುದು, ಅಭಿವೃದ್ಧಿಯ ಲಾಭಗಳಿಂದ ಅವರು ವಂಚಿತರಾಗದಂತೆ ಕ್ರಮಕೈಗೊಳ್ಳುವುದು, ಮಹಿಳಾಪರ ಅಭಿವೃದ್ಧಿ ಕಾರ್ಯನೀತಿ ಕಾರ್ಯಕ್ರಮಗಳನ್ನು ರೂಪಿಸುವುದು ಕಂಡುಬರುತ್ತದೆ. ಮಹಿಳೆಯರು ಅಭಿವೃದ್ಧಿಯ ಅವಿಭಾಜ್ಯ ಅಂಗವೆಂದು, ಅದರ ರೂವಾರಿಗಳೆಂದು ಪರಿಗಣಿಸಲಾಯಿತು.




ಮುಖ್ಯವಾಹಿನಿ ಅಭಿವೃದ್ಧಿಯಲ್ಲಿ ಮೊದಲಿಗೆ ಮಹಿಳೆಯರು ಕಲ್ಯಾಣ ಕಾರ್ಯಕ್ರಮಗಳ ಟಾರ್ಗೆಟ್ ಗುಂಪಿಗೆ ಸೇರಿಕೊಂಡರು. ಇಲ್ಲಿ ಮೂಲಭೂತ ಆವಶ್ಯಕತೆಗಳನ್ನು ಒದಗಿಸಲಾಯಿತು. ಅಂದರೆ ಬದುಕಲು ಅವಶ್ಯವಾದ ವಸ್ತು ಹಾಗು ಸೇವೆಗಳನ್ನು ಪೂರೈಸಿ ಅವರ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಲಾಯಿತು. ಇದು ಅತ್ಯಾವಶ್ಯಕ ಕ್ರಮವಾದರೂ ದೂರದೃಷ್ಟಿ ಹಾಗು ಸ್ತ್ರೀವಾದಿ ದೃಷ್ಟಿಕೋನದಿಂದ ನಕಾರಾತ್ಮಕ ಛಾಯೆಯನ್ನು ಹೊಂದಿದೆ. ಇಲ್ಲಿ ಮಹಿಳೆಯರನ್ನು ದುರ್ಬಲ ವರ್ಗದವರು, ಅಸಹಾಯಕರು, ಪರಾವಲಂಬಿಗಳು, ಸ್ವೀಕರಿಸುವವರು ಅನ್ನುವ ದೃಷ್ಟಿಕೋನದಿಂದ ನೋಡಲಾಗುತ್ತದೆ.

ಕೆಳಸ್ಥಾನದಲ್ಲಿರುವವರು, 'ಅಯ್ಯೋ ಪಾಪ' ಎಂದು ಭಿಕ್ಷೆ ನೀಡುವ ರೀತಿಯಲ್ಲಿ ಹಣಕಾಸಿನ ಸಹಾಯವನ್ನಾಗಲಿ, ವಿಶೇಷ ಸವಲತ್ತುಗಳನ್ನಾಗಲಿ ನೀಡುವುದು ಕಂಡುಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನೀಡುವ ಸ್ಥಾನದಲ್ಲಿರುವ ಪುರುಷರು ಶ್ರೇಷ್ಠರೆನಿಸಿಕೊಳ್ಳುತ್ತಾರೆ. ಮಹಿಳೆಯರ ಮೂಲಭೂತ ಆವಶ್ಯಕತೆಗಳು ಪೂರೈಸಿದರೂ ಸ್ತ್ರೀ–ಪುರುಷರ ನಡುವಿನ ಅಸಮಾನತೆ, ತಾರತಮ್ಯ ಮುಂದುವರೆಯುತ್ತದೆ. ಬಡತನದ ಸ್ತ್ರೀಕರಣವಾಗಿರುವ ಹೊತ್ತಿನಲ್ಲಿ ಖಂಡಿತ ಕಲ್ಯಾಣ ಕಾರ್ಯಕ್ರಮಗಳು ಬೇಕು. ಆದರೆ ಅದು ಅಷ್ಟಕ್ಕೇ ಸೀಮಿತವಾಗಬಾರದೆಂದು ಕಂಡುಕೊಂಡ ಸ್ತ್ರೀವಾದಿಗಳು ಅಭಿವೃದ್ಧಿಗೆ ಮಹಿಳೆಯರು ಸಲ್ಲಿಸುತ್ತಿರುವ ಕೊಡುಗೆಯನ್ನು ಲೆಕ್ಕಹಾಕಿ ಮಹಿಳೆಯರು ಅಭಿವೃದ್ಧಿಯ ಸಹಭಾಗಿಗಳು ಹಾಗು ಪಾಲುದಾರರು. ಹಾಗಾಗಿ ಅಭಿವೃದ್ಧಿ ಲಾಭ ಪಡೆಯುವುದು ಅವರ ಹಕ್ಕಾಗಿದೆ ಎಂದು ಪ್ರತಿಪಾದಿಸಿದರು. ಮಹಿಳೆಯರು ಕೇವಲ ಸ್ವೀಕರಿಸುವ ಫಲಾನುಭವಿಗಳಾಗಿ ನೋಡಬೇಕಿಲ್ಲ. ಬದಲಾಗಿ ಸಹಭಾಗಿಗಳನ್ನಾಗಿ ನೋಡಬೇಕೆಂದು ಹೇಳಲಾಗುತ್ತದೆ. ಈ ಕ್ರಮವು ಮಹಿಳೆಯರನ್ನು ಪುರುಷರಿಗೆ ಸಮಾನರಾಗಿ ನೋಡುತ್ತಾ ಅಭಿವೃದ್ಧಿ ಪ್ರಕ್ರಿಯೆಯ ಚಿಂತನೆ, ಯೋಜನೆ ಹಾಗು ಅನುಷ್ಠಾನದ ಹಂತಗಳಲ್ಲಿ ಭಾಗವಹಿಸುವಂತಾಗಬೇಕು ಎನ್ನುತ್ತದೆ.

ಮಹಿಳಾಭಿವೃದ್ಧಿಯು, ಮಹಿಳೆಯರನ್ನು ಸಾಮಾನ್ಯ ಕಾರ್ಯನೀತಿ ಮತ್ತು ಕಾರ್ಯಕ್ರಮಗಳಲ್ಲಿ ಟಾರ್ಗೆಟ್ ಗುಂಪಾಗಿ ಗುರುತಿಸಿ ಅಭಿವೃದ್ಧಿಯ ಲಾಭವು ಅವರಿಗೆ ತಲುಪುವಂತೆ ಮಾಡಲು ಪ್ರಯತ್ನಿಸುತ್ತದೆ. ಸೈದ್ಧಾಂತಿಕವಾಗಿ ಮಹಿಳೆಯರನ್ನು ಅಭಿವೃದ್ಧಿಯ ಪಾಲುದಾರರನ್ನಾಗಿ ಪರಿಗಣಿಸುತ್ತದೆಯೇ ಹೊರತು ಅದನ್ನು ಅನುಷ್ಠಾನದಲ್ಲಿ ತರಲು ಹೆಚ್ಚು ಒತ್ತು ನೀಡುವುದಿಲ್ಲ. ಮಹಿಳಾಭಿವೃದ್ಧಿಯು ಉದಾರವಾದಿ ಸ್ತ್ರೀವಾದವನ್ನು ಆಧರಿಸಿದ್ದು ಇರುವ ವ್ಯವಸ್ಥೆಯೊಳಗೆ ಅವರ ಪರಿಸ್ಥಿತಿಯನ್ನು ಸುಧಾರಿಸಬೇಕೆನ್ನುತ್ತದೆ. ಇದು 'ಅಭಿವೃದ್ಧಿಯಲ್ಲಿ ಮಹಿಳೆಯರು' (WID) ಪರಿಕ್ರಮದ ತತ್ವಗಳನ್ನು ಅನುಸರಿಸಿ ಮಹಿಳಾಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತದೆ. ಮಹಿಳಾಭಿವೃದ್ಧಿಯೂ ಎಲ್ಲಾ ಅಂಶಗಳನ್ನು ಒಳಗೊಂಡಿರುವಾಗ 'ಮಹಿಳಾ ಸಶಕ್ತೀಕರಣ' ಪರಿಕಲ್ಪನೆಯು ಹೇಗೆ ಅದಕ್ಕಿಂತ ಭಿನ್ನವಾದುದು ಎಂಬ ಪ್ರಶ್ನೆ ಏಳುತ್ತದೆ.

'ಅಭಿವೃದ್ಧಿಯಲ್ಲಿ ಮಹಿಳೆಯರು' ಪರಿಕಲ್ಪನೆಯನ್ನು ಆಧರಿಸಿದ ಮಹಿಳಾಭಿವೃದ್ಧಿಯನ್ನು ಟೀಕಿಸಿದ ಸ್ತ್ರೀವಾದಿಗಳು ಅದರ ಲೋಪದೋಷಗಳನ್ನು ಎತ್ತಿಹಿಡಿದು ಮಹಿಳೆಯರನ್ನು ಕೇವಲ ಟಾರ್ಗೆಟ್ ಗುಂಪಾಗಿ ಗುರುತಿಸಿ, ಇರುವ ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸಲು

ಸಾಧ್ಯವಿಲ್ಲ ಎಂದು ಹೇಳಿದರು. ಮಹಿಳೆಯರ ಕೆಳಸ್ಥಾನ ಹಾಗು ಅನನುಕೂಲ ಪರಿಸ್ಥಿತಿಗೆ ಜಂಡರ್ ಅಂಶಗಳು ಕಾರಣವಾಗಿದ್ದು ಸಾಮಾಜಿಕ ರಚನೆ, ಜಂಡರ್ ಸಂಬಂಧ ಹಾಗು ಅಧಿಕಾರ ರಚನೆಗಳಲ್ಲಿ ಮೂಲಭೂತ ಬದಲಾವಣೆಯಾಗದ ಹೊರತು ಮಹಿಳಾಭಿವೃದ್ಧಿ ಸಾಧ್ಯವಾಗುವುದಿಲ್ಲ ಎಂಬ ಪ್ರತಿಪಾದನೆಯಿಂದ 'ಜಂಡರ್ ಮತ್ತು ಅಭಿವೃದ್ಧಿ' ಪರಿಕಲ್ಪನೆಯು ಹುಟ್ಟಿಕೊಂಡಿತು. ಸ್ತ್ರೀ–ಪುರುಷರ ನಡುವೆ ಸಂಪೂರ್ಣ ಸಮಾನತೆ, ಮಹಿಳೆಯರ ವೈಯಕ್ತಿಕ ಬೆಳವಣಿಗೆ, ಮಹಿಳೆಯರ ಮಾನವ ಅಭಿವೃದ್ಧಿ, ಪುರುಷ ಪ್ರಧಾನ ಮೌಲ್ಯ ನಂಬಿಕೆಗಳನ್ನು ಹೋಗಲಾಡಿಸುವಿಕೆ, ಅಧಿಕಾರ, ಪುನರ್ ಮಹಿಳೆಯರ ಸಂಘಟನೆ, ಮುಂತಾದವುಗಳನ್ನು ಪ್ರತಿಪಾದಿಸಿತು. ಇದರ ಮುಂದಿನ ವಿಸ್ತೃತ ಚಿಂತನೆಯಾಗಿ 'ಮಹಿಳಾ ಸಶಕ್ತೀಕರಣ' ಹುಟ್ಟಿಕೊಂಡಿತು. ಮುಖ್ಯವಾಹಿನಿ ಅಭಿವೃದ್ಧಿಯನ್ನು 'ಮಾನವ ಅಭಿವೃದ್ಧಿ' ಕೇಂದ್ರಿತವಾಗಿ ವ್ಯಾಖ್ಯಾನಿಸಿದ ಸಂದರ್ಭದಲ್ಲಿ ಮಹಿಳೆಯರ ಮಾನವ ಅಭಿವೃದ್ಧಿಯು ಮಹತ್ವ ಪಡೆದು ಮಹಿಳೆಯರಲ್ಲಿ ಸಾಮರ್ಥ್ಯ ಬೆಳೆಸುವ, ಸಶಕ್ತಗೊಳಿಸುವ ಪ್ರಯತ್ನಗಳು ಪ್ರಾರಂಭವಾದವು.

ಮಹಿಳಾಭಿವೃದ್ಧಿಯು, ದೇಶದ ಅಭಿವೃದ್ಧಿಗಾಗಿ ಮಹಿಳೆಯರನ್ನು, ಮಹಿಳಾ ವಿಷಯಗಳನ್ನು ಪರಿಗಣಿಸಬೇಕೆಂದು ಹೇಳಿದರೆ, ಮಹಿಳೆಯರಿಗಾಗಿ ಮಹಿಳೆಯರನ್ನು ಸಶಕ್ತಗೊಳಿಸೋಣ, ನಂತರ ಅದು ತಾನಾಗೆ ದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ ಎನ್ನುತ್ತದೆ ಮಹಿಳಾ ಸಶಕ್ತೀಕರಣ. ಅಂದರೆ ಮಹಿಳಾ ಸಶಕ್ತೀಕರಣ ಮಹಿಳೆಯರನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಅಭಿವೃದ್ಧಿಯನ್ನು ಚರ್ಚಿಸುತ್ತದೆ. ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಮಹಿಳಾ ಸಶಕ್ತೀಕರಣ ತತ್ತ್ವ, ಹಂತ, ಕ್ರಮ – ಸೂಚಿಗಳನ್ನು ಸೈದ್ಧಾಂತಿಕವಾಗಿ ಹಾಗು ಪ್ರಾಯೋಗಿಕವಾಗಿ ಚರ್ಚಿಸುತ್ತದೆ. 'ಜಂಡರ್ ಮತ್ತು ಅಭಿವೃದ್ಧಿ' (GAD) ತತ್ವಗಳನ್ನು ಅಳವಡಿಸಿಕೊಂಡು ಸಾಮಾಜಿಕ ರಚನೆಯಲ್ಲಿ ಹಾಸುಹೊಕ್ಕಾಗಿರುವ ಪುರುಷಪ್ರಧಾನತೆಯನ್ನು ಪ್ರಶ್ನಿಸಿ ಹೋಗಲಾಡಿಸಬೇಕು ಎನ್ನುತ್ತದೆ. ಅತ್ಯಂತ ವಿಶಾಲವಾದ ದೃಷ್ಟಿಕೋನ ಹೊಂದಿರುವ ಮಹಿಳಾ ಸಶಕ್ತೀಕರಣದಿಂದ ಸ್ವಾವಲಂಬನೆ, ಆತ್ಮವಿಶ್ವಾಸ, ಆರ್ಥಿಕ ಸ್ವಾತಂತ್ರ್ಯ, ಮುಕ್ತ ಸಂಚಲನೆ, ನಿರ್ಧಾರ ಕೈಗೊಳ್ಳುವ ಹಕ್ಕು ಹಾಗು ಹಿಂಸಾಮುಕ್ತ ವಾತಾವರಣ ಮಹಿಳೆಯರಿಗೆ ದೊರಕುವಂತಾಗಬೇಕೆನ್ನುತ್ತದೆ.

ಮಹಿಳೆಯರ ಅಭಿವೃದ್ಧಿ ಮತ್ತು ಸಶಕ್ತೀಕರಣಕ್ಕಾಗಿ ಕಾರ್ಯನೀತಿ, ಕಾರ್ಯಕ್ರಮಗಳನ್ನು ಹಮ್ಮಿಕೊಂಡರಷ್ಟೇ ಸಾಲದು ಸಾಮಾನ್ಯ ಕಾರ್ಯನೀತಿ ಕಾರ್ಯಕ್ರಮಗಳಲ್ಲಿ ಸ್ತ್ರೀವಾದಿ ದೃಷ್ಟಿಕೋನವನ್ನು ಅಳವಡಿಸಿಕೊಂಡು ಮುಖ್ಯವಾಹಿನಿ

ಅಭಿವೃದ್ಧಿಯ ಲಾಭ ಮಹಿಳೆಯರಿಗೆ ಸಮವಾಗಿ ತಲುಪುವಂತೆ ಮಾಡಬೇಕು. ಅಂದರೆ ಅಭಿವೃದ್ಧಿ ಯೋಜನೆಗಳು ಮಹಿಳೆಯರನ್ನು ಯಾವ ದೃಷ್ಟಿಯಿಂದ ನೋಡುತ್ತವೆ? ಮಹಿಳೆಯರ ಆವಶ್ಯಕತೆಗಳನ್ನು ಪರಿಗಣಿಸಲಾಗಿದೆಯಾ? ಯೋಜನೆಗೆ ಯಾವ ಮೂಲದಿಂದ ಸಂಪನ್ಮೂಲಗಳನ್ನು ಸಂಗ್ರಹಿಸಲಾಗಿದೆ? (ಏಕೆಂದರೆ ಕೆಲವೊಮ್ಮೆ ಮಹಿಳೆಯರ ಹಿಡಿತಲ್ಲಿರುವ ಸಂಪನ್ಮೂಲವನ್ನು ಕಸಿದುಕೊಂಡು ನಂತರ ನಿಮಗೆ ಆದಾಯ ತರುವ ಬೇರೆ ಯೋಜನೆ ರೂಪಿಸಿಕೊಡುತ್ತೇವೆ ಎಂದು ಹೇಳುವ ಸಾಧ್ಯತೆ ಇರುತ್ತದೆ ಉದಾಹರಣೆಗೆ ಗ್ರಾಮದ ಗೋಮಾಳ, ಕಾಡಿನ ಉತ್ಪನ್ನಗಳ ಬಳಕೆ, ನೀರಿನ ಮೂಲಗಳು, ಸರ್ಕಾರದ ಸ್ವಾಧೀನದಲ್ಲಿರುವ ಭೂಮಿಯನ್ನು ಜೀವನೋಪಾಯಕ್ಕೆ ಬಳಸಿಕೊಳ್ಳುತ್ತಿರುತ್ತಾರೆ. ಅಭಿವೃದ್ಧಿ ಹೆಸರಿನಲ್ಲಿ ಅವುಗಳನ್ನು ಖಾಸಗಿ ವ್ಯಕ್ತಿ ಅಥವಾ ಕಂಪನಿಗಳಿಗೆ ಪರಭಾರೆ ಮಾಡಿದಾಗ ಬಡ ಮಹಿಳೆಯರು ಅವುಗಳ ಬಳಕೆಯಿಂದ ವಂಚಿತರಾಗುತ್ತಾರೆ).

ಯೋಜನೆಯ ಆಯವ್ಯಯದಲ್ಲಿ ಮಹಿಳೆಯರಿಗೆ ಹಣವನ್ನು ಮೀಸಲಿಡಲಾಗಿದೆಯೆ? ಯೋಜನೆಯ ಪರಿಣಾಮವನ್ನು ಮೌಲ್ಯಮಾಪನ ಮಾಡುವಾಗ ಅದು ಮಹಿಳೆಯರ ಮೇಲೆ ಯಾವ ರೀತಿ ಪರಿಣಾಮ ಬೀರಲಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆಯೆ? ಎಂದೆಲ್ಲ ಗಮನಿಸಬೇಕಾಗುತ್ತದೆ.

## ರಾಜಕೀಯ ಆಯಾಮ

ಒಂದು ರಾಷ್ಟ್ರವು ಅಳವಡಿಸಿಕೊಂಡ ರಾಜಕೀಯ ಆಡಳಿತ ವ್ಯವಸ್ಥೆಯು ಅದರ ಅಭಿವೃದ್ಧಿ ಹಾಗು ಮಾನವ ಏಳಿಗೆಯ ಮೇಲೆ ಅಪಾರವಾದ ಪ್ರಭಾವ ಬೀರುತ್ತದೆ. ಆಧುನಿಕ ಯುಗದಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆಯು ಹೆಚ್ಚು ಸೂಕ್ತ ವ್ಯವಸ್ಥೆಯಾಗಿದ್ದು ಜಗತ್ತಿನ ಬಹು ಪಾಲು ದೇಶಗಳು ಇದನ್ನು ಅಳವಡಿಸಿಕೊಂಡಿವೆ. ಪ್ರಜೆಗಳು ಕೇಂದ್ರಬಿಂದುವಾಗಿದ್ದು, ಪ್ರಜೆಗಳ ಪ್ರಭುತ್ವವನ್ನು ಹೊಂದಿರುವ 'ಪ್ರಜಾಪ್ರಭುತ್ವ' ರಾಜಕೀಯ ವ್ಯವಸ್ಥೆಯು ಸಮಸ್ತ ಜನರ ಒಳಿತನ್ನು ಸಾರುತ್ತದೆ. ಪ್ರಜಾಸಮೂಹದಲ್ಲಿ ಅರ್ಧಭಾಗದಷ್ಟಿರುವ ಮಹಿಳೆಯರು ಈ ವ್ಯವಸ್ಥೆಯಲ್ಲಿ ಎಲ್ಲದರಲ್ಲೂ ಸಮಪಾಲು ಪಡೆಯುವುದು ತಾತ್ವಿಕ ನೆಲೆಯಲ್ಲಿ ಸಾಧ್ಯವಿದೆ.


ಆದರೆ ಪುರುಷಪ್ರಧಾನತೆಯಿಂದ ಕೂಡಿರುವ ವ್ಯವಸ್ಥೆಯಲ್ಲಿ ಜಂಡರ್ ಅಂಶಗಳ ಕಾರಣದಿಂದ ಮಹಿಳೆಯರು ಸಮಪಾಲು ಪಡೆಯುವುದಿಲ್ಲ. ನಿರ್ಲಕ್ಷ್ಯಕ್ಕೆ ಒಳಗಾಗಿ ಅಂಚಿಗೆ ತಳ್ಳಲ್ಪಡುತ್ತಾರೆ. ಮಹಿಳೆಯರ ಒಟ್ಟು ಸಶಕ್ತೀಕರಣದಲ್ಲಿ ಅವರ ರಾಜಕೀಯ ಸಶಕ್ತೀಕರಣವು ಒಂದು ಭಾಗವಾಗಿದೆ. ರಾಜಕೀಯ ಸಶಕ್ತೀಕರಣವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ, ಪಾತ್ರ, ಪ್ರಾತಿನಿಧ್ಯ, ಮತದಾನ,

ಚುನಾವಣೆಗೆ ಸ್ಪರ್ಧಿಸುವುದು, ನಿರ್ಧಾರ ಕೈಗೊಳ್ಳುವ ಸ್ಥಾನಗಳನ್ನು ಹೊಂದುವುದು, ರಾಜಕೀಯ ವಿಚಾರಧಾರೆಯನ್ನು ಬೆಳೆಸುವುದು, ನಾಯಕತ್ವವನ್ನು ವಹಿಸುವುದು, ಮುಂತಾದವುಗಳನ್ನು ಬಿಂಬಿಸುತ್ತದೆ. ಇವೆಲ್ಲವನ್ನು ಗುಣಾತ್ಮಕವಾಗಿ ಹಾಗು ಪರಿಮಾಣಾತ್ಮಕವಾಗಿ ನೋಡಿದರೆ ಮಹಿಳೆಯರು ರಾಜಕೀಯ ಸಶಕ್ತತೆಯಲ್ಲಿ ಹಿಂದುಳಿದಿರುವುದು ಕಂಡುಬರುತ್ತದೆ. ಅಂದರೆ ರಾಜಕೀಯವಾಗಿ ಅವರು ಅಶಕ್ತರಾಗಿದ್ದಾರೆ.

ಇತರ ಕ್ಷೇತ್ರಗಳಲ್ಲಿ ಮಹಿಳೆಯರನ್ನು ಮುಂದೆ ತರುವಂತೆ, ರಾಜಕೀಯದಲ್ಲಿ ತರಲು ಸಾಧ್ಯವಿಲ್ಲ. ಬೇರೆಡೆಗಿಂತ ಹೆಚ್ಚಿನ ಅಡ್ಡಿಗಳು ಇಲ್ಲಿವೆ. ಪುರುಷಪ್ರಧಾನತೆಯು ಬಲವಾಗಿ ಬೇರೂರಿದ್ದು ಹಣ ಮತ್ತು ಅಧಿಕಾರ ಕೇಂದ್ರಬಿಂದುವಾದ ರಾಜಕೀಯ ಕ್ಷೇತ್ರವು ಮಹಿಳೆಯರಿಗೆ ಅಷ್ಟು ಸುಲಭವಾಗಿ ಪ್ರವೇಶ ನೀಡುವುದಿಲ್ಲ. ಮಹಿಳೆಯರಿಗೆ ದೊಡ್ಡ ಸವಾಲಾಗಿರುವ ಈ ಕ್ಷೇತ್ರವು ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಕೌಟುಂಬಿಕ, ರಾಜಕೀಯ ಹಿನ್ನಲೆಯಿರುವ, ಇಲ್ಲವೆ ಪುರುಷ ಸಾಮರ್ಥ್ಯಕ್ಕೆ ಸೆಡ್ಡು ಹೊಡೆಯುವ ಸಾಮರ್ಥ್ಯವಿರುವ ಹೆಣ್ಣುಮಕ್ಕಳು ಮಾತ್ರ ರಾಜಕೀಯ ಪ್ರವೇಶಿಸಲು ಸಾಧ್ಯ. ಸಾಮಾನ್ಯ ಗುಂಪಿನ ಮಹಿಳೆಯರು ತಾವಾಗೆ ರಾಜಕೀಯದಲ್ಲಿ ತೊಡಗುತ್ತೇವೆ ಎಂದರೆ ಅದು ಕಷ್ಟಸಾಧ್ಯದ ಮಾತು. ಹಣ ಬಲ, ತೋಳ್ಬಲವೆ ಹೆಚ್ಚು ಪ್ರಬಲವಾಗಿರುವ ರಾಜಕೀಯ ಕ್ಷೇತ್ರದಲ್ಲಿ ಅವೆರಡೂ ಇಲ್ಲದೆ ಮಹಿಳೆಯರು ಅಲ್ಲಿ ಉಳಿಯುವುದಾಗಲಿ, ಅಧಿಕಾರ ಸ್ಥಾನ ಪಡೆಯುವುದಾಗಲಿ ಕಷ್ಟ. ಇದನ್ನು ಮನಗಂಡ ಮಹಿಳೆಯರು ಕಳೆದ ೧೫ ವರ್ಷಗಳಿಂದ ಮಹಿಳೆಯರಿಗೆ ರಾಷ್ಟ್ರ ಹಾಗು ರಾಜ್ಯಮಟ್ಟದಲ್ಲಿ ಮೀಸಲಾತಿ ಕೇಳುತ್ತಿರುವುದು. ಕೆಳಮಟ್ಟದಲ್ಲಿ ಮಹಿಳಾ ಮೀಸಲಾತಿಯನ್ನು ಒಪ್ಪಿಕೊಂಡ ವ್ಯವಸ್ಥೆಯಾಗಲಿ, ಪುರುಷರಾಗಲಿ ರಾಷ್ಟ್ರಮಟ್ಟದಲ್ಲಿ ಅದನ್ನು ಏಕೆ ಒಪ್ಪಿಕೊಳ್ಳುತ್ತಿಲ್ಲ. ನಿಜವಾದ ಅಧಿಕಾರ ಕೇಂದ್ರೀಕೃತವಾಗಿರುವುದು ರಾಷ್ಟ್ರ ಹಾಗು ರಾಜ್ಯಮಟ್ಟದಲ್ಲಿ. ಅಲ್ಲಿ ಮೀಸಲಾತಿ ನೀಡಿದರೆ ಶೇ. ೩೩ರಷ್ಟು ಪುರುಷರು ಅಧಿಕಾರ ಸ್ಥಾನವನ್ನು ಬಿಟ್ಟುಕೊಡಬೇಕಾಗುತ್ತದೆ. ಅದಕ್ಕೆ ಮನಸ್ಸಿಲ್ಲದೆ ಪುರುಷರು ಇಲ್ಲದ ನೆಪ ಒಡ್ಡಿ ಮೀಸಲಾತಿ ಮಸೂದೆ ಜಾರಿಗೊಳ್ಳದಂತೆ ಅಡ್ಡಿ ಉಂಟುಮಾಡುತ್ತಿದ್ದಾರೆ.

### ಮನೋವಿಶ್ಲೇಷಣಾತ್ಮಕ ಆಯಾಮ

ಮಾನವರ ವ್ಯಕ್ತಿತ್ವ ನಿರ್ಮಾಣದಲ್ಲಿ ದೈಹಿಕ ಸ್ಥಿತಿ ಹಾಗು ಮಾನಸಿಕ ಸ್ಥಿತಿಗಳೆರಡೂ ಮುಖ್ಯವಾದವು. ದೇಹದ ರಚನೆ ದೈಹಿಕ ಬಲಾಢ್ಯತೆಯನ್ನು ಸೂಚಿಸಿದರೆ ಮಾನಸಿಕ ಸ್ಥಿತಿ ಮನೋಸ್ಥೈರ್ಯವನ್ನು ಬಿಂಬಿಸುತ್ತದೆ. ಆನುವಂಶಿಕ, ಆರೋಗ್ಯ, ಪೌಷ್ಟಿಕತೆ ಈ ಅಂಶಗಳು ದೈಹಿಕ ಸ್ಥಿತಿಯ ಮೇಲೆ ಪರಿಣಾಮ ಬೀರುತ್ತವೆ. ಪುರುಷರು




ದೈಹಿಕವಾಗಿ ಬಲಾಢ್ಯರಾದ್ದರಿಂದ ಹೆಚ್ಚು ಶ್ರಮದಾಯಕ ಕೆಲಸ ಮಾಡಬಲ್ಲರು. ಮಹಿಳೆಯರು ದೈಹಿಕವಾಗಿ ದುರ್ಬಲರಾಗಿರುವುದರಿಂದ ಶ್ರಮದಾಯಕ ಕೆಲಸ ಮಾಡಲಾಗುವುದಿಲ್ಲ ಎಂಬ ನಂಬಿಕೆಯಿದೆ. ದೈಹಿಕ ರಚನೆಗೆ ತಕ್ಕಂತೆ ನಾವು ಕೆಲಸ ಮಾಡಿದರೂ ಕೆಲವೊಮ್ಮೆ ನಿರಂತರವಾಗಿ ಕೆಲಸ ಮಾಡಿದರೆ ಅಥವಾ ಅನಿವಾರ್ಯವಾದರೆ ದೈಹಿಕ ಸ್ಥಿತಿಯನ್ನು ಮೀರಿ ಯಾವುದೇ ಕೆಲಸವನ್ನು ಮಾಡಬಹುದು. ಉದಾ:– ಕೃಷಿಯಲ್ಲಿ ನೇಗಿಲ ಉಳುಮೆ ಕೆಲಸವನ್ನು ಪುರುಷರು ಮಾತ್ರ ಮಾಡಲು ಸಾಧ್ಯ ಎಂಬ ತಪ್ಪು ಕಲ್ಪನೆಯಿದೆ. ಆದರೆ ಆಫ್ರಿಕಾದಲ್ಲಿ ಮಹಿಳೆಯರೇ ಉಳುಮೆ ಮಾಡುವುದು ಕಂಡುಬರುತ್ತದೆ. ಮಹಿಳೆಯರು ಮಾಡುವ ಕೆಲಸಗಳು ಶ್ರಮದಾಯಕವಲ್ಲ. ಅವುಗಳಿಗೆ ಕೌಶಲ್ಯವೂ ಬೇಕಿಲ್ಲ ಎಂಬ ಮತ್ತೊಂದು ತಪ್ಪು

ಕಲ್ಪನೆಯಿದೆ. ಒಟ್ಟಿನಲ್ಲಿ ಸ್ತ್ರೀಯರ ಶಾರೀರಿಕ ಸ್ಥಿತಿ ಮತ್ತು ಅವರು ಮಾಡುವ ಕೆಲಸಗಳನ್ನು ಇಟ್ಟುಕೊಂಡು ಅವರನ್ನು ದುರ್ಬಲರು, ಕೀಳು, ಅಸಹಾಯಕರು ಎಂದು ನೋಡುತ್ತಾ ಅಶಕ್ತರು ಎಂದು ಬಿಂಬಿಸಲಾಗುತ್ತದೆ. ಬಲಾಢ್ಯ ದೇಹರಚನೆಯೇ ದೈಹಿಕ ಶಕ್ತಿಯನ್ನು ಸೂಚಿಸುತ್ತದೆ ಎಂದು ಹೇಳಲಾಗುವುದಿಲ್ಲ. ದೈಹಿಕವಾಗಿ ಬಲಾಢ್ಯರಾದವರು  ಕೆಲವು ಕೆಲಸಗಳನ್ನು ಮಾಡಲು ಅಸಮರ್ಥರಾಗಿರಬಹುದು. ದೈಹಿಕವಾಗಿ ದುರ್ಬಲರಾಗಿದ್ದರೂ ಕೆಲವರು ಶ್ರಮದ ಕೆಲಸವನ್ನು ಮಾಡಲು ಸಮರ್ಥರಾಗಿರಬಹುದು.

ದೇಹದ ಸುಸ್ಥಿತಿ ಮತ್ತು ದೈಹಿಕ ಕೆಲಸಗಳನ್ನು ಮಾಡಲು ಸ್ವಸ್ಥ ಮನಸ್ಥಿತಿಯು ತುಂಬ ಮುಖ್ಯ. ವಿಶ್ವ ಆರೋಗ್ಯ ಸಂಸ್ಥೆ ಹೇಳುವಂತೆ ವ್ಯಕ್ತಿಯ ಒಟ್ಟು ಆರೋಗ್ಯದಲ್ಲಿ ಮಾನಸಿಕ ಆರೋಗ್ಯವು ಬಹು ಮುಖ್ಯ ಭಾಗವಾಗಿದೆ. ಮನೋವೈಜ್ಞಾನಿಕ ಆಯಾಮದಲ್ಲಿ ಮಹಿಳಾ ಸಶಕ್ತೀಕರಣವನ್ನು ನೋಡುವುದು ಈ ಭಾಗದ ಉದ್ದೇಶವಾಗಿದೆ.

ಆನುವಂಶಿಕತೆ, ಬೆಳೆಯುವ ವಾತಾವರಣ, ಹುಟ್ಟು, ಸ್ವಭಾವ, ಸಂದರ್ಭ, ಪರಿಸ್ಥಿತಿ, ದೈಹಿಕ ಆರೋಗ್ಯ, ಅಪಘಾತ, ಮುಂತಾದವುಗಳು ವ್ಯಕ್ತಿಯ ಮನೋಸ್ಥಿತಿಯನ್ನು ರೂಪಿಸುತ್ತವೆ. ಸ್ತ್ರೀ–ಪುರುಷರ ಮಾನಸಿಕ ಸ್ಥಿತಿಯಲ್ಲಿ ಭಿನ್ನತೆಯಿದೆಯೆ? ಎಂಬ ಪ್ರಶ್ನೆ ಏಳುತ್ತದೆ. ವ್ಯಕ್ತಿ ವ್ಯಕ್ತಿ ನಡುವೆ ಮಾನಸಿಕ ಸ್ಥಿತಿ ಭಿನ್ನತೆಯಿರುವಂತೆ ಸ್ತ್ರೀ–ಪುರುಷರ ನಡುವೆಯು ಇರುತ್ತದೆ. ಮೇಲೆ ತಿಳಿಸಿದ ಅಂಶಗಳು ಇಬ್ಬರ ಮನಸ್ಥಿತಿಯನ್ನು ವಿಭಿನ್ನವಾಗಿ ರೂಪಿಸಿದರೂ ಕೆಲವು ವಿಷಯಗಳಲ್ಲಿ ಸಾಮ್ಯವು ಕಂಡುಬರಬಹುದು.  ಇಲ್ಲಿ ಸ್ತ್ರೀ–ಪುರುಷರ ಮನೋವಿಜ್ಞಾನದ ಬಗೆಗಿಂತ ಸ್ತ್ರೀಯರ ಮನಸ್ಥಿತಿಗೂ ಸಶಕ್ತೀಕರಣಕ್ಕೂ ಇರುವ ಸಂಬಂಧ ಕುರಿತು ಚರ್ಚಿಸೋಣ.

ಪುರುಷರು ದೈಹಿಕವಾಗಿ ಪ್ರಬಲರಾಗಿದ್ದರೆ ಸ್ತ್ರೀಯರು ಮಾನಸಿಕವಾಗಿ ಪ್ರಬಲರು ಎಂಬ ನುಡಿಯಿದೆ. ಬಹುಶಃ ಜೈವಿಕ ಕ್ರಿಯೆಯ ನೋವು, ನಲಿವು, ಅನಾರೋಗ್ಯದ ಪರಿಣಾಮಗಳು, ಕೌಟುಂಬಿಕ ಹಾಗು ಸಾಮಾಜಿಕ ಕಟ್ಟುಪಾಡು, ನಿಷೇಧಗಳು, ಗೊಂದಲ, ಸಂಕಷ್ಟಕ್ಕೀಡುಮಾಡಿ ಮಹಿಳೆಯರನ್ನು ದೈಹಿಕವಾಗಿ ಜರ್ಜರಿತರನ್ನಾಗಿಸಿದರೂ, ಅನುಭವಿಸಿ ಅವುಗಳಿಗೆ ಒಗ್ಗಿಕೊಂಡು ಮಾನಸಿಕವಾಗಿ ಗಟ್ಟಿಯಾಗಬಹುದು. ಹಾಗೆ ಒಗ್ಗಿಕೊಳ್ಳಲು ಸಾಧ್ಯವಾಗದವರು ಚಂಚಲ ಮನಸ್ಸಿನ, ಗೀಳು ಪ್ರವೃತ್ತಿಯ, ಅತಿಯಾದ ಭಯ, ಅಭದ್ರ ಮನೋಭಾವ ಹೊಂದಿ ಮಾನಸಿಕವಾಗಿ ಅಸ್ವಸ್ಥರಾಗುತ್ತಾರೆ.

ಕೌಟುಂಬಿಕ, ಸಾಮಾಜಿಕ, ಆರ್ಥಿಕ ಅಸ್ಥಿರತೆ, ಪರಾವಲಂಬನೆ, ಆಕಸ್ಮಿಕ ಘಟನೆಗಳು (ಕಾಯಿಲೆ, ಅಪಘಾತ, ಸಾವು) ಮಹಿಳೆಯರ ಮನಸ್ಸನ್ನು ದುರ್ಬಲಗೊಳಿಸುವ ಸಾಧ್ಯತೆಯಿರುತ್ತದೆ. ಈ ಅಸ್ಥಿರ ಮನಸ್ಸು ದೇವರು, ದೆವ್ವ, ಮಾಯ, ಮಂತ್ರಗಳನ್ನು ನಂಬುವಂತೆ ಮಾಡುತ್ತದೆ. ಪುರುಷರಿಗಿಂತ ಮಹಿಳೆಯರು ಹೆಚ್ಚು ಆಸ್ತಿಕರಾಗಿರುತ್ತಾರೆ. ಸ್ವಾಮೀಜಿ, ಜ್ಯೋತಿಷ್ಯ, ಗುರುಗಳನ್ನು ನಂಬಿ ಪೂಜೆ, ವ್ರತಗಳಲ್ಲಿ ತೊಡಗುತ್ತಾರೆ. ಇದರಿಂದ ಅತಿಯಾಗಿ ಮೂಢನಂಬಿಕೆಗೂ ಒಳಗಾಗುತ್ತಾರೆ. ದೆವ್ವ ಹಿಡಿಯುವುದು ಮಹಿಳೆಯರಿಗೆ ಹೆಚ್ಚು. ದೆವ್ವ ಬಿಡಿಸುವ ದೇವಸ್ಥಾನ, ಮಸೀದಿ, ದರ್ಗಾಗಳಲ್ಲಿ ಫಲ ಜ್ಯೋತಿಷ್ಯ ನೀಡುವ ಮಂದಿರಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿರುತ್ತದೆ. ಕಾರ್ಯಗಳೆಲ್ಲವೂ ಯಾಂತ್ರಿಕವಾಗಿ ಆಪ್ತ ಸಮಾಲೋಚನೆಯ ರೀತಿಯಲ್ಲಿ ನಡೆಯುತ್ತಿದ್ದರೂ ಮಹಿಳೆಯರ ಮಾನಸಿಕ ಸ್ಥಿತಿಯು ಅಮೂರ್ತವಾಗಿ ಕೆಲಸ ಮಾಡುತ್ತಿರುತ್ತದೆ. ದೆವ್ವ ಹಿಡಿದಿದೆ ಎಂದು ಹೇಳುವ ಪ್ರಕರಣಗಳನ್ನು ಅಧ್ಯಯನ ಮಾಡಿದ ತಜ್ಞರು ಅವು ಮನೋವೈಜ್ಞಾನಿಕ ಸಮಸ್ಯೆಗಳಿಗೆ ಸಂಬಂಧಪಟ್ಟಿರುತ್ತವೆ ಅನ್ನುವುದನ್ನು ಸಾಬೀತುಪಡಿಸಿದ್ದಾರೆ.

ಪುರುಷಪ್ರಧಾನ ಮೌಲ್ಯಗಳು, ಸಮಾಜೀಕರಣ, ಕೌಟುಂಬಿಕ ಮತ್ತು ಸಾಮಾಜಿಕ ವಾತಾವರಣ ಹೆಣ್ಣುಮಕ್ಕಳ ಮನಸ್ಸನ್ನು ದುರ್ಬಲಗೊಳಿಸುತ್ತವೆಯೇ ಹೊರತು ಮೂಲತಃ ಅವರು ಮಾನಸಿಕವಾಗಿ ಪ್ರಬಲರು. ಮಾನಸಿಕವಾಗಿ ಪ್ರಬಲರಾದವರು ಸಶಕ್ತ ವ್ಯಕ್ತಿಗಳಾಗಿಯೂ ರೂಪುಗೊಳ್ಳುತ್ತಾರೆ. ಸಶಕ್ತಗೊಂಡ ಮಹಿಳೆಯರನ್ನು ಒಪ್ಪಿಕೊಳ್ಳಲಾಗದ ಪುರುಷ ಮನಸ್ಸು ಸಾಧ್ಯವಾದಾಗಲೆಲ್ಲ ಅವರನ್ನು ದುರ್ಬಲರನ್ನಾಗಿಸಲು ನೋಡುತ್ತಿರುತ್ತದೆ.

ಮನಸ್ಸು ಒಂದು ಶಕ್ತಿ. ಮಾನಸಿಕ ಸ್ವಸ್ಥತೆ ಸಶಕ್ತತೆಯ ಸಂಕೇತ. ಆಲೋಚನಾ ಶಕ್ತಿ, ಗ್ರಹಿಕೆ, ಕೌಶಲ್ಯ, ಜ್ಞಾಪಕಶಕ್ತಿ, ವಿವೇಚನೆ, ಕಲಿಕೆ, ಚಿಂತನಾಕ್ರಮ, ಮುಂದಾಲೋಚನೆ, ಕಲ್ಪನಾ ಶಕ್ತಿ, ಸೃಜನಶೀಲತೆ, ತಾರ್ಕಿಕ ಶಕ್ತಿ ಮುಂತಾದವುಗಳು ಮನೋಬಲವನ್ನು ರೂಪಿಸುವ ಅಂಶಗಳು. ಇವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿದ್ದು ಎಲ್ಲರಲ್ಲೂ ಎಲ್ಲವೂ ಇರುವುದಿಲ್ಲ. ಕೆಲವರಿಗೆ ಕೆಲವು ಅಂಶಗಳು ಪ್ರಬಲವಾಗಿದ್ದರೆ ಇನ್ನು ಕೆಲವು ದುರ್ಬಲವಾಗಿರುತ್ತವೆ, ಇಲ್ಲದೆಯೂ ಇರಬಹುದು. ಸಮಾಜವು ತನ್ನ ಆವಶ್ಯಕತೆಗೆ, ಅನುಕೂಲಕ್ಕೆ ತಕ್ಕಂತೆ ಸ್ತ್ರೀ–ಪುರುಷರಲ್ಲಿ ಕೆಲವು ಗುಣ ಶಕ್ತಿಗಳನ್ನು ಉದ್ದೇಶಪೂರ್ವಕವಾಗಿ ಬೆಳೆಸಿದರೆ ಇನ್ನು ಕೆಲವನ್ನು ಮುಚ್ಚಿಹಾಕುತ್ತದೆ, ಮುರುಟಿ ಹಾಕುತ್ತದೆ. ಪುರುಷ ಪ್ರಧಾನವಾಗಿರುವ ಸಮಾಜವು ಮಹಿಳೆಯರಲ್ಲಿ ಕೌಟುಂಬಿಕ ನಿರ್ವಹಣೆಗೆ ಆವಶ್ಯಕವಾದ ಗುಣ, ಕೌಶಲ್ಯ ಮನೋಭಾವವನ್ನು ಬೆಳೆಸುತ್ತದೆ.

ಇದಕ್ಕೆ ವಿರುದ್ಧವಾಗಿ ಪುರುಷರಲ್ಲಿ ಮನೆಯ ಹೊರಗೆ ನಿರ್ವಹಿಸಲು ಬೇಕಾಗುವ ಮನೋಭಾವವನ್ನು ಬೆಳೆಸುತ್ತದೆ. ಇದರಿಂದ ಸ್ತ್ರೀ–ಪುರುಷರ ಮಾನಸಿಕ, ಬೌದ್ಧಿಕ ಶಕ್ತಿ, ಕೌಶಲ್ಯ, ಪ್ರತಿಭೆಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಈ ಭಿನ್ನತೆ ಅವರ ಸಶಕ್ತತೆಯನ್ನು ಭಿನ್ನವಾಗಿ ರೂಪಿಸುತ್ತದೆ.

ಸಾಮಾಜೀಕರಣದ ಮೂಲಕ ಮಹಿಳೆಯರಲ್ಲಿ 'ತಾವು ಕೀಳು, ತಮ್ಮ ಸ್ಥಾನ ಪುರುಷರಿಗಿಂತ ಕೆಳಮಟ್ಟದ್ದು, ಹೆಣ್ಣಾಗಿ ಹುಟ್ಟಿರುವುದು ಪಾಪ, ಪೂರ್ವಜನ್ಮದ ಕರ್ಮ, ತಾವು ಅಬಲೆಯರು, ಅಸಹಾಯಕರು, ದುರ್ಬಲರು' ಎಂಬ ಮನೋಭಾವ, ನಂಬಿಕೆಯನ್ನು ಬೆಳೆಸುವುದರಿಂದ ಈ ಭಾವನೆಗಳು ಅವರಲ್ಲಿ ಅಂತರ್ಗತಗೊಂಡು ತಮ್ಮನ್ನು ತಾವೇ ಅಶಕ್ತರಂತೆ ಬಿಂಬಿಸಿಕೊಳ್ಳುತ್ತಾರೆ. ಆಚರಣೆ, ಶಾಸ್ತ್ರ, ಗಾದೆ ನುಡಿಗಳು, ಭಾಷೆ, ನಂಬಿಕೆಗಳು ಇದನ್ನು ಸ್ಥಿರ ಮಾದರಿಗಳ ಮೂಲಕ ಮತ್ತೆ ಮತ್ತೆ ಪ್ರಚುರ ಪಡಿಸುತ್ತಾ ಹೋಗುತ್ತವೆ. ಇದರಿಂದ ಮಹಿಳೆಯರ ಮಾನಸಿಕ ಸ್ಥಿತಿಯನ್ನು ರೂಪಿಸುವ ಅಂಶಗಳಿಗೂ ಮಹಿಳೆಯರ ಸಶಕ್ತೀಕರಣಕ್ಕೂ ಹತ್ತಿರದ ಸಂಬಂಧವಿದೆ.

## ಆರೋಗ್ಯ ಮತ್ತು ಪೌಷ್ಟಿಕತೆಯ ಆಯಾಮ

ಮಾನವರ ಅಸ್ತಿತ್ವಕ್ಕೆ ದೈಹಿಕ ಸ್ಥಿತಿಯೇ ಆಧಾರ. ದೇಹದ ರಚನೆ, ಅದರ ಆರೋಗ್ಯ ಸ್ಥಿತಿ–ಇವು ವ್ಯಕ್ತಿಯ ಜೀವನವನ್ನು ರೂಪಿಸುತ್ತವೆ. ದೈಹಿಕ ರಚನೆ ಜೈವಿಕ ಅನುವಂಶಿಕ ಹಾಗು ಪ್ರಕೃತಿದತ್ತವಾಗಿ ಬಂದಿರುವಂತದ್ದು. ಆರೋಗ್ಯವಂತ ದೇಹ ಸಶಕ್ತತೆಗೆ ಅತ್ಯಂತ ಆವಶ್ಯಕವಾದರೂ, ದೈಹಿಕ ನ್ಯೂನ್ಯತೆಗಳನ್ನು ಮೀರಿ ಸಶಕ್ತಗೊಂಡ, ಯಶಸ್ವಿಗೊಂಡ ವ್ಯಕ್ತಿಗಳು ನಮ್ಮ ನಡುವೆಯಿದ್ದಾರೆ.

ಮಹಿಳೆಯರ ದೇಹವು ಸಶಕ್ತಗೊಂಡ ವ್ಯಕ್ತಿಯಾಗಲು ಪೂರಕವಾಗಿದ್ದರೂ, ಜೈವಿಕಕ್ರಿಯೆಗಳು ಅವರ ಸಶಕ್ತತೆಗೆ ಅಡ್ಡಿಯಾಗಬಹುದು. ಆದರೆ ಜೈವಿಕ ಕ್ರಿಯೆಗಿಂತ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಅಂಶಗಳು ಅದರೊಡನೆ ಸೇರಿ ಅವರ ಸಶಕ್ತತೆಗೆ ಅಡ್ಡಿಯನ್ನುಂಟುಮಾಡುತ್ತವೆ. ಕುಟುಂಬ ಹಾಗು ಸಮಾಜದ ಬೆಂಬಲವಿದ್ದರೆ ಮಹಿಳೆಯರು ಜೈವಿಕ ಕ್ರಿಯೆಯ ಅಡ್ಡಿಗಳನ್ನು ಮೀರಿ ಸಬಲರಾಗಬಲ್ಲರು.

ಕುಟುಂಬದೊಳಗೆ ಆಹಾರ ನೀಡುವಲ್ಲಿ ಹೆಣ್ಣು ಗಂಡು ಮಕ್ಕಳ ನಡುವೆ ತಾರತಮ್ಯ ತೋರುವುದರಿಂದ ಹೆಣ್ಣು ಮಗು ಪ್ರಕೃತಿದತ್ತವಾಗಿ ಗಂಡು ಮಗುವಿಗಿಂತ ಶಕ್ತಿಯುತವಾಗಿದ್ದು, ಹೆಚ್ಚು ರೋಗ ನಿರೋಧಕ ಶಕ್ತಿಯನ್ನು ಹೊಂದಿದರೂ ಪೌಷ್ಟಿಕ ಆಹಾರ ಕೊರತೆಯಿಂದ ದುರ್ಬಲವಾಗುತ್ತದೆ. ಪುರುಷ ಪ್ರಧಾನ ನಂಬಿಕೆ, ಸಾಂಸ್ಕೃತಿಕ ಆಚರಣೆಗಳು ಆಹಾರ ಹಂಚಿಕೆಯಲ್ಲಿ ತಾರತಮ್ಯ ಉಂಟುಮಾಡುತ್ತವೆ. ಉದಾ:–

ಮನೆಯಲ್ಲಿ ಗಂಡಸರು, ಗಂಡುಮಕ್ಕಳು ಮೊದಲು ಊಟಮಾಡಬೇಕು, ಹೆಂಗಸರು, ಹೆಣ್ಣುಮಕ್ಕಳು ನಂತರ ಮಾಡಬೇಕೆಂಬ ಪದ್ಧತಿಯಿರುತ್ತದೆ. ಎಲ್ಲರೂ ಊಟಮಾಡಿ ಕೊನೆಯಲ್ಲಿ ಹೆಣ್ಣುಮಕ್ಕಳಿಗೆ ಬಿಸಿಯಾದ ಪೌಷ್ಟಿಕತೆಯಿಂದ ಕೂಡಿದ ಆಹಾರ ಉಳಿಯದೇ ಹೋಗಬಹುದು.

ಇನ್ನು ಒಂದು ನಂಬಿಕೆಯೆಂದರೆ ಪುರುಷರು ದೈಹಿಕವಾಗಿ ಬಲಾಢ್ಯರು, ಹೆಚ್ಚು ದುಡಿಯುತ್ತಾರೆ ಹಾಗಾಗಿ ಅವರಿಗೆ ಹೆಚ್ಚು ಪ್ರಮಾಣದ ಆಹಾರ ಬೇಕು. ಹೆಂಗಸರು ದೈಹಿಕವಾಗಿ ದುರ್ಬಲರು, ಕಡಿಮೆ ಕೆಲಸ ಮಾಡುತ್ತಾರೆ. ಆದ್ದರಿಂದ ಅವರಿಗೆ ಕಡಿಮೆ ಪೌಷ್ಟಿಕತೆ ಆಹಾರ ಸಾಕು ಎಂದು. ಆದರೆ ವಾಸ್ತವದಲ್ಲಿ ಕೆಲವು ಜೈವಿಕ ಕ್ರಿಯೆಗಳಿಂದ ಕೆಲವು ಸಂದರ್ಭಗಳಲ್ಲಿ ಮಹಿಳೆಯರಿಗೆ ಅಧಿಕ ಪ್ರಮಾಣದ ಪೌಷ್ಟಿಕ ಆಹಾರದ ಆವಶ್ಯಕತೆ ಇರುತ್ತದೆ. ಆದರೆ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳು ಅವರು ಅಧಿಕ ಆಹಾರ ತೆಗೆದುಕೊಳ್ಳಲು ಅಡ್ಡಿ ಉಂಟುಮಾಡುತ್ತವೆ. ಮಹಿಳೆಯರು ಮನೆ ಮಂದಿಗೆಲ್ಲ ಮೊದಲು ಆಹಾರ ನೀಡಿ ಅವರನ್ನು ಸಂತೃಪ್ತಿಪಡಿಸಬೇಕು. ಅವರ ಆರೋಗ್ಯ ಪೌಷ್ಟಿಕತೆಯ ಆವಶ್ಯಕತೆಯನ್ನು ನಿರ್ಲಕ್ಷಿಸಿ ಕುಟುಂಬದ ಸದಸ್ಯರಿಗೆ ಆದ್ಯತೆ ನೀಡುತ್ತಾರೆ. ಋತುಮತಿಯಾದಾಗ, ಗರ್ಭಿಣಿಯಾದಾಗ ಮತ್ತು ಬಾಣಂತಿ ಸಮಯದಲ್ಲಿ ಮಾತ್ರ ಸ್ತ್ರೀಯರಿಗೆ ಪೌಷ್ಟಿಕ ಆಹಾರ ನೀಡುವುದು ಕಂಡುಬರುತ್ತದೆ. ಇಲ್ಲಿ ವ್ಯಕ್ತಿಯಾಗಿ ಅನ್ನುವುದಕ್ಕಿಂತ ತಾಯಿಯಾಗಿ ಅವರ ಆಹಾರ ಆವಶ್ಯಕತೆಗೆ ಮಹತ್ವ ನೀಡಲಾಗುತ್ತದೆ. ಬಡ ಕುಟುಂಬದ ಮಹಿಳೆಯರ ಪರಿಸ್ಥಿತಿ ಮತ್ತಷ್ಟು ಹೀನಾಯವಾಗಿರುತ್ತದೆ. ಕುಟುಂಬದ ಸದಸ್ಯರ ಹೊಟ್ಟೆ ತುಂಬಿಸುವ ಹೋರಾಟದಲ್ಲಿ ತನ್ನ ಹೊಟ್ಟೆಗೆ ಕೊರತೆ ಉಂಟು ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಭಾರತದಲ್ಲಿ ತಾಯಂದಿರ ಮರಣದ ದರ ಅಧಿಕವಾಗಿರುವುದಕ್ಕೆ ಪೌಷ್ಟಿಕ ಆಹಾರದ ಕೊರತೆಯೂ ಒಂದಾಗಿದೆ. ಪೌಷ್ಟಿಕತೆಯಿಂದ ದೈಹಿಕವಾಗಿ ದುರ್ಬಲಳಾಗುವ ಮಹಿಳೆಯಿಂದ ಸಶಕ್ತತೆಯನ್ನು ನಿರೀಕ್ಷಿಸುವುದಾದರು ಹೇಗೆ?

## ಕಾನೂನು ಆಯಾಮ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಷ್ಟ್ರವನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಸಂವಿಧಾನ ವ್ಯವಸ್ಥೆಯನ್ನು ರೂಪಿಸಿಕೊಳ್ಳಲಾಗಿದೆ. ಇದು ಆಡಳಿತ ನಿರ್ವಹಣೆಗೆ ಹಾಗು ಜನರ ಹಿತ ಕಾಪಾಡಲು ಆಧಾರವಾಗಿದೆ. ಅದು ಜನರು ಶಾಂತಿ ನೆಮ್ಮದಿಯಿಂದ ಜೀವನ ನಡೆಸಲು ಅವರ ಹಕ್ಕು, ಸ್ವಾತಂತ್ರ್ಯ, ಸಮಾನತೆಯನ್ನು ಕಾಪಾಡಲು ಅನ್ಯಾಯ, ಹಿಂಸೆ, ಸರ್ವಾಧಿಕಾರ, ದೌರ್ಜನ್ಯಗಳನ್ನು ತಡೆಯಲು

ಹಾಕಿಕೊಂಡಂತಹ ಚೌಕಟ್ಟಾಗಿದೆ. ಎಲ್ಲಾ ವರ್ಗದ ಜನರು ಸಮಾನ ಅವಕಾಶ ಪಡೆದು ವ್ಯಕ್ತಿತ್ವ ಬೆಳವಣಿಗೆ, ಅಭಿವೃದ್ಧಿ ಹೊಂದಿ ದೇಶಕ್ಕೆ ಕೊಡುಗೆ ಸಲ್ಲಿಸುವಂತೆ –ಅದು ಮಾಡುತ್ತದೆ. ಜನರ ಹಕ್ಕುಬಾಧ್ಯತೆ, ಸ್ವಾತಂತ್ರ್ಯ, ಖಾಸಗಿ ಜೀವನದ ಸುರಕ್ಷತೆ, ಭದ್ರತೆ, ಶಿಕ್ಷಣ, ಕೌಶಲ್ಯ, ಉದ್ಯೋಗ, ಆದಾಯ ಗಳಿಕೆ, ಸಾರ್ವಜನಿಕ ಚಟುವಟಿಕೆಯಲ್ಲಿ ಭಾಗವಹಿಸುವಿಕೆ, ಅಭಿವೃದ್ಧಿ ಲಾಭಗಳಲ್ಲಿ ಪಾಲುದಾರಿಕೆಯನ್ನು ಪಡೆಯುವುದರೊಂದಿಗೆ ಸಶಕ್ತಗೊಳ್ಳಲು ಅವಕಾಶ ಮಾಡಿಕೊಡುತ್ತದೆ.

ಕಾನೂನು ಎಲ್ಲಾ ಗುಂಪಿನ ಜನರನ್ನು ಸಮಾನವಾಗಿ ನೋಡುತ್ತದೆ. ಎಲ್ಲಾ ಜನರಿಗೂ ಒಂದೇ ಕಾನೂನು ಇರುತ್ತದೆ. ಇಲ್ಲಿ ಭೇದಭಾವಕ್ಕೆ ಅವಕಾಶವಿಲ್ಲ. ಕಾನೂನು ಲಿಂಗ ಅಥವಾ ಜಂಡರ್ ಆಧಾರದ ಮೇಲೆ ತಾರತಮ್ಯವನ್ನು ತೋರುವುದಿಲ್ಲ. ಹಾಗಾಗಿ ಸಂವಿಧಾನದ ಸವಲತ್ತು ಹಾಗು ಕಾನೂನು ರಕ್ಷಣೆ ಮಹಿಳೆಯರ ಸಶಕ್ತತೆಗೆ ಪೂರಕವಾಗಿದೆ. ಆದರೂ ವಾಸ್ತವದಲ್ಲಿ ಎಲ್ಲಾ ಸಂದರ್ಭದಲ್ಲೂ ಎಲ್ಲಾ ಗುಂಪಿನ ಮಹಿಳೆಯರಿಗೂ ಕಾನೂನು ಅವರ ರಕ್ಷಣೆಗೆ ಬರುತ್ತದೆ ಎಂದು ಹೇಳಲಾಗುವುದಿಲ್ಲ. ಅನೇಕ ಬಾರಿ ಕಾನೂನಿನ ಸವಲತ್ತುಗಳು ಕೇವಲ ಭಾಷಣ ಮಾಡುವುದಕ್ಕೆ, ಭರವಸೆ ನೀಡುವುದಕ್ಕೆ, ಕಾಗದಕ್ಕೆ ಸೀಮಿತವಾಗಿರುವುದು ಕಂಡುಬರುತ್ತದೆ. ಕೌಟುಂಬಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗು ಜಂಡರ್ ಅಂಶಗಳು ಕಾನೂನಿನ ರಕ್ಷಣೆ ಪಡೆಯಲು ಅಡ್ಡಿ ಉಂಟುಮಾಡುತ್ತವೆ. ಅದರಲ್ಲೂ ವಿಶೇಷವಾಗಿ ಪುರುಷಪ್ರಧಾನ ಮೌಲ್ಯ ನಂಬಿಕೆಗಳು ಮಹಿಳೆಯರು ಕಾನೂನಿನ ಸವಲತ್ತುಗಳಿಂದ ವಂಚಿತರಾಗುವಂತೆ ಮಾಡುತ್ತವೆ.

ಭಾರತದಲ್ಲಿ ಸಂವಿಧಾನವೆ ಜಂಡರ್ ಸಮಾನತೆಯನ್ನು ಎತ್ತಿಹಿಡಿದು ಜಂಡರ್ ತಾರತಮ್ಯವನ್ನು ನಿಷೇಧಿಸಿರುವುದು ಮಹಿಳೆಯರ ಸಶಕ್ತೀಕರಣಕ್ಕೆ ಆಧಾರವಾಗಿದೆ. ಮಹಿಳೆಯರಲ್ಲಿ ಕಾನೂನಿನ ಅರಿವು, ಜಾಗೃತಿ ಮೂಡಿಸಿ, ಕಾನೂನಿನ ಅನುಷ್ಠಾನದಲ್ಲಿ ಜಂಡರ್ ಸೂಕ್ಷ್ಮತೆಯನ್ನು ಬೆಳೆಸುವುದಾದರೆ ಕಾನೂನು ಮಹಿಳಾ ಸಶಕ್ತೀಕರಣದ ಪ್ರಬಲ ಅಸ್ತ್ರವಾಗುತ್ತದೆ. ಆದರೂ ವಾಸ್ತವದಲ್ಲಿ ಕಾನೂನು ಸವಲತ್ತುಗಳನ್ನು ಮಹಿಳೆಯರು ಉಪಯೋಗಿಸಿಕೊಳ್ಳಲಾರದಂತಹ ಪರಿಸ್ಥಿತಿಗಳು ಸೃಷ್ಟಿಯಾಗುತ್ತವೆ. ಶಾಂತಿ, ನೆಮ್ಮದಿ, ಪ್ರೀತಿ, ಸಂಬಂಧಗಳಿಗೆ ಆದ್ಯತೆ ನೀಡುವ ಮಹಿಳೆಯರು ಅವುಗಳನ್ನು ಉಳಿಸಿಕೊಳ್ಳಲು ಕಾನೂನಿನ ಮೂಲಕ ದೊರಕಬಹುದಾದ ಹಕ್ಕು ಸ್ವಾತಂತ್ರ್ಯ ಸಮಾನತೆಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಇದರಿಂದ ಅಶಕ್ತ ಅಸಹಾಯಕ ಹಾಗು ಸಂಕಷ್ಟಕ್ಕೂ ಒಳಗಾಗಬೇಕಾಗುತ್ತದೆ. ಉದಾಹರಣೆಗೆ ಕಾಯಿದೆ ಪ್ರಕಾರ ಕುಟುಂಬದ

ಆಸ್ತಿಯಲ್ಲಿ ಸಮಪಾಲು ಪಡೆಯುವ ಹಕ್ಕಿದ್ದರೂ ಆಸ್ತಿ ಕೇಳಿದರೆ ಎಲ್ಲಿ ಅಣ್ಣತಮ್ಮಂದಿರ ಸಂಬಂಧ, ಪ್ರೀತಿ ಕಳೆದುಕೊಳ್ಳಬೇಕಾಗುತ್ತದೋ ಎಂಬ ಅಂಜಿಕೆಯಿಂದ ಆಸ್ತಿ ಹಕ್ಕನ್ನು ಬಿಟ್ಟುಕೊಡುತ್ತಾರೆ. ಕೌಟುಂಬಿಕ ಹಿಂಸೆ ತಡೆಗಟ್ಟುವ ಕಾನುನಿದ್ದರೂ ಸಮಾಜಕ್ಕೆ ಹೆದರಿ, ಮಕ್ಕಳಿಗೋಸ್ಕರ ಅಥವಾ ಬದುಕಿಗೆ ಪರ್ಯಾಯ ವ್ಯವಸ್ಥೆ ಇಲ್ಲದಿರುವಂತಹ ಪರಿಸ್ಥಿತಿಯಲ್ಲಿ ಕೌಟುಂಬಿಕ ಹಿಂಸೆಯನ್ನು ಸಹಿಸಿಕೊಳ್ಳಬೇಕಾಗುತ್ತದೆ. ದ್ವಿ-ಪತ್ನಿತ್ವವು ಅಪರಾಧವಾಗಿದ್ದರೂ ಅದನ್ನು ಇಬ್ಬರೂ ಮಹಿಳೆಯರು ಒಪ್ಪಿಕೊಳ್ಳಬೇಕಾದಂತಹ ಪರಿಸ್ಥಿತಿ ಇರುತ್ತದೆ. ಇದರಿಂದ ಕೇವಲ ಕಾನೂನುಗಳು ಇದ್ದರೆ ಸಾಲದು, ಅವುಗಳನ್ನು ಬಳಸಿಕೊಳ್ಳುವಂತ ಸೂಕ್ತ ವಾತಾವರಣವೂ ಇರಬೇಕಾಗುತ್ತದೆ. ಕಾನೂನುಗಳನ್ನು ಅನುಷ್ಠಾನಗೊಳಿಸುವ ಪೊಲೀಸ್, ನ್ಯಾಯಾಂಗ ವ್ಯವಸ್ಥೆಗಳು ಮಹಿಳಾ ಪರ ದೃಷ್ಟಿಕೋನ ಹೊಂದಿ ಕಾರ್ಯಚರಣೆ ಮಾಡಬೇಕು. ಆವಾಗಲೆ ಕಾನೂನು ಮಹಿಳಾ ಸಶಕ್ತೀಕರಣಕ್ಕೆ ಪೂರಕ ವ್ಯವಸ್ಥೆಯಾಗುತ್ತದೆ.

ಸಂವಿಧಾನ ಹಾಗು ಕಾನೂನು ಸವಲತ್ತುಗಳನ್ನು ಬಳಸಿಕೊಂಡು ಸ್ವತಂತ್ರ ವ್ಯಕ್ತಿಯಾಗಲು ಪ್ರಯತ್ನಿಸುವ ಮಹಿಳೆಯನ್ನು ಕುಟುಂಬವಾಗಲಿ, ಸಮಾಜವಾಗಲಿ, ಪುರುಷ ಮನಸ್ಸಾಗಲಿ ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಒಂದು ವೇಳೆ ಕುಟುಂಬ ಸಮಾಜದ ನಿರೀಕ್ಷೆಗಳನ್ನು ಮೀರಿ ಒಬ್ಬ ಮಹಿಳೆ ಕಾನೂನಿನ ಸವಲತ್ತುಗಳ ಚೌಕಟ್ಟಿನಲ್ಲಿ ಸ್ವತಂತ್ರಳಾಗಿ ಬದುಕುತ್ತಿದ್ದರೆ ಸಮಾಜವು ಅವಳನ್ನು ಪ್ರತ್ಯೇಕಿಸುತ್ತಾ ವಿಚಿತ್ರವಾಗಿ, ವ್ಯಂಗ್ಯವಾಗಿ ನೋಡುತ್ತದೆ.

* * * * *

## ಅಧ್ಯಾಯ – ೩

# ಮಹಿಳಾ ಸಶಕ್ತೀಕರಣದ ಬೆಳವಣಿಗೆಯ ಹಂತಗಳು

ಹಿಂದಿನ ಅಧ್ಯಾಯಗಳಲ್ಲಿ ಶಕ್ತಿ, ಸಶಕ್ತೀಕರಣ ಹಾಗೂ ಮಹಿಳಾ ಸಶಕ್ತೀಕರಣ ಪರಿಕಲ್ಪನೆಗಳ ಅರ್ಥ, ಆಯಾಮ, ಸ್ವರೂಪಗಳನ್ನು ಚರ್ಚಿಸಲಾಯಿತು. ಈ ಅಧ್ಯಾಯದಲ್ಲಿ ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯು ವಿವಿಧ ಹಂತಗಳಲ್ಲಿ ಹೇಗೆ ಬೆಳೆದು ಬಂದಿತು, ಯಾವ ರೀತಿಯ ಪ್ರಯತ್ನಗಳು ನಡೆದವು ಅನ್ನುವುದನ್ನು ತಿಳಿಯಲಾಗುವುದು.

ಯಾವುದೇ ವ್ಯಕ್ತಿ ಅಥವಾ ಗುಂಪಿನ ಸಶಕ್ತೀಕರಣವು ಯಾವುದೇ ಜಾತಿ, ಧರ್ಮ, ಲಿಂಗ, ವರ್ಗ, ಪ್ರದೇಶಗಳ ಮಿತಿಯನ್ನು ಮೀರಿ ಎರಡು ಹಂತಗಳಲ್ಲಿ ನಡೆಯುತ್ತದೆ. ಒಂದು ವೈಯಕ್ತಿಕ ಹಂತದಲ್ಲಿ, ಎರಡು ಸಾಮುದಾಯಿಕ ಹಂತದಲ್ಲಿ. ವೈಯಕ್ತಿಕ ಹಂತದಲ್ಲಿ ಅದು ಆಂತರಿಕವಾಗಿ ಜನ್ಮತಃ ವಾತಾವರಣದ ಮೂಲಕ ಮೂಡಿಬರಬಹುದು. ಕೆಲವು ವ್ಯಕ್ತಿಗಳು ಜನ್ಮತಃ ಸಶಕ್ತರಾಗಿ ಬೆಳೆದು ಬಂದಿರುತ್ತಾರೆ. ಜನಟಿಕ್ ಆಗಿರಬಹುದು, ಕುಟುಂಬದ ಬೆಂಬಲ ಹಾಗೂ ಸೂಕ್ತ ವಾತಾವರಣ ಅವರನ್ನು ಸಶಕ್ತ ವ್ಯಕ್ತಿಯನ್ನಾಗಿ ರೂಪಿಸುತ್ತವೆ. ಇವು ಯಾವುದೂ ಇಲ್ಲದವರು ಸ್ವಪ್ರಯತ್ನದಿಂದಲೂ ಸಮರ್ಥ ವ್ಯಕ್ತಿಗಳಾಗಬಹುದು. ಕೆಲವರು ತಮ್ಮ ಸ್ವಸಾಮರ್ಥ್ಯ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಸಶಕ್ತರಾಗಿ ಬೆಳೆಯುತ್ತಾರೆ. ಕೌಟುಂಬಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಅಂಶಗಳ ಕಾರಣದಿಂದ ದುರ್ಬಲರಾದ, ಅಶಕ್ತರಾದ ಜನರಿಗೆ ಹೊರಗಿನ ಮಧ್ಯಪ್ರವೇಶದ ಆವಶ್ಯಕತೆಯಿದೆ. ಅಂದರೆ ಅವರು ತಾವಾಗಿಯೇ ಸಶಕ್ತರಾಗುವುದು ಕಷ್ಟಸಾಧ್ಯ. ಅನುಕೂಲ ಪರಿಸ್ಥಿತಿಯಲ್ಲಿರುವವರು, ಸಶಕ್ತರು, ಸರ್ಕಾರ, ಸರ್ಕಾರ ಸಂಸ್ಥೆಗಳು, ಸಮಾಜದ ಬಗ್ಗೆ ಅಪಾರವಾದ ಕಾಳಜಿವುಳ್ಳವರು. ಇಂತಹವರನ್ನು ಸಬಲಗೊಳಿಸುವ ಪ್ರಯತ್ನ ಮಾಡಬೇಕು.

ಸಾಮುದಾಯಿಕ ಹಂತದಲ್ಲಿ ಸಾಂಸ್ಥಿಕ ಮಧ್ಯಪ್ರವೇಶಿಕೆ ಮತ್ತು ಪ್ರಯತ್ನಗಳು ಮುಖ್ಯವಾಗುತ್ತವೆ. ಆದರೆ ಇದರಲ್ಲಿ ಕೆಲವು ಸಂಕೀರ್ಣ ಅಂಶಗಳು ತಳುಕುಹಾಕಿಕೊಂಡಿವೆ. ಹೊರಗಿನಿಂದ ಬೆಂಬಲ, ಪ್ರಯತ್ನ ಮಾಡಬೇಕಾದ ವ್ಯಕ್ತಿಗಳು ಸಂಸ್ಥೆಗಳು ಯಾಕೆ ಇದರಲ್ಲಿ ಆಸಕ್ತಿವಹಿಸುತ್ತವೆ? ಅವುಗಳಿಗೇನು ಲಾಭ? ಸ್ವಂತ ಲಾಭ, ಅನುಕೂಲ, ಹೆಸರು, ಮನ್ನಣೆ ದೊರಕದ ಹೊರತು ಅವುಗಳು ಯಾಕೆ ಈ ಅಶಕ್ತರನ್ನು ಸಶಕ್ತಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತವೆ? ಈ ಪ್ರಶ್ನೆಗಳನ್ನು ಮೀರಿ ಅವು ತೊಡಗುತ್ತವೆ ಎಂದರೆ ಮೂರು ಮುಖ್ಯ ಆವಶ್ಯಕತೆಗಳು ಬೇಕು.


೧. ಸಮಯ, ಶ್ರಮ

೨. ಹಣಕಾಸಿನ ಮೂಲ

೩. ಮಾನಸಿಕ ಇಚ್ಛಾಶಕ್ತಿ

ಈ ಮೂರು ಇರುವವರು ಮಾತ್ರ ಸಶಕ್ತೀಕರಣದ ಪ್ರಕ್ರಿಯೆಯಲ್ಲಿ ತೊಡಗಲು ಸಾಧ್ಯ. ತೊಡಗಿದವರು ಅಶಕ್ತರನ್ನು ನೋಡುವ ದೃಷ್ಟಿಕೋನ ಹೇಗಿದೆ, ಪ್ರಾಮಾಣಿಕತೆ ಎಷ್ಟಿದೆ ಅನ್ನುವುದು ಮುಖ್ಯ. ಈ ಎಲ್ಲಾ ಮೂಲಗಳನ್ನು ಹೊಂದಿರುವ ಇವರು ನೀಡುವ ಸ್ಥಾನದಲ್ಲಿದ್ದು ಶ್ರೇಷ್ಠರು, ಮೇಲುಸ್ತರಕ್ಕೆ ಸೇರಿದವರೆಸಿಕೊಂಡರೆ ಸಶಕ್ತೀಕರಣಕ್ಕೆ ಒಳಗಾಗುವವರು ಕೆಳಸ್ತರದಲ್ಲಿರುವವರು, ಕನಿಷ್ಠರು ಎಂಬ ಭಾವನೆಗೆ ಒಳಗಾಗುತ್ತಾರೆ. ಇವರಿಬ್ಬರ ನಡುವೆಯೇ ಅಂತರ, ತಾರತಮ್ಯ ಏರ್ಪಡುತ್ತದೆ. ಇವರು ಮೇಲಿನವರ ಮರ್ಜಿ ಕಾಯಬೇಕಾಗುತ್ತದೆ. ಅವರನ್ನು ಅವಲಂಬಿಸಬೇಕಾಗುತ್ತದೆ. ಉದಾ: ಸರ್ಕಾರದ ಯೋಜನೆ ಕಾರ್ಯಕ್ರಮಗಳ ಮೂಲಕ ಜನರನ್ನು ಸಶಕ್ತಗೊಳಿಸುವುದಾದರೆ ಅವುಗಳನ್ನು ಜಾರಿಗೊಳಿಸುವ ಅಧಿಕಾರಿಗಳು, ಸಿಬ್ಬಂದಿ ವರ್ಗದವರ ಇಚ್ಛಾಶಕ್ತಿ, ವೈಯಕ್ತಿಕ ಗುಣ ಸ್ವಭಾವ, ಪ್ರಾಮಾಣಿಕತೆ ಹಾಗು ಬದ್ಧತೆಯನ್ನು ಅದು ಅವಲಂಬಿಸಿರುತ್ತದೆ, ಇವೆಲ್ಲವು ವ್ಯತಿರಿಕ್ತವಾಗಿದ್ದರೆ ಸಶಕ್ತೀಕರಣ ಪ್ರಕ್ರಿಯೆ ಯಶಸ್ವಿಯಾಗುವುದಿಲ್ಲ. ಅಲ್ಲದೆ ಸಶಕ್ತತೆಗೊಳಪಡುವ ಜನರು ಅವಲಂಬಿತರಾದರೆ, ಕೇವಲ ಸ್ವೀಕರಿಸುವವರು, ಫಲಾನುಭವಿಗಳು ಎಂದು ಹೇಳುತ್ತಾ ಅವರಿಂದ ವಿಧೇಯತೆ, ಲಂಚ, ಅಧೀನತೆಗಳನ್ನು ನಿರೀಕ್ಷಿಸುವುದಾದರೆ ಸಶಕ್ತೀಕರಣದ ಅರ್ಥವೇನಾಗುತ್ತದೆ? ಪುರುಷಪ್ರಧಾನ ಸಮಾಜದಲ್ಲಿ ಮಹಿಳಾ ಸಶಕ್ತೀಕರಣವು ಇಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಪುರುಷರನ್ನು ಸೇರಿಸಿಕೊಂಡೇ ಮಹಿಳಾ ಸಶಕ್ತೀಕರಣವನ್ನು ಕೈಗೊಳ್ಳಬೇಕಾಗಿದ್ದು ಇದಕ್ಕಾಗಿ ಅಧಿಕಾರ, ಸಂಪನ್ಮೂಲ ಮೂಲಗಳ ಹಿಡಿತ, ನಿರ್ಧಾರ ಕೈಗೊಳ್ಳುವ ಸ್ಥಾನದಲ್ಲಿರುವ ಪುರುಷರನ್ನು ಅವಲಂಬಿಸಬೇಕು. ಅವರ ಮರ್ಜಿಯನ್ನು ಕಾಯಬೇಕು.

ಹೊರಗಿನ ಮಧ್ಯಪ್ರವೇಶದ ಮೂಲಕ ಕೈಗೊಳ್ಳುವ ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯ ಕೆಲವು ಸಾಂಸ್ಥಿಕ ಮತ್ತು ಅಸಾಂಸ್ಥಿಕ ಘಟಕಗಳ ಬೆಂಬಲವನ್ನು ಪಡೆಯಬೇಕಾಗುತ್ತದೆ, ಉದಾ. ಕುಟುಂಬ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸಂಘಟನೆಗಳು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು, ರಾಷ್ಟ್ರೀಯ, ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳ ನೆರವನ್ನು ಪಡೆಯಬೇಕಾಗುತ್ತದೆ.




೨೦ನೇ ಶತಮಾನದ ಎರಡನೇ ಭಾಗದಲ್ಲಿ ಮಹಿಳಾ ಸಶಕ್ತೀಕರಣದ ಪರಿಕಲ್ಪನೆ ಹಾಗು ಪ್ರಕ್ರಿಯೆಯ ಉಗಮ ಅಂತಾರಾಷ್ಟ್ರೀಯ ಸಂಸ್ಥೆಯಾದ ವಿಶ್ವಸಂಸ್ಥೆಯಿಂದ ಪ್ರಾರಂಭವಾಯಿತು ಎಂದು ಹೇಳಬಹುದು. ಜಂಡರ್ ಸಮಾನತೆಯನ್ನು ತನ್ನ ಮೂಲ ಕಾರ್ಯನೀತಿಯನ್ನಾಗಿ ಮಾಡಿಕೊಂಡ ವಿಶ್ವಸಂಸ್ಥೆಯು ಮಾನವ ಹಕ್ಕುಗಳಲ್ಲಿ ಮಹಿಳೆಯರ ಮಾನವ ಹಕ್ಕುಗಳನ್ನು ಗುರುತಿಸಿತು. ವಿವಿಧ ಒಡಂಬಡಿಕೆ, ಉಪ ಸಂಸ್ಥೆಗಳ ಸ್ಥಾಪನೆ, ಅಂತಾರಾಷ್ಟ್ರೀಯ ಸಮಾವೇಶಗಳ ಮೂಲಕ ಮಹಿಳಾ ಸಶಕ್ತೀಕರಣಕ್ಕೆ ಇಂಬುಕೊಟ್ಟಿತು. ೧೯೪೦ರ ದಶಕದಿಂದ ವಿಶ್ವಸಂಸ್ಥೆಯು ಮಹಿಳಾ ಅಭಿವೃದ್ಧಿ ಹಾಗು ಸಶಕ್ತೀಕರಣಕ್ಕೆ ಏನೇನು ಪ್ರಯತ್ನಗಳನ್ನು ಮಾಡಿದೆ ಎಂಬುದನ್ನು ನೋಡೋಣ.

**ಅಂತಾರಾಷ್ಟ್ರೀಯ ಮಟ್ಟ – ತಾತ್ವಿಕ, ಪ್ರಾಯೋಗಿಕ ಮತ್ತು ಸಾಂಸ್ಥಿಕ ಪ್ರಯತ್ನಗಳು**

ಮಹಿಳಾ ಸಶಕ್ತೀಕರಣ ಪರಿಕಲ್ಪನೆಯು ೨೦ನೇ ಶತಮಾನದ ೮೦ರ ದಶಕದಲ್ಲಿ ಮೂಡಿಬಂದರೂ ಅದಕ್ಕಿಂತ ಮೊದಲು ಅದಕ್ಕೆ ಪೂರಕವಾದ ಪ್ರಾರಂಭಿಕ ಪ್ರಯತ್ನಗಳು ಎರಡನೇ ಮಹಾಯುದ್ಧದ ನಂತರ ಆರಂಭವಾಯಿತು. ಎರಡನೇ ಮಹಾಯುದ್ಧದಿಂದ ಉಂಟಾದ ಆರ್ಥಿಕ ಹಾಗು ಮಾನವ ವಿನಾಶವನ್ನು ತಡೆಯಲು, ವಿಶ್ವದಲ್ಲಿ ಶಾಂತಿ ಸ್ಥಾಪಿಸಿ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ೧೯೪೫ರಲ್ಲಿ "ವಿಶ್ವಸಂಸ್ಥೆ"ಯನ್ನು ಸ್ಥಾಪಿಸಲಾಯಿತು. ಇದು ಜನರಲ್ ಅಸೆಂಬ್ಲಿ, ದಿ ಸೆಕ್ಯುರಿಟಿ ಕೌನ್ಸಿಲ್, ದಿ ಎಕನಾಮಿಕ್ ಅಂಡ್ ಸೋಶಿಯಲ್ ಕೌನ್ಸಿಲ್, ದಿ ಸೆಕ್ರೆಟರಿಯಟ್, ದಿ ಇಂಟರ್ ನ್ಯಾಷನಲ್ ಕೋರ್ಟ್ ಆಫ್ ಜಸ್ಟೀಸ್ ಮತ್ತು ದಿ ಯುನೈಟೆಡ್ ನೇಷನ್ಸ್ ಟ್ರಸ್ಟೀಶಿಪ್ ಕೌನ್ಸಿಲ್ ಎಂಬ ಆರು ಪ್ರಮುಖ ಅಂಗಸಂಸ್ಥೆಗಳನ್ನು ಹೊಂದಿದೆ. ಜೊತೆಗೆ ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ಆಹಾರ ಕಾರ್ಯಕ್ರಮ, ಯುನಿಸೆಫ್, ದಿ ಎಕನಾಮಿಕ್ ಎಂಡ್ ಸೋಶಿಯಲ್ ಕೌನ್ಸಿಲ್, ಇಂಟರ್ ನ್ಯಾಷನಲ್ ಲೇಬರ್ ಆರ್ಗನೈಜೇಷನ್, ಇಂಟರ್ ನ್ಯಾಷನಲ್ ಮೊನಿಟರಿ ಫಂಡ್, ವರ್ಲ್ಡ್ ಬ್ಯಾಂಕ್, ಮುಂತಾದ ಸುಮಾರು ೨೦ ಅಂಗಸಂಸ್ಥೆಗಳನ್ನು ಹೊಂದಿದೆ. ಶಾಂತಿಯನ್ನು ಬಯಸುವ ಯಾವುದೇ ರಾಷ್ಟ್ರವು ಇದರ ಸದಸ್ಯತ್ವವನ್ನು ಪಡೆಯಬಹುದು. ಇದರಲ್ಲಿ ವಿಶ್ವದ ೧೯೩ ಸದಸ್ಯ ರಾಷ್ಟ್ರಗಳು ಇವೆ. ೭೦ ವರ್ಷಗಳಿಂದ ಜಗತ್ತಿನ ವಿದ್ಯಮಾನಗಳಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸುತ್ತಿದೆ.

ಮಹಿಳಾ ಅಭಿವೃದ್ಧಿ ಹಾಗು ಸಶಕ್ತೀಕರಣದ ದೃಷ್ಟಿಯಿಂದ ಜಂಡರ್ ವಿಷಯಗಳನ್ನು ಜಾಗತಿಕ ಮಟ್ಟದಲ್ಲಿ ಮುಂಚೂಣಿಗೆ ತರುವಲ್ಲಿ ವಿಶ್ವಸಂಸ್ಥೆ ಮಹತ್ವದ ಸಂಸ್ಥೆಯಾಗಿದೆ. ಇವತ್ತೇನಾದರು ನಾವು ಜಂಡರ್ ಸಮಾನತೆ, ಮಹಿಳಾ ಹಕ್ಕುಗಳು, ಮಹಿಳಾ ಅಭಿವೃದ್ಧಿ, ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆ ಬಗ್ಗೆ ಮಾತನಾಡುತ್ತಿದ್ದೇವೆಂದರೆ ಅದಕ್ಕೆ ೭೦ ವರ್ಷಗಳ ಹಿಂದೆ ವಿಶ್ವಸಂಸ್ಥೆಯಲ್ಲಿ ಅಳವಡಿಸಿಕೊಂಡ ಜಂಡರ್ ಕಾಳಜಿ ದೃಷ್ಟಿಕೋನವೇ ಕಾರಣ. ಅಲ್ಲಿಯೂ ಈ ಅಳವಡಿಕೆ ಪ್ರಯತ್ನವನ್ನು ಮಾಡಿದವರು ವಿಶ್ವಸಂಸ್ಥೆಯ ಮಹಿಳಾ ಅಧಿಕಾರಶಾಹಿ ವರ್ಗ, ಶೈಕ್ಷಣಿಕ ತಜ್ಞರು (Academicians) ಮಹಿಳಾ ಚಳುವಳಿಯ ಆ್ಯಕ್ಟಿವಿಗಳು ಹಾಗೂ ಸರ್ಕಾರೇತರ ಸಂಸ್ಥೆಯ ಸದಸ್ಯರು ಇವರೆಲ್ಲರ ಜಂಟಿ ನಿರಂತರ ಪ್ರಯತ್ನದಿಂದ ಮಹಿಳಾ ವಿಷಯಗಳು ಜಾಗತಿಕ ಮಟ್ಟದಲ್ಲಿ ಚರ್ಚಿತವಾಗಲು ಸಾಧ್ಯವಾಯಿತು.

ವಿಶ್ವಸಂಸ್ಥೆಯ ಯಾವುದೇ ಚಟುವಟಿಕೆಯಲ್ಲಿ ಜಂಡರ್ ಕಾಳಜಿಯನ್ನು

ಸೇರಿಸಬೇಕೆಂದರೆ ಮೊದಲು ಅದರ ಕಾರ್ಯನೀತಿಗಳ ನಿರೂಪಣೆ, ಯೋಜನೆ, ಅನುಷ್ಠಾನ ಹಾಗು ಗುಣಮಟ್ಟದ ನಿಷ್ಕರ್ಷೆ ಮಾಡುವಾಗ ಮಹಿಳೆಯರನ್ನು ಒಳಗೊಳ್ಳುವುದು ತುಂಬಾ ಆವಶ್ಯಕವೆಂದು ಭಾವಿಸಲಾಯಿತು. ಅದರಂತೆ

೧. ವಿಶ್ವಸಂಸ್ಥೆಯ ಕಾರ್ಯಸೂಚಿಗಳಲ್ಲಿ ಮಹಿಳಾ ವಿಷಯಗಳನ್ನು ಸೇರಿಸಲಾಯಿತು.

೨. ಅದರ ಎಲ್ಲಾ ಮಂಡಳಿ ಸಮಿತಿಗಳಲ್ಲಿ ಮಹಿಳಾ ಪ್ರತಿನಿಧಿಗಳನ್ನು ನೇಮಿಸಲಾಯಿತು.

೩. ಮಹಿಳಾ ವಿಷಯಗಳನ್ನು ನಿರ್ವಹಣೆ ಮಾಡಲು ಪ್ರತ್ಯೇಕ ಅಂಗಸಂಸ್ಥೆಗಳನ್ನು ಸ್ಥಾಪಿಸಲಾಯಿತು.

೪. ವಿಶ್ವಸಂಸ್ಥೆಯ ಪ್ರಮುಖ ಅಂಗ ಸಂಸ್ಥೆಗಳಲ್ಲೂ ಜಂಡರ್ ಅಂಶಗಳನ್ನು, ದೃಷ್ಟಿಕೋನವನ್ನು, ಯೋಜನೆ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ನಿರ್ದೇಶಿಸಲಾಯಿತು.

ಈ ಎಲ್ಲಾ ಪ್ರಯತ್ನಗಳು ಅಗಾಧ ಪ್ರಮಾಣದಲ್ಲಿ ನಡೆದಿದ್ದು ಎಲ್ಲವನ್ನು ಸವಿಸ್ತಾರವಾಗಿ ಇಲ್ಲಿ ಸೇರಿಸಲೂ ಸಾಧ್ಯವಾಗುವುದಿಲ್ಲ. ಮಹಿಳಾ ಸಶಕ್ತೀಕರಣಕ್ಕೆ ಅವು ಹೇಗೆ ಪೂರಕವಾಗಿವೆ ಅನ್ನುವ ಹಿನ್ನೆಲೆಯಲ್ಲಿ ಅವುಗಳನ್ನು ಸಂಕ್ಷಿಪ್ತವಾಗಿ ಪ್ರಸ್ತುತಪಡಿಸಲಾಗುತ್ತದೆ.

ಇಲ್ಲಿ ಗಮನಿಸಬಹುದಾದ ಒಂದು ವಿಶೇಷ ಸಂಗತಿಯೆಂದರೆ ವಿಶ್ವಸಂಸ್ಥೆಗೂ ಮೊದಲು ಮೊದಲನೆ ಮಹಾಯುದ್ಧದ ನಂತರ ಸ್ಥಾಪನೆಗೊಂಡ 'ಲೀಗ್ ಆಫ್ ನೇಷನ್ಸ್' ಕೂಡ ಸ್ವಲ್ಪ ಮಟ್ಟಿಗೆ ಮಹಿಳಾ ವಿಷಯಗಳಿಗೆ ಗಮನ ನೀಡಿತ್ತು ಎನ್ನುವುದು. ೧೯೧೯ರಲ್ಲಿ ಪ್ಯಾರೀಸ್‌ನಲ್ಲಿ ನಡೆದ 'ಶಾಂತಿ ಸಮ್ಮೇಳನ'ದಲ್ಲಿ ಅಂತಾರಾಷ್ಟ್ರೀಯ ಮಹಿಳಾ ಸಂಘಟನೆಯವರು ಲೀಗ್ ಆಫ್ ನೇಷನ್ಸ್‌ನ ಒಡಂಬಡಿಕೆಯಲ್ಲಿ ಒಂದು ಕಲಮ್‌ಅನ್ನು ಸೇರಿಸುವಂತೆ ಮಾಡಿ ಅದರಲ್ಲಿ ಸಂಸ್ಥೆಯ ಹುದ್ದೆಗಳಲ್ಲಿ ಅವಕಾಶ ಪಡೆಯಲು ಸಮಾನ ಅವಕಾಶ ದೊರಕುವಂತೆ ಮಾಡಿದರು. ಲೀಗ್ ಆಫ್ ನೇಷನ್ಸ್ ಅಸ್ತಿತ್ವದಲ್ಲಿದ್ದಷ್ಟು ವರ್ಷಗಳು ಸಲಹಾ ಮಂಡಳಿಗಳನ್ನು ರಚಿಸಿಕೊಂಡು ವಿವಿಧ ವಿಷಯಗಳಲ್ಲಿ ಲಾಬಿ ಮಾಡಿದರು. ಉದಾಹರಣೆಗೆ ಸಾಮಾಜಿಕ ಸುಧಾರಣೆ, ಮಹಿಳೆಯರ ಹಕ್ಕುಗಳು ಮತ್ತು ವಿಶ್ವಶಾಂತಿ. ಈ ಸಂಸ್ಥೆಯ ಜೊತೆ ಕೆಲವೇ ಮಹಿಳೆಯರು ಕೆಲಸ ಮಾಡಿದ್ದರೂ ಅವರು ಅತ್ಯಂತ ಕ್ರಿಯಾಶೀಲರಾಗಿದ್ದು, ಸಾಮಾಜಿಕ ವ್ಯವಹಾರ ಹಾಗು ಮಾನವೀಯತೆಯ ವಿಷಯಗಳಲ್ಲಿ ಅಪಾರ

ಕೊಡುಗೆ ಸಲ್ಲಿಸಿದರು. ಆ ಕಾಲದಲ್ಲಿ ಇದ್ದಂತಹ ಸಾಂಪ್ರದಾಯಿಕ ಪಾತ್ರ ಮತ್ತು ಸ್ತ್ರೀ ಮೌಲ್ಯಗಳ ಚೌಕಟ್ಟಿನೊಳಗೆ ಮಹಿಳೆಯರ ಮತ್ತು ಪುರುಷರ ಮೌಲ್ಯ ಕಾಳಜಿಗಳು ಭಿನ್ನ ಎಂಬ ನಂಬಿಕೆಯ ನಡುವೆಯೆ ಸಂಸ್ಥೆಯಲ್ಲಿ ಮಹಿಳೆ ವಿಷಯಗಳಿಗೆ ಒಂದು ವೇದಿಕೆ ಹಾಗು ಅಂತಾರಾಷ್ಟ್ರೀಯ ಆಸಕ್ತಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ಮಹಿಳೆಯ ನಾಗರೀಕ ಮತ್ತು ರಾಜಕೀಯ ಹಕ್ಕುಗಳನ್ನು ಗುರುತಿಸುವಂತೆ ಮಾಡಿದರು. ೧೯೩೫ರಲ್ಲಿ ಸೆಕ್ರೆಟರಿ ಜನರಲ್ ಸಭೆಗೆ ಆಹ್ವಾನಿಸಿದಾಗ ಮಹಿಳಾ ಸಂಘಟನೆಯವರು ಲೀಗ್ ಆಫ್ ನೇಷನ್ಸ್‌ನ ಅಸೆಂಬ್ಲಿಯಲ್ಲಿ ಮಹಿಳೆಯರ ಸ್ಥಾನದ ಕುರಿತು ಚರ್ಚಿಸಿದರು. ಕಾನೂನು ಕೊಟ್ಟಿರುವ ಕಾನೂನು ಸವಲತ್ತುಗಳನ್ನು ಮತ್ತು ವಾಸ್ತವದಲ್ಲಿರುವ ಸ್ತ್ರೀ–ಪುರುಷರ ಅಸಮಾನತೆ ಇವೆರಡರ ನಡುವೆ ಇರುವ ಅಂತರವನ್ನು ಹೋಗಲಾಡಿಸುವ ಬಗ್ಗೆ ದನಿ ಎತ್ತಿದರು. ಅವರ ಈ ಪ್ರಾರಂಭಿಕ ಪ್ರಯತ್ನಗಳು ಮುಂದೆ ಜಗತ್ತಿನ ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವ ವಿಶ್ವಸಂಸ್ಥೆಯ ಕಾರ್ಯಗಳಿಗೆ ನಾಂದಿ ಹಾಡಿದವು.

೧೯೪೫ರಲ್ಲಿ ವಿಶ್ವಸಂಸ್ಥೆ ಸ್ಥಾಪನೆಯಾದಾಗ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಹಿಳಾ ಸಂಘಟನೆಗಳು ವಿಶ್ವಸಂಸ್ಥೆಯ ಚಾರ್ಟ‍ರ್‌ನಲ್ಲಿ ಜಂಡರ್ ಸಮಾನತೆಯ ಕಾರ್ಯನೀತಿಯನ್ನು ಅಳವಡಿಸಿಕೊಳ್ಳುವಂತಹ ವಾತಾವರಣ ಮೂಡಿಸಿದವು. ಮಹಿಳೆಯರ ಸ್ಥಾನವನ್ನು ಉತ್ತಮಪಡಿಸಲು ಅನುಕರಿಸಬೇಕಾದಂತಹ ಮಾರ್ಗದರ್ಶನವನ್ನು ನೀಡಿದವು. ಇದರ ಫಲವಾಗಿ ಚಾರ್ಟ‍ರ್‌ನಲ್ಲಿ 'ಮಾನವ ಹಕ್ಕುಗಳ ರಕ್ಷಣೆ', 'ಮಾನವ ಜೀವಿಯ ಘನತೆ, ಮೌಲ್ಯ'ವನ್ನು ಎತ್ತಿಹಿಡಿಯುವುದರ ಜೊತೆಗೆ 'ಸ್ತ್ರೀಪುರುಷರ ಸಮಾನ ಹಕ್ಕು'ಗಳನ್ನು ಸೇರಿಸಲು ಸಾಧ್ಯವಾಯಿತು.

ವಿಶ್ವಸಂಸ್ಥೆಯು ಮುಂದೆ ಹಾಕಿಕೊಂಡ ಮಹಿಳಾ ಸಶಕ್ತೀಕರಣಕ್ಕೆ ಪೂರಕವಾಗುವಂತಹ ಪ್ರಯತ್ನ, ಕಾರ್ಯ, ಯೋಜನೆ, ಒಡಂಬಡಿಕೆ, ಸಮ್ಮೇಳನ ಹಾಗು ಕಾರ್ಯಕ್ರಮಗಳನ್ನು ಸಂಕ್ಷಿಪ್ತವಾಗಿ ಗಮನಿಸಬಹುದು. ಇವುಗಳನ್ನು ೪ ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು.

೧. ಒಡಂಬಡಿಕೆ ಹಾಗು ಘೋಷಣೆಗಳು

೨. ಮಹಿಳೆಯರ ಸ್ಥಾನ ಸಮಿತಿಯ ಚಟುವಟಿಕೆಗಳು

೩. ಅಂತಾರಾಷ್ಟ್ರೀಯ ಮಹಿಳಾ ಸಮಾವೇಶಗಳು

೪. ವಿಶ್ವಸಂಸ್ಥೆಯ ಅಂಗಸಂಸ್ಥೆಗಳ ಪ್ರಯತ್ನ, ಯೋಜನೆ ಹಾಗು ಕಾಳಜಿಗಳು.

೧. ಒಡಂಬಡಿಕೆಗಳು ಹಾಗು ಘೋಷಣೆಗಳು

– ವ್ಯಕ್ತಿಗಳ ಮಾರಾಟ ಮತ್ತು ವೇಶ್ಯೆಯರ ಶೋಷಣೆಯನ್ನು ತಡೆಗಟ್ಟುವ ಒಡಂಬಡಿಕೆ –೧೯೪೯

– ಸಮಾನ ಮೌಲ್ಯದ ಕೆಲಸ ಮಾಡುವ ಸ್ತ್ರಿ ಪುರುಷ ದುಡಿಮೆಗಾರರಿಗೆ ಸಮಾನ ವೇತನ ನೀಡುವುದಕ್ಕೆ ಸಂಬಂಧಪಟ್ಟ ಒಡಂಬಡಿಕೆ –೧೯೫೧ (ILO)

– ಮಹಿಳೆಯರ ರಾಜಕೀಯ ಹಕ್ಕುಗಳ ಒಡಂಬಡಿಕೆ – ೧೯೫೨

– ಉದ್ಯೋಗ ಮತ್ತು ವೃತ್ತಿಗೆ ಸಂಬಂಧಿಸಿದಂತೆ ತಾರತಮ್ಯ ಹೋಗಲಾಡಿಸುವ ಒಡಂಬಡಿಕೆ – ೧೯೫೮ (ILO)

– ಶಿಕ್ಷಣದಲ್ಲಿ ತೋರುವ ತಾರತಮ್ಯ ವಿರುದ್ಧದ ಒಡಂಬಡಿಕೆ – ೧೯೬೨ (ಯುನೆಸ್ಕೊ)

– ವಿವಾಹಕ್ಕೆ ಒಪ್ಪಿಗೆ, ಕನಿಷ್ಠ ವಿವಾಹ ವಯಸ್ಸು ಹಾಗು ವಿವಾಹದ ನೋಂದಣಿ ಒಡಂಬಡಿಕೆ – ೧೯೬೪

– ಮಹಿಳೆಯರ ವಿರುದ್ಧ ನಡೆಯುವ ಎಲ್ಲಾ ತರಹದ ತಾರತಮ್ಯಗಳನ್ನು ಹೋಗಲಾಡಿಸುವ ಒಡಂಬಡಿಕೆ – ೧೯೭೯

– ಮಾರ್ಚ್ ೮ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಸುವ ಘೋಷಣೆ.

– ೧೯೭೬–೮೫ ಅಂತಾರಾಷ್ಟ್ರೀಯ ಮಹಿಳಾ ದಶಕದ ಘೋಷಣೆ

– ಮಹಿಳಾ ಅಭಿವೃದ್ಧಿ ವಿಭಾಗ ಸ್ಥಾಪನೆ – ೧೯೮೮.

ಕೆಲವೊಂದು ಪ್ರಮುಖ ಒಡಂಬಡಿಕೆ, ಘೋಷಣೆ ಮತ್ತು ಘಟಕಗಳ ಉದ್ದೇಶ, ಸ್ವರೂಪ ಹಾಗು ಕಾರ್ಯಚಟುವಟಿಕೆಗಳನ್ನು ಸಂಕ್ಷಿಪ್ತ ವಿವರಣೆ ಮೂಲಕ ತಿಳಿದುಕೊಳ್ಳೋಣ.

## ಮಹಿಳಾ ಮಾನವ ಹಕ್ಕುಗಳು

ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ ೧೯೪೮ರಲ್ಲಿ ಮಹಿಳಾ ಹಕ್ಕುಗಳನ್ನು ಗುರುತಿಸಿ ಸೇರಿಸುವುದು, ಲಿಂಗವೂ ಸೇರಿದಂತೆ ವರ್ಣ, ಜನಾಂಗ, ಧರ್ಮ, ವರ್ಗ, ಜಾತಿಗಳ ಆಧಾರದ ಮೇಲೆ ತಾರತಮ್ಯವನ್ನು ನಿಷೇಧಿಸಿ ಪ್ರತಿ ಮಾನವರಿಗೂ ಹಕ್ಕುಗಳು ದೊರಕುವಂತೆ ಮಾಡುವುದು. ಮಹಿಳಾ ವಿಷಯಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲು ಮತ್ತು ಮಹಿಳೆಯರ ಸ್ಥಾನವನ್ನು ಉತ್ತಮಗೊಳಿಸಲು

ವಿಶೇಷ ಯೋಜನೆಗಳನ್ನು ಕೈಗೊಳ್ಳುವ ಸಲುವಾಗಿ ೧೯೪೬ರಲ್ಲಿ 'ಮಹಿಳೆಯರ ಸ್ಥಾನ ಸಮಿತಿ'ಯ ಸ್ಥಾಪನೆ. ಸಮಿತಿಯನ್ನು ಸ್ಥಾಪಿಸುವ ಸಂದರ್ಭದಲ್ಲಿ ಚರ್ಚೆಗಳು ನಡೆದವು. ಮಹಿಳೆಯರಿಗೆಂದು ಪ್ರತ್ಯೇಕ ಮಂಡಳಿ ಸ್ಥಾಪಿಸಿದರೆ ಮಹಿಳಾ ವಿಷಯಗಳು ಮುಖ್ಯವಾಹಿನಿಯಿಂದ ಹೊರಗುಳಿದು ಅಂಚಿಗೆ ತಳ್ಳಲ್ಪಡಬಹುದು ಎಂದು ಒಂದು ವಾದವಾದರೆ ಇನ್ನೊಂದು ಈಗಾಗಲೆ ಮಹಿಳೆಯರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ, ಪುರುಷರಿಗಿಂತ ಹಿಂದಿದ್ದಾರೆ ಅವರನ್ನು ಸಮಾನ ಪಥಕ್ಕೆ ತರಬೇಕೆಂದರೆ ಅವರಿಗಾಗಿ ಪ್ರತ್ಯೇಕ ಮಂಡಳಿ/ಸಮಿತಿ ರಚಿಸುವುದು ತುಂಬ ಅಗತ್ಯ ಎಂದು ಮತ್ತೊಂದು ವಾದವಿತ್ತು. ಕೊನೆಗೂ ಸಮಿತಿಯು ರಚನೆಯಾಗಿ ಅದು ವಿಶ್ವಸಂಸ್ಥೆಗೆ ಮಹಿಳಾ ವಿಷಯಗಳಲ್ಲಿ ಪೂರಕವಾಗಿ ಬೆಂಬಲವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು.

## ಮಹಿಳಾ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಗುರುತಿಸಿದ್ದು

೧೯೪೮ರ ಮಾನವ ಹಕ್ಕುಗಳ ಘೋಷಣೆಯಲ್ಲಿ ಮಹಿಳೆಯರ ಹಕ್ಕುಗಳನ್ನು ಗುರುತಿಸಿದರೂ ಅದು ಜಾರಿಗೊಳ್ಳುವಂತೆ ಮಾಡಲು ಮತ್ತಷ್ಟು ಪ್ರಯತ್ನಗಳು ಮುಂದಿನ ವರ್ಷಗಳಲ್ಲಿ ಮಾಡಲಾಯಿತು. ೧೯೯೩ರಲ್ಲಿ ವಿಯನ್ನಾದಲ್ಲಿ ನಡೆದ 'ವಿಶ್ವ ಮಾನವ ಹಕ್ಕುಗಳ ಸಮ್ಮೇಳನ'ದಲ್ಲಿ ಮಹಿಳಾ ಹಕ್ಕುಗಳು ಒಳಗೊಳ್ಳುವಂತೆ ಮತ್ತು ವಿಶ್ವಸಂಸ್ಥೆಯ ಮಾನವ ಹಕ್ಕು ಕಾರ್ಯಚರಣೆಗಳಲ್ಲಿ ಮಹಿಳಾ ಮಾನವ ಹಕ್ಕುಗಳು ಸೇರುವಂತೆ ಅನೇಕ ಕಾರ್ಯತಂತ್ರಗಳನ್ನು ರೂಪಿಸಲಾಯಿತು. ಸಮ್ಮೇಳನ ನಡೆಯುವ ಎರಡು ವರ್ಷ ಮೊದಲೆ ಈ ನಿಟ್ಟಿನಲ್ಲಿ ಕಾರ್ಯಗಳು ಪ್ರಾರಂಭವಾದವು. ಅಂತಾರಾಷ್ಟ್ರೀಯ ಮಹಿಳಾ ಸರ್ಕಾರೇತರ ಸಂಘಟನೆಗಳು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿಗೆ ಮಹಿಳಾ ಹಕ್ಕುಗಳನ್ನು ಮಾನವ ಹಕ್ಕುಗಳಾಗಿ ಪರಿಗಣಿಸಲು ಮನವಿಯನ್ನು ಕೊಟ್ಟವು. ಮಹಿಳೆಯರ ಮಾನವ ಹಕ್ಕುಗಳ ಕುರಿತು ಸಾರ್ವಜನಿಕ ಮಹಿಳಾ ಸಂಘಟನೆಗಳಲ್ಲಿ ೧೯೯೧ರಲ್ಲಿ "೧೬ ದಿನಗಳ ಜಂಡರ್ ದೌರ್ಜನ್ಯದ ವಿರುದ್ಧ ಹೋರಾಟ" ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಅಭಿಪ್ರಾಯ ಪಡೆಯಲು, ಏನೇನು ಕ್ರಮ ಕೈಗೊಳ್ಳಬೇಕು ಎಂದು ಚರ್ಚಿಸಲು ವಿಶ್ವ ಮಾನವ ಹಕ್ಕುಗಳ ಸಮ್ಮೇಳನದ ತಯಾರಿ ಸಮಿತಿಗೆ ಸಮ್ಮೇಳನದ ಪ್ರತಿಹಂತದ ನಡಾವಳಿಗಳಲ್ಲಿ ಮಹಿಳಾ ಮಾನವ ಹಕ್ಕುಗಳ ವಿಷಯವನ್ನು ವಿವರವಾಗಿ ಚರ್ಚಿಸಬೇಕೆಂದು ಜಾಗತಿಕ ಮನವಿಯನ್ನು ನೀಡಲಾಯಿತು. ಸಂಸ್ಕೃತಿ, ಜನಾಂಗ, ವರ್ಗ, ಪ್ರದೇಶಗಳ ಮಿತಿಯನ್ನು ಮೀರಿ ವಿವಿಧ ಸ್ವರೂಪಗಳಲ್ಲಿ ನಡೆಯುವ ಜಂಡರ್ ದೌರ್ಜನ್ಯವನ್ನು ಮಾನವ ಹಕ್ಕುಗಳ ಉಲ್ಲಂಘನೆಯೆಂದು ಗುರುತಿಸಬೇಕೆಂಬ ಬೇಡಿಕೆಯನ್ನು ಮುಂದಿಡಲಾಯಿತು. ಸೆಂಟರ್ ಫಾರ್ ವಿಮೆನ್ಸ್ ಗ್ಲೋಬಲ್ ಲೀಡರ್‌ಶಿಪ್ ಮತ್ತು 'ಇಂಟರ್ ನ್ಯಾಷನಲ್ ವಿಮೆನ್ಸ್ ಟ್ರಬ್ಯುನ್ ಸೆಂಟರ್'ಗಳು ಜಂಟಿಯಾಗಿ ಮನವಿಯನ್ನು

ಸಿದ್ಧಪಡಿಸಿದವು. ಇದನ್ನು ೯೦೦ಕ್ಕೂ ಹೆಚ್ಚು ಸಂಘಟನೆಗಳು ಪ್ರಾಯೋಜಿಸಿದವು. ಈ ಮನವಿಯನ್ನು ೨೩ ಭಾಷೆಗಳಿಗೆ ತರ್ಜುಮೆ ಮಾಡಿ ೧೨೪ ದೇಶಗಳಿಂದ ಸುಮಾರು ಅರ್ಧ ಮಿಲಿಯನ್ ಸಹಿಗಳನ್ನು ಸಂಗ್ರಹಿಸಿ ಸಮ್ಮೇಳನದ ತಯಾರಿ ಸಮಿತಿಗೆ ಸಲ್ಲಿಸಲಾಯಿತು.

ಮಹಿಳಾ ಮಾನವ ಹಕ್ಕುಗಳ ಬಗ್ಗೆ ರಾಷ್ಟ್ರ ಮತ್ತು ಸ್ಥಳೀಯ ಮಟ್ಟಗಳಲ್ಲಿ ಸಮ್ಮೇಳನಗಳನ್ನು ನಡೆಸಿ ಚರ್ಚಿಸಲಾಯಿತು. ಅನೇಕ ದೇಶಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾದಂತಹ ವ್ಯಕ್ತಿಗತ ಮತ್ತು ಗುಂಪು ಪ್ರಕರಣಗಳನ್ನು ಕುರಿತು ಸಾರ್ವಜನಿಕ ಮೊಕದ್ದಮೆ ವಿಚಾರಣೆಗಳನ್ನು ನಡೆಸಿ ವರದಿಗಳನ್ನು ತಯಾರಿಸಲಾಯಿತು. ೬ ವರದಿಗಳನ್ನು ದಾಖಲಿಸಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿ ಮತ್ತು ವಿಶ್ವ ಸಮ್ಮೇಳನಕ್ಕೆ ಸಲ್ಲಿಸಲಾಯಿತು. ಅಲ್ಲಿದ್ದ ಗ್ಲೋಬಲ್ ಟ್ರಿಬುನಲ್ ಅನ್ ದಿ ವಯೋಲೇಷನ್ಸ್ ಆಫ್ ವಿಮೆನ್ಸ್ ಹ್ಯೂಮನ್ ರೈಟ್ಸ್' ಪ್ರತಿ ಪ್ರದೇಶದಿಂದ ಬಂದಂತಹ ಪ್ರಕರಣಗಳನ್ನು ಪರಿಶೀಲಿಸಿತು. ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಹಂತಗಳಲ್ಲಿ ಹತ್ತಾರು ಸಭೆಗಳು ನಡೆದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಮಾನವ ಹಕ್ಕುಗಳ ಕುರಿತು ಜಾಗೃತಿ ಮೂಡಿಸಲು ನೆರವಾದವು. ಉದಾಹರಣೆಗೆ ಆಫ್ರಿಕಾದಲ್ಲಿ 'ವಿಮೆನ್ಸ್ ಇನ್ ಲಾ ಅಂಡ್ ಡೆವಲಪ್‌ಮೆಂಟ್' ಎಂಬ ಸಂಘಟನೆಯು ಸ್ಥಳೀಯ ಸಭೆಗಳನ್ನು ನಡೆಸಿ ಇತರ ಸರ್ಕಾರೇತರ ಸಂಸ್ಥೆಗಳನ್ನು ಒಗ್ಗೂಡಿಸಿಕೊಂಡು ಮಹಿಳೆಯರ ಮಾನವ ಹಕ್ಕುಗಳ ಬಗ್ಗೆ ತಮ್ಮ ನಿರ್ಣಯಗಳನ್ನು ರೂಪಿಸಿಕೊಂಡು ಸಮ್ಮೇಳನದ ಕಾರ್ಯದರ್ಶಿಗೆ ಕಳುಹಿಸಿಕೊಟ್ಟಿತು. ಅದೇ ರೀತಿ ಲ್ಯಾಟಿನ್ ಅಮೇರಿಕಾದ ಏಷಿಯಾ ಮಧ್ಯ ಪ್ರಾಚ್ಯ, ಯೂರೋಪ್ ಮತ್ತು ಉತ್ತರ ಅಮೇರಿಕಾದ ಮಹಿಳೆಯರು ಅಂತಾರಾಷ್ಟ್ರೀಯ ಸಭೆಗಳನ್ನು ನಡೆಸಿ ಮಹಿಳೆಯರ ಮಾನವ ಹಕ್ಕುಗಳ ಬಗ್ಗೆ ಮನವಿ, ಶಿಫಾರಸ್ಸು, ನಡಾವಳಿ, ಬೇಡಿಕೆ, ನಿರ್ಣಯಗಳನ್ನು ಸಮ್ಮೇಳನಕ್ಕೆ ಸಲ್ಲಿಸಿದರು. ಅಲ್ಪಸಂಖ್ಯಾತರ ವಿರುದ್ಧ ನಡೆಯುವ ತಾರತಮ್ಯ ಮತ್ತು ರಕ್ಷಣೆಯ ಉಪಸಮಿತಿಯು ೧೯೯೨ ಮಹಿಳೆಯರ ಹಕ್ಕುಗಳನ್ನು ಸ್ಥಳಾಂತರಗೊಳಿಸಲಾಗದ ಮಾನವ ಹಕ್ಕುಗಳು ಎಂದು ನಿರ್ಣಯಿಸಿತು. ೧೯೯೩ರಲ್ಲಿ ಮಾನವ ಹಕ್ಕುಗಳ ಸಮಿತಿಯ ಎಲ್ಲಾ ಮಾನವ ಹಕ್ಕುಗಳ ಹೋರಾಟ ಮತ್ತು ಕಾರ್ಯತಂತ್ರಗಳಲ್ಲಿ ಮಹಿಳಾ ಹಕ್ಕುಗಳನ್ನು ಒಳಗೊಳ್ಳುವ ನೀತಿಯನ್ನು ಜಾರಿಗೊಳಿಸಿತು. ಹೀಗೆ ವಿವಿಧ ಗುಂಪುಗಳಿಂದ ತಳಮಟ್ಟದ, ಪ್ರಾದೇಶಿಕ ಅಂತಾರಾಷ್ಟ್ರೀಯ ಮಹಿಳಾ ಸಂಘಟನೆಗಳ ಸಹಕಾರ ಸಂಯೋಜನಾ ಕಾರ್ಯಗಳು ಹಾಗು ಸ್ಥಳೀಯ ಸರ್ಕಾರಗಳೊಂದಿಗೆ ನಡೆಸಿದ ಲಾಬಿಯ ಫಲವಾಗಿ ೧೯೯೩ರ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಮಾವೇಶದಲ್ಲಿ ಮಹಿಳಾ ಹಕ್ಕುಗಳು

ಸೇರುವಂತಾಯಿತು. ಸಮಾವೇಶದಲ್ಲೂ ಮಹಿಳಾ ಸಂಘಟನೆಗಳು ಗೋಷ್ಠಿಗಳನ್ನು ನಡೆಸುವುದು, ಪರ್ಯಾಯ ಸಭೆ ನಡೆಸುವುದು ಹಾಗು ಗುಂಪು ಚರ್ಚೆ ನಡೆಸುವುದರ ಮೂಲಕ ತಮ್ಮ ಅನೇಕ ಬೇಡಿಕೆಗಳು, ಮನವಿಗಳು ಅನುಷ್ಠಾನಗೊಳ್ಳುವಂತೆ ಮಾಡಿದವು. ಅವುಗಳಲ್ಲಿ ಕೆಲವು ಅಂಶಗಳನ್ನು ಇಲ್ಲಿ ಹೆಸರಿಸಬಹುದು.

– ಮಹಿಳೆಯರು ಮತ್ತು ಹೆಣ್ಣುಮಗುವಿನ ಹಕ್ಕುಗಳು ಸ್ಥಳಾಂತರಿಸಲಾಗದ, ಅವಿಭಾಜ್ಯ ಸಾರ್ವತ್ರಿಕ ಮಾನವ ಹಕ್ಕುಗಳು.

– ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ರಾಜಕೀಯ, ನಾಗರಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಮಹಿಳೆಯರು ಸಂಪೂರ್ಣ ಮತ್ತು ಸಮಾನವಾಗಿ ಭಾಗವಹಿಸುವಂತಾಗಬೇಕು.

– ವಿಶ್ವಸಂಸ್ಥೆಯ ಎಲ್ಲಾ ಚಟುವಟಿಕೆಗಳಲ್ಲಿ ಮಹಿಳೆಯರಿಗೆ ಸಮಾನ ಸ್ಥಾನ ಮತ್ತು ಅವರ ಮಾನವ ಹಕ್ಕುಗಳು ಸೇರುವಂತಾಗಬೇಕು.

– ಸಾರ್ವತ್ರಿಕ ಮತ್ತು ಖಾಸಗಿ ಜೀವನದಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಗಟ್ಟುವುದಕ್ಕೆ ವಿಶ್ವಮಾನವ ಹಕ್ಕುಗಳ ಸಮ್ಮೇಳನವು ಆದ್ಯತೆ ನೀಡಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕು.

– ಇದರಲ್ಲಿ ಎಲ್ಲಾ ರೀತಿಯ ಲೈಂಗಿಕ ಕಿರುಕುಳ, ಮಹಿಳೆಯರ ಮಾರಾಟ ಮತ್ತು ಶೋಷಣೆ, ನ್ಯಾಯಾಂಗದಲ್ಲಿರುವ ಜಂಡರ್ ಪಕ್ಷಪಾತ, ಪಾರಂಪರಿಕ, ಸಾಂಸ್ಕೃತಿಕ ಪೂರ್ವಗ್ರಹಿಕೆ ಮತ್ತು ಧಾರ್ಮಿಕ ಕಂದಾಚಾರಗಳು ಮತ್ತು ಮಹಿಳಾ ಹಕ್ಕುಗಳ ನಡುವೆ ಉಂಟಾಗುವ ಘರ್ಷಣೆ, ಮುಂತಾದವುಗಳನ್ನು ಹೋಗಲಾಡಿಸುವುದು.

– ವಿಶ್ವಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳು ಈ ನಿರ್ಣಯಗಳನ್ನು ಸಂಪೂರ್ಣವಾಗಿ ಜಾರಿಗೊಳಿಸುವುದು.

– ಮಾನವ ಹಕ್ಕುಗಳ ಸಮಿತಿಯು ಮಹಿಳೆಯರ ವಿರುದ್ಧದ ದೌರ್ಜನ್ಯಕ್ಕೆ ವಿಶೇಷ ವರದಿಗಾರರನ್ನು ನೇಮಿಸುವುದು.

– ಮಹಿಳೆಯರು ಜೀವನವಿಡೀ ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹೊಂದುವಂತೆ ಮಾಡುವುದು ಒಂದು ಮಹತ್ವದ ವಿಷಯವೆಂದು ಪರಿಗಣಿಸುವುದು, ಅದಕ್ಕಾಗಿ ಉತ್ತಮ ಆರೋಗ್ಯ ಸೇವೆ, ಕುಟುಂಬ ಯೋಜನೆ ಸೇವೆಗಳು ಮತ್ತು ಶಿಕ್ಷಣದ ಲಭ್ಯತೆಯನ್ನು ಹೆಚ್ಚಿಸುವುದು.

– ಎಲ್ಲಾ ಮೇಲ್ವಿಚಾರಣ ಸಮಿತಿಗಳು ತಮ್ಮ ವರದಿಗಳಲ್ಲಿ ಮಹಿಳೆಯರ ಸ್ಥಾನ, ಅವರ ಮಾನವ ಹಕ್ಕುಗಳ ರಕ್ಷಣೆ ಬಗ್ಗೆ ಜಂಡರ್‌ನ ದೃಷ್ಟಿಯಿಂದ ನಿರ್ದಿಷ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವುದು.

– ಕಮಿಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ವಿಮೆನ್ ವಿಭಾಗವು ವಿಶ್ವಸಂಸ್ಥೆಯ ಇತರ ಅಂಗ ಸಂಸ್ಥೆಗಳೊಂದಿಗೆ ವಿಶೇಷವಾಗಿ ಮಾನವ ಹಕ್ಕುಗಳ ಸಮಿತಿಯೊಂದಿಗೆ ಸೇರಿ ಮಹಿಳೆಯರ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಜಂಡರ್ ನಿರ್ದಿಷ್ಟ ಕಿರುಕುಳಗಳ ಸಮಸ್ಯೆಗಳನ್ನು ಬಗೆಹರಿಸಲು ನಿರಂತರ ಪ್ರಯತ್ನ ಮಾಡುತ್ತಿರಬೇಕು.

– ಸಮ್ಮೇಳನವು ತನ್ನ ಸದಸ್ಯ ರಾಷ್ಟ್ರಗಳ ಸರ್ಕಾರಗಳಿಗೆ ಎಲ್ಲಾ ಹಂತಗಳ ನಿರ್ಧಾರ ಕೈಗೊಳ್ಳುವ ಸ್ಥಾನಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ದೊರಕುವಂತೆ ಮಾಡಲು ಒತ್ತಾಯಿಸಬೇಕು. ವಿಶ್ವಸಂಸ್ಥೆಯ ಒಳಗೂ ಮಹಿಳಾ ಸಿಬ್ಬಂದಿಗಳ ನೇಮಕವನ್ನು ಪ್ರೋತ್ಸಾಹಿಸಬೇಕು.

ಈ ಎಲ್ಲಾ ಅಂಶಗಳು ಮಹಿಳೆಯರ ಮಾನವ ಹಕ್ಕುಗಳು ರಕ್ಷಿಸಲ್ಪಡಲು ಮತ್ತು ಅನುಷ್ಠಾನಗೊಳ್ಳಲು ಅನುವು ಮಾಡಿಕೊಟ್ಟವು.

ಸಮಾವೇಶದಲ್ಲಿ ಸರ್ಕಾರೇತರ ಸಂಸ್ಥೆಗಳ ವೇದಿಕೆಯು ವಿವಿಧ ಚಟುವಟಿಕೆಗಳನ್ನು ಕೈಗೊಂಡಿತು. 'ರೈಟ್ ಪ್ಲೇಸ್ ಫಾರ್ ವಿಮೆನ್' ಅಡಿಯಲ್ಲಿ ಸಂಪರ್ಕಜಾಲ, ವಸ್ತುಪ್ರದರ್ಶನ, ಪ್ರಾತ್ಯಕ್ಷಿಕೆ, ಚರ್ಚೆ, ರೇಡಿಯೋ ಕಾರ್ಯಕ್ರಮ, ಭಾಷಣ, ಕಾರ್ಯಗಾರ, ಪ್ಯಾನಲ್ ಗೋಷ್ಠಿಗಳನ್ನು ನಡೆಸಿ ಹೇಗೆ ವಕಾಲತ್ತು ನಡೆಸಬೇಕು, ರೇಡಿಯೋ, ವಿದ್ಯುನ್ಮಾನ, ಅಂಚೆ ಹಾಗು ದೃಶ್ಯ ಮಾಧ್ಯಮಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಯಿತು. ಒಂದು ದಿನದ 'ಗ್ಲೋಬಲ್ ಟ್ರಿಬುನಲ್ ಆನ್ ವಿಮೆನ್ ಹ್ಯೂಮನ್ ರೈಟ್ಸ್' ನಡೆಸಿ ಅದರಲ್ಲಿ ೨೫ ದೇಶಗಳಿಂದ ಬಂದಂತಹ ೩೩ ಮಹಿಳೆಯರು ತಾವು ಒಳಗಾದ ದೌರ್ಜನ್ಯವನ್ನು ನೇರವಾಗಿ ಹಂಚಿಕೊಳ್ಳಲು ಅವಕಾಶ ಮಾಡಿಕೊಡಲಾಯಿತು. ಮಹಿಳಾ ದೌರ್ಜನ್ಯ ಕುರಿತು ತಯಾರಿಸಿದ್ದ ಮಾಹಿತಿ ನೀಡುವ ಪುಸ್ತಕ, ಲೇಖನ, ದೃಶ್ಯ, ಶ್ರವ್ಯ ದಾಖಲೆಗಳನ್ನು ಪ್ರದರ್ಶಿಸಲಾಗಿತ್ತು. ಇವೆಲ್ಲ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆಯಲು, ಅನುಭವಿಸಲು ಏನೇನು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎನ್ನುವುದರ ಬಗ್ಗೆ ಒಂದು ಚಿತ್ರಣವನ್ನು ನೀಡಿದವು.

ಸಮ್ಮೇಳನದ ನಂತರ ಮಹಿಳಾ ಸಂಘಟನೆಗಳು ವಿಶ್ವಸಂಸ್ಥೆಗೆ ಮತ್ತೊಂದು ಮನವಿ ನೀಡಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಗಟ್ಟಲು

ಮತ್ತು ಮಹಿಳೆಯರ ಮಾನವ ಹಕ್ಕುಗಳನ್ನು ರಕ್ಷಿಸಲು ಏನೇನು ಕ್ರಮ ಕೈಗೊಳ್ಳಲಾಯಿತು ಎಂಬುದನ್ನು ತಿಳಿಸಿ ಅದರ ವರದಿಯನ್ನು ೧೯೯೫ರಲ್ಲಿ ನಡೆಯುವ ವಿಶ್ವ ಮಹಿಳಾ ಸಮಾವೇಶದಲ್ಲಿ ಮಂಡಿಸಬೇಕು ಎಂದು ಕೇಳಿಕೊಂಡವು. ಮುಂದೆಯೂ ಎಲ್ಲಾ ಹಂತಗಳಲ್ಲೂ ಮಹಿಳೆಯರ ಮಾನವ ಹಕ್ಕುಗಳು ರಕ್ಷಣೆಯಾಗುವಂತೆ ನಿರಂತರ ಪರಿಶೀಲನೆ, ಮೇಲ್ವಿಚಾರಣೆ, ಸಮೀಕ್ಷೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಅದಕ್ಕೆ ಅಗತ್ಯವಿರುವ ಆರ್ಥಿಕ ನೆರವು ದೊರಕುವಂತೆ ಮಾಡಲಾಗುತ್ತಿದೆ. ಇಷ್ಟೆಲ್ಲ ವಿವರಣೆ ನೀಡಿದ್ದು ಇಂದು ನಾವು ಅನುಭವಿಸುತ್ತಿರುವ ಮಹಿಳಾ ಮಾನವ ಹಕ್ಕುಗಳ ರಕ್ಷಣೆಯು ಜಾರಿಗೊಳ್ಳುವ ಹಿಂದೆ ಏನೇನು, ಎಷ್ಟೆಷ್ಟು ಪ್ರಯತ್ನ, ಪರಿಶ್ರಮ ನಡೆದಿದೆ ಎಂಬುದನ್ನು ತಿಳಿಸಲು ಇಂತಹ ಹೋರಾಟ ನಡೆದಿದ್ದರೂ ಈಗಲೂ ವಿಶ್ವದ ಅನೇಕ ಕಡೆ ಮಹಿಳೆಯರ ಮಾನವ ಹಕ್ಕುಗಳು ಉಲ್ಲಂಘನೆ ಆಗುತ್ತಿರುವುದನ್ನು ನೋಡಿದರೆ ಮತ್ತಷ್ಟು ಚಿಂತನೆ, ಚರ್ಚೆ, ಕಾರ್ಯತಂತ್ರ, ಹೋರಾಟಗಳು ನಡೆಯಬೇಕಿದೆ ಎನ್ನುವುದನ್ನು ಇವು ಸೂಚಿಸುತ್ತದೆ.

## ಮಹಿಳೆಯರ ಸ್ಥಾನ ಸಮಿತಿ

'ಮಹಿಳೆಯರ ಸ್ಥಾನ ಸಮಿತಿ' (ಮ.ಸಾ.ಸ)ಯು ವಿಶ್ವದಲ್ಲಿ ಜಂಡರ್ ಸಮಾನತೆಯನ್ನು ಪ್ರೋತ್ಸಾಹಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇದು ಮಹಿಳೆಯರ ರಾಜಕೀಯ ಮತ್ತು ಕಾನೂನುಗಳ ಭರವಸೆ, ಶಿಕ್ಷಣ ತರಬೇತಿ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ಮತ್ತು ಹೆಣ್ಣುಮಕ್ಕಳ ಮಾರಾಟವನ್ನು ತಡೆಗಟ್ಟುವುದು–ಈ ಗುರಿಗಳನ್ನು ಹೊಂದಿದೆ.

೪೫ ದೇಶಗಳ ಸದಸ್ಯರನ್ನು ಒಳಗೊಂಡಿರುವ ಸಮಿತಿ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಪರಿಷತ್‌ನ ಕಾರ್ಯನಿರ್ವಹಣಾ ಸಮಿತಿಯಾಗಿದೆ. ಇದು ಜಂಡರ್ ಸಮಾನತೆ ಹಾಗು ಮಹಿಳೆಯರ ಸ್ಥಾನ ಉತ್ತಮಪಡಿಸುವ ಕಾರ್ಯದಲ್ಲಿ ತೊಡಗಿದ್ದು ಜಾಗತಿಕ ಮಟ್ಟದಲ್ಲಿ ಕಾರ್ಯನೀತಿ ರೂಪಿಸುವ ಮಂಡಳಿಯಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಹಿಳಾಭಿವೃದ್ಧಿ ಮತ್ತು ಸಶಕ್ತೀಕರಣಕ್ಕೆಂದು ರೂಪಿಸುವ ಯೋಜನೆ, ಕಾರ್ಯನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅವು ರಾಷ್ಟ್ರ, ರಾಜ್ಯ ಹಾಗೂ ಸ್ಥಳೀಯ ಮಟ್ಟದಲ್ಲಿ ಜಾರಿಗೊಳ್ಳುವಂತೆ ಮಾಡುವುದು ಇದರ ಜವಾಬ್ದಾರಿ. ಸಮಿತಿಯ ಸದಸ್ಯರು ಪ್ರತಿ ವರ್ಷ ಸಭೆ ಸೇರಿ ಕಾರ್ಯನೀತಿಗಳ ಅನುಷ್ಠಾನವನ್ನು ಸಮೀಕ್ಷೆ ಮಾಡುವುದು, ಮೇಲ್ವಿಚಾರಣೆ ಮಾಡುವುದು ಮತ್ತು ಹೊಸ ಕಾರ್ಯನೀತಿಗಳನ್ನು ರೂಪಿಸುವ ಕಾರ್ಯದಲ್ಲಿ

ತೊಡಗುತ್ತಾರೆ. ಸಮಿತಿಯು ಆರ್ಥಿಕ ಮತ್ತು ಸಾಮಾಜಿಕ ಪರಿಷತ್ತಿಗೆ, ಮಹಿಳಾ ವಿಷಯಗಳ ಸಮಸ್ಯೆಗಳಿಗೆ, ಹಕ್ಕುಗಳಿಗೆ ಸಂಬಂಧಿಸಿದಂತೆ ತುರ್ತಾಗಿ ಕ್ರಮಕೈಗೊಳ್ಳಬೇಕಾದಾಗ ಸಲಹೆ, ಸೂಚನೆ, ಶಿಫಾರಸ್ಸುಗಳನ್ನು ಮಾಡುತ್ತದೆ.

ಸಮಿತಿಯು ೧೯೭೫, ೮೦, ೮೫ ಹಾಗು ೧೯೯೫ರಲ್ಲಿ ಅಂತಾರಾಷ್ಟ್ರೀಯ ಸಮಾವೇಶಗಳನ್ನು ನಡೆಸಿ ಮಹಿಳಾಭಿವೃದ್ಧಿಗೆ ಕ್ರಿಯಾಯೋಜನೆ, ಫಾರ್ವರ್ಡ್ ಲುಕಿಂಗ್ ಸ್ಟ್ರಾಟಜೀಸ್ ಹಾಗೂ ಫ್ಲಾಟ್‌ಫಾರಂ ಫಾರ್ ಆ್ಯಕ್ಷನ್‌ಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಅನುಸರಣೆ ಮಾಡಿ, ವಿಶೇಷ ಕಾಳಜಿ ವಹಿಸಬೇಕಾದ ವಿಷಯಗಳ ಸಮೀಕ್ಷೆ ನಡೆಸುತ್ತಾ ನಿರಂತರವಾಗಿ ವಿಶ್ವಸಂಸ್ಥೆಯ ಚಟುವಟಿಕೆಗಳಲ್ಲಿ ಜಂಡರ್ ದೃಷ್ಟಿಕೋನವನ್ನು ಮುಖ್ಯವಾಹಿನಿಯನ್ನಾಗಿಸುವ ಕೆಲಸ ಮಾಡುತ್ತಿರುತ್ತದೆ. ಜೊತೆಗೆ ಸದಸ್ಯ ರಾಷ್ಟ್ರ ಸರ್ಕಾರಗಳು, ನಾಗರೀಕ ಸಮಾಜದ ಸದಸ್ಯರು, ಅಭಿವೃದ್ಧಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಸರ್ಕಾರಿ ಮಂಡಳಿಗಳು ಮಹಿಳಾ ಸಶಕ್ತೀಕರಣಕ್ಕಾಗಿ ಕೈಗೊಳ್ಳಬೇಕಾದ ಕಾರ್ಯಗಳಿಗೆ ಶಿಫಾರಸ್ಸುಗಳನ್ನು ಮಾಡಿ ಅವುಗಳು ರಾಷ್ಟ್ರ, ಪ್ರಾದೇಶಿಕ ಹಾಗು ಸ್ಥಳೀಯ ಮಟ್ಟದಲ್ಲಿ ಜಾರಿಗೊಳ್ಳುವಂತೆ ನೋಡಿಕೊಳ್ಳುತ್ತದೆ. ಅತೀವ ಸಂಕಷ್ಟದಲ್ಲಿರುವ ಹುಡುಗಿಯರು ಮತ್ತು ಮಹಿಳೆಯರನ್ನು ಉದಾಹರಣೆಗೆ ವಲಸೆ ಮಹಿಳೆಯರು, ನಿರಾಶ್ರಿತರು, ಏಡ್ಸ್ ಮತ್ತು ಎಚ್.ಐ.ವಿ ಪೀಡಿತ ಮಹಿಳೆಯರು, ಯುದ್ಧ, ಕೋಮುಗಲಭೆ, ಭಯೋತ್ಪಾದನೆ, ನಕ್ಸಲೈಟ್‌ಗಳ ಆಕ್ರಮಣಕ್ಕೆ ತುತ್ತಾದ ಮಹಿಳೆಯರನ್ನು– ಕುರಿತು ಅನೇಕ ನಿರ್ಣಯಗಳನ್ನು ಕೈಗೊಂಡು ಯೋಜನೆಗಳನ್ನು ಜಾರಿಗೆ ತರುತ್ತದೆ.

ಸಮಿತಿಯಲ್ಲಿ ವಿಶ್ವಸಂಸ್ಥೆಯ ೪೫ ಸದಸ್ಯ ರಾಷ್ಟ್ರಗಳು ಸದಸ್ಯತ್ವವನ್ನು ಹೊಂದಿವೆ. ೧೩ ಮಂದಿ ಆಫ್ರಿಕ, ೧೧ ಏಷ್ಯ, ೯ ಲ್ಯಾಟಿನ್ ಅಮೇರಿಕಾ ಮತ್ತು ಕೆರೆಬಿಯನ್, ೮ ಮಂದಿ ಪಶ್ಚಿಮ ಯುರೋಪ್ ಮತ್ತು ೪ ಮಂದಿಯನ್ನು ಪೂರ್ವ ಯುರೋಪ್‌ನಿಂದ ಆಯ್ಕೆ ಮಾಡಲಾಗುತ್ತದೆ. ಪ್ರತಿ ೪ ವರ್ಷಗಳಿಗೆ ಸದಸ್ಯರು ಆಯ್ಕೆಯಾಗುತ್ತಾರೆ. ಸಮಿತಿಯು ಪ್ರತಿ ವರ್ಷ ೧೦ ದಿನಗಳ ಸಭೆಯನ್ನು ನಡೆಸುತ್ತದೆ.

ಈ ಸಮಿತಿಯು ೨೧ನೇ ಶತಮಾನದ ಮೊದಲ ದಶಕದಲ್ಲಿ ಮಹಿಳಾಭಿವೃದ್ಧಿಗಾಗಿ ಮಹತ್ತರ ಯೋಜನೆಗಳನ್ನು ರೂಪಿಸಿಕೊಂಡಿತು. ವಿಶ್ವಸಂಸ್ಥೆ ರೂಪಿಸಿಕೊಂಡಿರುವ 'ಸಹಸ್ರಮಾನ ಅಭಿವೃದ್ಧಿ ಗುರಿಗಳು' ಹೆಚ್ಚು ಹೆಚ್ಚು ಜಂಡರ್ ದೃಷ್ಟಿಕೋನವನ್ನು ಒಳಗೊಳ್ಳುವಂತೆ ಮಾಡುತ್ತಿದೆ. ಶಿಕ್ಷಣ, ತರಬೇತಿ, ವಿಜ್ಞಾನ ತಂತ್ರಜ್ಞಾನ, ಉದ್ಯೋಗ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಹೆಚ್ಚು ಅವಕಾಶಗಳು ದೊರಕುವಂತೆ ಮಾಡುವ ಗುರಿಯನ್ನು ಹೊಂದಿದೆ ಮತ್ತು ಗ್ರಾಮೀಣ ಮಹಿಳೆಯರ

ಸಶಕ್ತೀಕರಣ, ಬಡತನ ಮತ್ತು ಮಹಿಳೆಯರ ಹಸಿವಿನ ನಿರ್ಮೂಲನೆ, ಮಹಿಳೆಯರ ಆರೋಗ್ಯ, ಮಹಿಳಾಭಿವೃದ್ಧಿ ಎದುರಿಸುತ್ತಿರುವ ಸವಾಲುಗಳು, ಮುಂತಾದ ವಿಷಯಗಳಿಗೆ ಒತ್ತು ನೀಡುತ್ತಿದೆ. ಮಹಿಳೆಯರು ಮತ್ತು ಹುಡುಗಿಯರಿಗೆ ಸಹಸ್ರಮಾನ ಅಭಿವೃದ್ಧಿ ಸಂಬಂಧಿಸಿದಂತೆ ಗುರಿಗಳನ್ನು ಸಾಧಿಸುವ ಹಾದಿಯಲ್ಲಿರುವ ಸವಾಲುಗಳು ಮತ್ತು ಸಾಧನೆಗಳು ಮಹಿಳೆಯರ ಮೇಲೆ ನಡೆಯುವ ಎಲ್ಲ ತರಹದ ದೌರ್ಜನ್ಯಗಳ ನಿವಾರಣೆ ಮತ್ತು ತಡೆಗಟ್ಟುವ ಗುರಿಯನ್ನು ಹೊಂದಿದೆ.

ಸ್ತ್ರೀ–ಪುರುಷರ ನಡುವೆ ಸಮಾನತೆ ತರಲು 'ಜಂಡರ್ ಅನ್ನು ಮುಖ್ಯವಾಹಿನಿಯಾಗಿಸುವ' ಕಾರ್ಯತಂತ್ರವನ್ನು ಇದು ಅಳವಡಿಸಿಕೊಂಡಿದೆ ಹಾಗೂ ವಿಶ್ವಸಂಸ್ಥೆಯ ಎಲ್ಲಾ ಕಾರ್ಯನೀತಿ ಮತ್ತು ಕಾರ್ಯಕ್ರಮಗಳಲ್ಲಿ ಜಂಡರ್ ದೃಷ್ಟಿಕೋನವು ಅಂತರ್ಗತಗೊಳಿಸುವ ಪ್ರಯತ್ನವನ್ನು ನಿರಂತರವಾಗಿ ನಡೆಸುತ್ತಿದೆ. ಅದರ ಪ್ರತಿಫಲವಾಗಿ ಜನರಲ್ ಅಸೆಂಬ್ಲಿಯು ತನ್ನೆಲ್ಲ ಸೆಶನ್ಸ್‌ಗಳಲ್ಲಿ ಹಾಗು ನಿರ್ಣಯಗಳಲ್ಲಿ ಜಂಡರ್ ಅನ್ನು ಮುಖ್ಯವಾಹಿನಿಯಾಗಿಸುವ ಕಾರ್ಯತಂತ್ರವನ್ನು ಅಳವಡಿಸಿಕೊಂಡಿದೆ. ವಿಶ್ವಸಂಸ್ಥೆಯ ಚಟುವಟಿಕೆಗಳಷ್ಟೆ ಅಲ್ಲದೆ ಅದರ ಇತರ ಅಂಗಸಂಸ್ಥೆಗಳ ಕಾರ್ಯಗಳಲ್ಲೂ ಜಂಡರ್ ದೃಷ್ಟಿಕೋನವು ಅಳವಡಿಕೆಯಾಗುವಂತೆ ನೋಡಿಕೊಳ್ಳುತ್ತಿದೆ.

ಮಹಿಳೆಯರ ಸ್ಥಾನ ಸಮಿತಿಯು ಜಾಗತಿಕ ಮಟ್ಟದಲ್ಲಿ ಮಹಿಳಾ ವಿಷಯಗಳು ಮಾನ್ಯತೆ ಪಡೆಯುವಂತಹ ನಾಲ್ಕು ಪ್ರಮುಖ ಕಾರ್ಯಗಳನ್ನು ಕೈಗೊಂಡಿದೆ.

೧. ೧೯೭೫ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಘೋಷಣೆ.

೨. ೧೯೭೬–೮೫ರ ಅಂತಾರಾಷ್ಟ್ರೀಯ ಮಹಿಳಾ ದಶಕದ ಘೋಷಣೆ.

೩. ಅಂತಾರಾಷ್ಟ್ರೀಯ ಮಹಿಳಾ ಸಮಾವೇಶಗಳನ್ನು ಆಯೋಜಿಸುವುದು.

೪. ಮಹಿಳೆಯರ ಮೇಲೆ ನಡೆಯುವ ಎಲ್ಲಾ ಪ್ರಕಾರದ ತಾರತಮ್ಯಗಳ ನಿರ್ಮೂಲನಾ ಒಡಂಬಡಿಕೆಯ ಅನುಷ್ಠಾನ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಘೋಷಣೆಯ ಮೂಲ ಉದ್ದೇಶ ಮಹಿಳಾ ವಿಷಯಗಳನ್ನು ಜಾಗತೀಕರಿಸಿ ಮಹಿಳಾಭಿವೃದ್ಧಿಗೆ ಅಂತಾರಾಷ್ಟ್ರೀಯ ಸಹಕಾರವನ್ನು ಪಡೆಯುವುದು ಇದರ ಉದ್ದೇಶಗಳನ್ನು ಜಾರಿಗೊಳಿಸಲು 'ವಿಶ್ವ ಕ್ರಿಯಾಯೋಜನೆ'ಯನ್ನು ೧೯೭೫ರಲ್ಲಿ ಅಳವಡಿಸಿಕೊಳ್ಳಲಾಯಿತು. ಕ್ರಿಯಾಯೋಜನೆಯಲ್ಲಿ ಅನೇಕ ಕ್ಷೇತ್ರಗಳನ್ನು ಒಳಪಡಿಸಲಾಯಿತು. ಅಂತಾರಾಷ್ಟ್ರೀಯ ಶಾಂತಿಯ ಸಹಕಾರವನ್ನು ಬಲಪಡಿಸುವುದು, ಮಹಿಳೆಯರ ರಾಜಕೀಯ

ಭಾಗವಹಿಸುವಿಕೆ, ಶಿಕ್ಷಣ ತರಬೇತಿ, ಉದ್ಯೋಗ, ಆರೋಗ್ಯ ಮತ್ತು ಪೌಷ್ಟಿಕತೆ, ಆಧುನಿಕ ಸಮಾಜದಲ್ಲಿ ಕುಟುಂಬ, ವಸತಿ ಮತ್ತು ಮೂಲಸೌಕರ್ಯ, ಸಮಾಜ ಸೇವೆಗಳು, ಮಹಿಳಾ ವಿಷಯಗಳ ಕುರಿತು ಮಾಹಿತಿ ಸಂಗ್ರಹಣೆ ಮತ್ತು ದಾಖಲೆ ಮಾಡುವುದು ಸಂಶೋಧನೆ, ಸಮೂಹ ಮಾಧ್ಯಮ, ವಿಶ್ವಸಂಸ್ಥೆಯ ವ್ಯವಸ್ಥೆಯಲ್ಲಿ ಮಹಿಳೆಯ ಭಾಗವಹಿಸುವಿಕೆ ಹಾಗು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ವಿನಿಮಯ, ಇತ್ಯಾದಿ.

ಅಂತಾರಾಷ್ಟ್ರೀಯ ಮಹಿಳಾ ದಶಕದಲ್ಲಿ ಸಮಾನತೆ, ಅಭಿವೃದ್ಧಿ ಮತ್ತು ಶಾಂತಿ ಸಾಧಿಸುವ ಗುರಿಗಳನ್ನು ಇಟ್ಟುಕೊಂಡು ಮಹಿಳಾಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಅವಧಿಯಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಎರಡು ಅಂಗ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು.

೧. ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಫಂಡ್ ಫಾರ್ ವಿಮೆನ್ (೧೯೭೬).

೨. ಇಂಟರ್ ನ್ಯಾಷನಲ್ ರೀಸರ್ಚ್ ಎಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ವಿಮೆನ್ (೧೯೮೨) ಯೂನಿಫರ್ಮ್.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಬಡ ಮಹಿಳೆಯರ ಜೀವನ ಮಟ್ಟ ಸುಧಾರಿಸಲು ನೇರ ಅನುದಾನ ಮತ್ತು ತಾಂತ್ರಿಕ ಬೆಂಬಲ ಪಡೆಯಲು ಹಣಕಾಸಿನ ನೆರವು ನೀಡುತ್ತದೆ. ಇನ್‌ಸ್ಟ್ರಾ ಸಂಸ್ಥೆಯು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಒಳಗೊಳ್ಳುವಂತೆ ಮಾಡಲು ಮತ್ತು ರಾಜಕೀಯ, ಸಾರ್ವಜನಿಕ ವಲಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತೆ ಯೋಜನೆಗಳನ್ನು ರೂಪಿಸಲು ಸಂಶೋಧನೆಗಳನ್ನು ಕೈಗೊಳ್ಳುತ್ತದೆ ಮತ್ತು ತರಬೇತಿಗಳನ್ನು ನೀಡುತ್ತದೆ. ಈ ಸಂಸ್ಥೆಗಳ ಮೂಲಕ ಸದಸ್ಯ ರಾಷ್ಟ್ರಗಳ ಸರ್ಕಾರ ಹಾಗು ಅಂತರ್ ಸರ್ಕಾರದ ಸಂಸ್ಥೆಗಳು ಮಹಿಳಾಭಿವೃದ್ಧಿಗೆ ಬದ್ಧರಾಗುವಂತೆ ಮಾಡಲು ಕ್ರಮಕೈಗೊಳ್ಳುತ್ತದೆ. ಜೊತೆಗೆ ಸದಸ್ಯ ರಾಷ್ಟ್ರಗಳು ತಮ್ಮ ದೇಶದಲ್ಲೂ ಮಹಿಳೆಯರಿಗಾಗಿ ಪ್ರತ್ಯೇಕ ಸಚಿವಾಲಯ, ಘಟಕ, ಕೋಶ, ಇಲಾಖೆಗಳನ್ನು ಸ್ಥಾಪಿಸಿ 'ವಿಶ್ವ ಕ್ರಿಯಾಯೋಜನೆ'ಯು ಸಮರ್ಪಕವಾಗಿ ಅನುಷ್ಠಾನ ಮಾಡುವುದರ ಮೇಲ್ವಿಚಾರಣೆ ಮಾಡುವಂತೆ ಮಾಡಲಾಗಿದೆ.

ಮಹಿಳಾ ದಶಕದ ಆಚರಣೆಯಲ್ಲಿ ಮಹಿಳಾ ಸಂಘಟನೆಗಳು ಮುಖ್ಯ ಪಾತ್ರವನ್ನು ವಹಿಸಿದವು. ಇವು ಮಹಿಳೆಯರ ಸ್ಥಾನದ ಉಪಸಮಿತಿಗಳೊಂದಿಗೆ ಸೇರಿ ಕೆಲಸ ಮಾಡಿದವು. ೧೯೭೭ರಲ್ಲಿ 'ಸರ್ಕಾರೇತರ ಸಂಸ್ಥೆಯ ವರ್ಕಿಂಗ್ ಗ್ರೂಪ್ ಫಾರ್ ಟ್ರಡಿಷನಲ್ ಪ್ರಾಕ್ಟೀಸಸ್' ಅನ್ನು ಸ್ಥಾಪಿಸಲಾಯಿತು. ಅದರಡಿಯಲ್ಲಿ ಆಫ್ರಿಕಾ ದೇಶದಲ್ಲಿ

ಜಾರಿಯಲ್ಲಿರುವ 'ಫೀಮೇಲ್ ಜನೈಟಲ್ ಮ್ಯುಟಿಲೇಷನ್' ಎಂಬ ಪಾರಂಪರಿಕ ಪದ್ಧತಿಯನ್ನು ಹೋಗಲಾಡಿಸುವ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಪದ್ಧತಿಯು ನಡೆಯುವ ರಾಷ್ಟ್ರಗಳಲ್ಲಿ ಅದರ ವಿರುದ್ಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ೧೯೮೪ರಲ್ಲಿ 'ಸೆನಿಗಾಲ್‌ನ ಡಾಕಾರ್‌ನಲ್ಲಿ ಮಹಿಳಾ ವಿರೋಧಿ ಪಾರಂಪರಿಕ ಪದ್ಧತಿಗಳ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಯಿತು. ಇದಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಹಾಗು ಯೂನಿಸೆಫ್‌ಗಳು ಸಹಯೋಗ ನೀಡಿದವು. ಮಾನವ ಹಕ್ಕುಗಳ ಸಮಿತಿಯು ಎಫ್.ಜಿ.ಎಮ್ ಅನ್ನು ಮಾನವ ಹಕ್ಕುಗಳ ಉಲ್ಲಂಘನೆ ಎಂದು ಪರಿಗಣಿಸಿ ಅದನ್ನು ನಿಲ್ಲಿಸಲು ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು. ಉಪಸಮಿತಿಯು ಈ ಕೆಟ್ಟ ಪದ್ಧತಿ ಬಗ್ಗೆ ಅಧ್ಯಯನ ಸಮೀಕ್ಷೆ ನಡೆಸಿ ವರದಿ ತಯಾರಿಸಿ ಅದರ ಆಧಾರದ ಮೇಲೆ ಪರಿಚ್ಛೇದವನ್ನು ತಯಾರಿಸಿತು. ಅದನ್ನು ವಿಶ್ವಸಂಸ್ಥೆಯ ಕಾರ್ಯಸೂಚಿಯೊಳಗೆ ಸೇರಿಸಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ವಿಷಯ ಚರ್ಚೆಯಾಗುವಂತೆ ಮಾಡಲಾಯಿತು.

ಈ ದಶಕ ಆಚರಣೆಯ ಸಂದರ್ಭದಲ್ಲಿ ಗುರುತಿಸಲ್ಪಟ್ಟ ಮತ್ತೆರಡು ಪ್ರಮುಖ ವಿಷಯಗಳೆಂದರೆ ಒಂದು ವೇತನರಹಿತ ಮಹಿಳೆಯರ ದುಡಿಮೆ ಮತ್ತು ನಿರಾಶ್ರಿತ ಮಹಿಳೆಯರ ಪರಿಸ್ಥಿತಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದು ಈ ಎರಡು ಗುಂಪಿನ ಮಹಿಳೆಯರ ಪರಿಸ್ಥಿತಿ ಸುಧಾರಿಸಲು ಕ್ರಮ ಕೈಗೊಳ್ಳುವಂತೆ ಮಾಡಲಾಯಿತು.

**ಸೀಡಾ :–** ಮಹಿಳೆಯರ ವಿರುದ್ಧ ನಡೆಯುವ ಎಲ್ಲಾ ಪ್ರಕಾರದ ತಾರತಮ್ಯಗಳ ನಿರ್ಮೂಲನಾ ಒಡಂಬಡಿಕೆ–೧೯೭೯. ಮಹಿಳೆಯರ ಸ್ಥಾನ ಸಮಿತಿಯು ೧೯೬೩ ರಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯವನ್ನು ನಿರ್ಮೂಲನ ಮಾಡುವ ಘೋಷಣೆಯ ಕರಡು ಪ್ರತಿಯನ್ನು ತಯಾರಿಸಿತು. ೧೯೬೭ರಲ್ಲಿ ಇದನ್ನು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಅಂಗೀಕಾರ ಮಾಡಿತು. ಇದು ಸ್ತ್ರೀ–ಪುರುಷರ ನಡುವಿನ ಸಮಾನತೆಯ ತತ್ವವನ್ನು ಸಾರ್ವತ್ರಿಕವಾಗಿ ಗುರುತಿಸುವ ಪದ್ಧತಿಗಳನ್ನು ಒಳಗೊಂಡಿತ್ತು. ಮಹಿಳೆಯರಿಗೆ ತಾರತಮ್ಯ ತೋರುವ ಕಾನೂನು ಮತ್ತು ಪದ್ಧತಿಗಳನ್ನು ನಿರ್ಮೂಲನ ಮಾಡುವ ಸಾರ್ವಜನಿಕ ಅಭಿಪ್ರಾಯವನ್ನು ಬದಲಾಯಿಸುವ ಮತ್ತು ಈ ಕಾರ್ಯದಲ್ಲಿ ಮಹಿಳಾ ಸಂಘಟನೆಗಳ ಮಹತ್ವದ ಪಾತ್ರವನ್ನು ಗುರುತಿಸುವ ಕಾರ್ಯಗಳನ್ನು ಮಾಡುವಂತೆ ಸಲಹೆ ಮಾಡಿತ್ತು. ಇದೇ ಘೋಷಣೆಯಲ್ಲಿ ಮುಂದುವರಿದ ಭಾಗವಾಗಿ ಸೀಡಾದ ಕರಡು ಪ್ರತಿಯನ್ನು ತಯಾರಿಸಿತು. ೧೯೭೫ರ ವಿಶ್ವ ಕ್ರಿಯಾ ಯೋಜನೆಯಲ್ಲಿ ಈ ಒಡಂಬಡಿಕೆಯನ್ನು ತಯಾರಿಸಿ ಅನುಷ್ಠಾನಗೊಳಿಸಲು ಹೆಚ್ಚಿನ ಆದ್ಯತೆ ನೀಡಲಾಯಿತು. ಮಹಿಳಾ ಸಂಘಟನೆಗಳು, ಹೋರಾಟಗಾರರು, ಮಹಿಳೆಯರ

ಕಾನೂನು ಮತ್ತು ಮಾನವ ಹಕ್ಕುಗಳನ್ನು ಅತ್ಯಂತ ಸ್ಪಷ್ಟವಾಗಿ ಖಚಿತವಾಗಿ ವ್ಯಾಖ್ಯಾನಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಂಗೀಕೃತವಾಗುವಂತೆ ಆಗ್ರಹಪಡಿಸಿದರು. ಇಂತಹ ಒಂದು ಲಾಬಿ ಮತ್ತು ಸಮರ್ಪಣಾ ಕಾರ್ಯ ನಡೆಯದಿದ್ದರೆ ಈ ಒಡಂಬಡಿಕೆ ಜಾರಿಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹೋರಾಟಗಾರರ ನಿರಂತರ ಪರಿಶ್ರಮದಿಂದ ಒಡಂಬಡಿಕೆ ತಯಾರಿಸಿ ಅದನ್ನು ಜನರಲ್ ಅಸೆಂಬ್ಲಿ ೧೯೭೯ರಲ್ಲಿ ಅಂಗೀಕರಿಸಿ, ೧೯೮೦ರಲ್ಲಿ ಡೆನ್ಮಾರ್ಕ್‌ನ ಕೋಪನ್ ಹೇಗನ್‌ನಲ್ಲಿ ನಡೆದ ವಿಶ್ವ ಮಹಿಳಾ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಘೋಷಿಸಲಾಯಿತು. ೫೦ ಸದಸ್ಯ ರಾಷ್ಟ್ರಗಳು ಅದಕ್ಕೆ ಸಹಿ ಹಾಕಿದವು. ಅದು ೧೯೮೧ ಸೆಪ್ಟೆಂಬರ್ ೩ರಂದು ಒಪ್ಪಂದವಾಗಿ ಜಾರಿಗೊಂಡಿತು. ಇದು ಸ್ತ್ರೀ–ಪುರುಷರ ನಡುವೆ ಸಮಾನತೆ ತರುವ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಹೋಗಲಾಡಿಸುವ ತತ್ತ್ವಗಳನ್ನು ಪ್ರತಿಪಾದಿಸುತ್ತದೆ. ೧೯೯೩ರ ಹೊತ್ತಿಗೆ ೧೨೫ ರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕಿದವು. ಕೆಲವು ದೇಶಗಳು ಇದನ್ನು ಮಾರ್ಪಾಡು ಮಾಡಿಕೊಂಡು ಅಂಗೀಕರಿಸಿದವು. ಭಾರತ ದೇಶವು ವಿವಾಹ ವಯಸ್ಸು ಮತ್ತು ವಿವಾಹ ನೋಂದಣಿ ಕುರಿತು ನಿರ್ಬಂಧಗಳನ್ನು ಇಟ್ಟುಕೊಂಡು ಈ ಒಪ್ಪಂದವನ್ನು ಒಪ್ಪಿಕೊಂಡಿದೆ. ಸದಸ್ಯ ರಾಷ್ಟ್ರಗಳು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಒಡಂಬಡಿಕೆಯಲ್ಲಿ ಏನೇನು ಮಾರ್ಪಾಡು ಮಾಡಿಕೊಳ್ಳಲಾಗಿದೆ, ಹೇಗೆ ಜಾರಿಗೊಳಿಸಲಾಗುತ್ತಿದೆ ಎಂಬ ಬಗ್ಗೆ ವರದಿ ನೀಡಬೇಕು.

ಸೀಡಾವನ್ನು ಕಾರ್ಯಗತಗೊಳಿಸಲು ವಿಶ್ವಸಂಸ್ಥೆಯಲ್ಲಿ ಒಂದು ಮಂಡಳಿಯು ಇದೆ. ಇದರಲ್ಲಿ ೨೩ ಸದಸ್ಯರಿದ್ದು ಅವರು ಪ್ರತಿ ೪ ವರ್ಷಕ್ಕೆ ಆಯ್ಕೆಗೊಳ್ಳುತ್ತಾರೆ. ಇದರ ಸದಸ್ಯರು ತಮ್ಮ ವೈಯಕ್ತಿಕ ನೆಲೆಯಲ್ಲಿ ಸದಸ್ಯರಾಗಿರುತ್ತಾರೆ. ಸರ್ಕಾರದ ಪ್ರತಿನಿಧಿಗಳಾಗಿರುವುದಿಲ್ಲ. ಪ್ರತಿ ವರ್ಷ ಸಭೆ ನಡೆಸಿ ಸೀಡಾ ಅನುಷ್ಠಾನವನ್ನು ಸಮೀಕ್ಷೆ ಮಾಡುತ್ತಾರೆ. ಇದು ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವ ಸಾಧನವಾಗಿದೆ. ಸರ್ಕಾರೇತರ ಸಂಸ್ಥೆಗಳು ಇದನ್ನು ಜಂಡರ್ ಸಮಾನತೆ ತರಲು ಬಳಸಿಕೊಳ್ಳಬಹುದು. ಮಹಿಳಾ ಸಂಘಟನೆಗಳು ತಮ್ಮ ರಾಷ್ಟ್ರದಲ್ಲಿ ಸರ್ಕಾರಕ್ಕೆ ಸೀಡಾದ ಅನುಷ್ಠಾನ, ತಿದ್ದುಪಡಿ, ಮೇಲ್ವಿಚಾರಣೆಗಳನ್ನು ವರದಿ ಮಾಡಲು ಸಹಾಯ ಮಾಡಬಹುದು.

**ಸೀಡಾದ ಪ್ರಮುಖ ಅಂಶಗಳು**

**ಅಂತಾರಾಷ್ಟ್ರೀಯ ಮಹಿಳಾ ಸಮಾವೇಶಗಳು**

ಮಹಿಳಾ ವಿಷಯಗಳನ್ನು ಪ್ರತ್ಯೇಕವಾಗಿ ಚರ್ಚಿಸಲು ಜಾಗತಿಕ ಮಹಿಳಾ

ಸಮಾವೇಶವನ್ನು ಏರ್ಪಡಿಸುವ ಆವಶ್ಯಕತೆಯನ್ನು ಮನಗಂಡ ವಿಶ್ವಸಂಸ್ಥೆಯ ಮಹಿಳಾ ಅಧಿಕಾರಶಾಹಿಗಳು, ಮಹಿಳಾ ಹೋರಾಟಗಾರರು, ಮಹಿಳಾ ಸ್ಥಾಯೀ ಸಮಿತಿ ಸದಸ್ಯರು ಮನಗಂಡರು. ವಿಶ್ವಸಂಸ್ಥೆ ನಡೆಸುವ ಸಮಾವೇಶಗಳಲ್ಲಿ ಮಹಿಳಾ ವಿಷಯಗಳ ಚರ್ಚೆಗೆ ಸಮಯವಾಗಲಿ, ಸ್ಥಳವಾಗಲಿ ದೊರಕುವುದು ಕಷ್ಟವೆಂದು ಅರಿತ ಮಹಿಳಾ ಶೈಕ್ಷಣಿಕತಜ್ಞರು ಹಾಗು ಹೋರಾಟಗಾರರು ಪ್ರತ್ಯೇಕ ಮಹಿಳಾ ಸಮಾವೇಶವನ್ನು ಆಯೋಜಿಸಿದರು. ಮೊದಲ ಸಮಾವೇಶ ೧೯೭೫ರಲ್ಲಿ ಮೆಕ್ಸಿಕೋದಲ್ಲಿ ನಡೆಯಿತು. ಇದರಲ್ಲಿ ೧೩೩ ದೇಶಗಳು ಭಾಗವಹಿಸಿದ್ದವು. ಅದರಲ್ಲಿ ವಿಶ್ವಕ್ರಿಯಾ ಯೋಜನೆಯನ್ನು ತಯಾರಿಸಿ ಅಂಗೀಕರಿಸಲಾಯಿತು. ಸಮಾನತೆ, ಶಾಂತಿ ಹಾಗು ಅಭಿವೃದ್ಧಿಗೆ ಸಂಬಂಧಿಸಿದಂತಹ ಮೂರು ಗುರಿಗಳನ್ನು ಹೊಂದಲಾಗಿತ್ತು.

೧. ಸಂಪೂರ್ಣ ಜಂಡರ್ ಸಮಾನತೆಯನ್ನು ಸಾಧಿಸುವುದು ಮತ್ತು ಜಂಡರ್ ತಾರತಮ್ಯವನ್ನು ಹೋಗಲಾಡಿಸುವುದು.

೨. ಅಭಿವೃದ್ಧಿಯಲ್ಲಿ ಮಹಿಳೆಯನ್ನು ಸಂಪೂರ್ಣವಾಗಿ ಒಳಗೊಳ್ಳುವಂತೆ ಮಾಡುವುದು ಮತ್ತು ಮಹಿಳೆಯರು ಸಂಪೂರ್ಣ ಭಾಗವಹಿಸುವಂತೆ ಮಾಡುವುದು.

೩. ವಿಶ್ವಶಾಂತಿಯನ್ನು ಬಲಪಡಿಸಲು ಮಹಿಳೆಯರ ಕೊಡುಗೆಯನ್ನು ಹೆಚ್ಚಿಸುವುದು.

ಸಮಾವೇಶವು ಸದಸ್ಯ ರಾಷ್ಟ್ರಗಳ ಸರ್ಕಾರಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ನಿರ್ದಿಷ್ಟ ಕಾರ್ಯತಂತ್ರ ಹಾಗು ಗುರಿಗಳನ್ನು ಇಟ್ಟುಕೊಂಡು ಜಂಡರ್ ಸಮಾನತೆ ತರಲು ಕರೆಕೊಟ್ಟಿತು. ಮೊದಲ ವಿಶ್ವ ಕ್ರಿಯಾಯೋಜನೆಯನ್ನು ಅಂಗೀಕರಿಸಲಾಯಿತು. ಅಲ್ಲದೆ ಇಂಟರ್ ನ್ಯಾಷನಲ್ ರಿಸರ್ಚ್ ಎಂಡ್ ಟ್ರೇನಿಂಗ್ ಇನ್ಸ್‌ಟಿಟ್ಯೂಟ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ವಿಮೆನ್ ಮತ್ತು ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಫಂಡ್ ಫಾರ್ ವಿಮೆನ್ ಸಂಸ್ಥೆಗಳ ಸ್ಥಾಪನೆಗೆ ಅದು ಅನುವು ಮಾಡಿಕೊಟ್ಟಿತು.

೧೯೮೦ರಲ್ಲಿ ಕೋಪನ್ ಹೇಗನ್‌ನಲ್ಲಿ ಎರಡನೆ ವಿಶ್ವ ಮಹಿಳಾ ಸಮಾವೇಶವನ್ನು ನಡೆಸಲಾಯಿತು. ವಿಶ್ವ ಕ್ರಿಯಾ ಯೋಜನೆಯ ಅನುಷ್ಠಾನದ ಸಮೀಕ್ಷೆ ಹಾಗು ಮುಂದಿನ ವರ್ಷಗಳಲ್ಲಿ ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಎಂಬುದನ್ನು ಯೋಜಿಸುವುದು ಇದರ ಗುರಿಯಾಗಿತ್ತು. ಮಹಿಳಾ ಅಭಿವೃದ್ಧಿಗೆ ಅಡ್ಡಿಯಾಗಿರುವ ಪಾರಂಪರಿಕ ರಾಜಕಿಯ ಅಂಶಗಳನ್ನು ಸಮಾವೇಶದಲ್ಲಿ ಚರ್ಚಿಸಲಾಯಿತು. ಮಹಿಳೆಯರ ದನಿಯನ್ನು ಪ್ರಮುಖ ರಾಜಕೀಯ ಪ್ರಶ್ನೆಯಾಗಿಸುವುದು, ಮಹಿಳೆಯರಿಗೆ ನಿರ್ದಿಷ್ಟವಾದ ವಿಷಯಗಳಿಗೆ ವಿಶೇಷ ಗಮನ

ನೀಡಬೇಕು ಎಂಬುದು ಸಮ್ಮೇಳನದ ಪ್ರಮುಖ ಚರ್ಚಿತ ವಿಷಯವಾಗಿತ್ತು. ಸದಸ್ಯ ರಾಷ್ಟ್ರಗಳಿಗೂ ರಾಷ್ಟ್ರಮಟ್ಟದಲ್ಲಿ ಮಹಿಳಾ ಪರ ಕಾಳಜಿಗಳನ್ನು, ದೃಷ್ಟಿಕೋನಗಳನ್ನು ಅಳವಡಿಸಿಕೊಳ್ಳಲು ಆಗ್ರಹಪಡಿಸಲಾಯಿತು. ಈ ಸಮ್ಮೇಳನದಲ್ಲಿ ಮುಖ್ಯ ಗೋಷ್ಠಿಗೆ ಸಮನಾಂತರವಾಗಿ ಸರ್ಕಾರೇತರ ವೇದಿಕೆಯನ್ನೂ ನಡೆಸಲಾಯಿತು. ಅದರಲ್ಲಿ ಸುಮಾರು ೭೦೦೦ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಮಾವೇಶವು ಅಭಿವೃದ್ಧಿ, ಆರೋಗ್ಯ ಮತ್ತು ಪಾರಂಪರಿಕ ಆಚರಣೆಗಳು ಅವು ಮಹಿಳೆಯರ ಮೇಲೆ ಬೀರುವ ಪರಿಣಾಮಗಳ ಕುರಿತು ಚರ್ಚಿಸಿತು. ಪುರುಷಾಧಿಪತ್ಯದಿಂದ ಕೂಡಿದ ಸಮಾಜದಲ್ಲಿ ಮಹಿಳೆಯರು ಜಂಡರ್ ಸಮಾನತೆ ಸಾಧಿಸುವ ಆಂದೋಲನವನ್ನು ಹೇಗೆ ನಡೆಸಿಕೊಂಡು ಹೋಗುವುದು, ಬದಲಾವಣೆ ತರಲು ಕೇವಲ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿದರೆ ಸಾಕೆ? ಈಗಿನ ಅಭಿವೃದ್ಧಿ ಮಾದರಿಗಳಲ್ಲಿ ಮಹಿಳೆಯರನ್ನು ಸೇರಿಸಿಕೊಳ್ಳಲಾಗಿದೆಯೆ? ಬಡ ಮಹಿಳೆಯರು ಮೂಲಭೂತ ಆವಶ್ಯಕತೆಗಳಿಗಾಗಿ ಪರದಾಡುತ್ತಿರುವಾಗ ಅವರ ಬಳಿ ಸ್ತ್ರೀವಾದದ ಬಗ್ಗೆ ಮಾತನಾಡಬಹುದೇ? ಎಂಬ ಪ್ರಶ್ನೆಗಳನ್ನು ಎತ್ತಲಾಯಿತು. ಎರಡು ವಾದಗಳು ಹುಟ್ಟಿಕೊಂಡವು. ಒಂದು ಮಹಿಳೆಯರಿಗೆ ಮೊದಲು ಮೂಲಭೂತ ಆವಶ್ಯಕತೆಗಳನ್ನು ನೀಡಬೇಕು ಎಂದು, ಎರಡನೆಯದಾಗಿ ಮಹಿಳೆಯರಲ್ಲಿ ಅರಿವು ಮೂಡಿಸಿ ಅವರನ್ನು ಸಶಕ್ತಗೊಳಿಸುವುದು ಮತ್ತು ನಿರ್ಧಾರ ಕೈಗೊಳ್ಳುವ ಹಂತಗಳಲ್ಲಿ ಮಹಿಳೆಯರನ್ನು ಒಳಗೊಳ್ಳುವಂತೆ ಮಾಡಿದರೆ ಮೂಲಭೂತ ಆವಶ್ಯಕತೆಗಳು ತಾವಾಗಿಯೇ ಪೂರೈಕೆಯಾಗುತ್ತವೆ. ಅದೇನೆ ಇರಲಿ, ಎರಡೂ ಆವಶ್ಯಕತೆಗಳನ್ನು ಪೂರೈಸಲು ಏಕಕಾಲದಲ್ಲಿ ಪ್ರಯತ್ನ ಮಾಡಬೇಕೆಂದು ಸಮ್ಮೇಳನದಲ್ಲಿ ನಿರ್ಣಯಿಸಲಾಯಿತು.

ನೈರೋಬಿಯಾದಲ್ಲಿ ೧೯೮೫ರಲ್ಲಿ ನಡೆದ ಮೂರನೆಯ ಸಮಾವೇಶವು ಹಿಂದಿನ ಸಮಾವೇಶಗಳ ಗುರಿಗಳು ಈಡೇರಿವೆಯೇ, ವಿಶ್ವಕ್ರಿಯಾ ಯೋಜನೆಯ ಸಾಧನೆಗಳೇನು ಎಂದು ಸಮೀಕ್ಷಿಸುವ ಪ್ರಯತ್ನವನ್ನು ಮಾಡಿತು. ಅಲ್ಲದೆ ೨೦೦೦ ಇಸವಿ ಹೊತ್ತಿಗೆ ಮಹಿಳೆಯರ ಅಭಿವೃದ್ಧಿಗೆ 'ಫಾರ್ವರ್ಡ್ ಲುಕಿಂಗ್ ಸ್ಟ್ರಾಟಜೀಸ್' ಅನ್ನು ಅಳವಡಿಸಿಕೊಳ್ಳುವ ಗುರಿಯನ್ನು ಹೊಂದಿತ್ತು. ಇದು ಬೇರೆ ಬೇರೆಯ ಸರ್ಕಾರಗಳ ನಡುವಿನ ದಾಖಲೆ. ಸದಸ್ಯ ಸರ್ಕಾರಗಳು ಮತ್ತು ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ತಳಮಟ್ಟದ ಮಹಿಳಾ ಗುಂಪುಗಳ ಮೂಲ ಫಾರ್ವರ್ಡ್ ಲುಕಿಂಗ್ ಸ್ಟ್ರಾಟಜೀಸ್ ಅನ್ನು ಜಾರಿಗೊಳಿಸುವಂತೆ ಆಗ್ರಹಪಡಿಸಿತು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯಮಟ್ಟದಲ್ಲಿ

ಮಹಿಳೆಯರು ಹೆಚ್ಚಾಗಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿತು. ವಿಶ್ವಸಂಸ್ಥೆಯಲ್ಲಿ ಫಾರ್ವರ್ಡ್ ಲುಕಿಂಗ್ ಸ್ಟ್ರಾಟಜೀಸ್ ಅನ್ನು ಜಾರಿಗೊಳಿಸಲು, ಮೇಲ್ವಿಚಾರಣೆ ಮಾಡಲು ಕಾರ್ಯತಂತ್ರವನ್ನು ರೂಪಿಸಲಾಯಿತು. ಇದರಲ್ಲಿ ಹಲವಾರು ಅಂಶಗಳಿಗೆ ಒತ್ತು ನೀಡಿ, ಸಮಾನತೆ, ಅಭಿವೃದ್ಧಿ ಮತ್ತು ಶಾಂತಿಯ ಗುರಿಗಳನ್ನು ಸಾಧಿಸಲು ನಿರ್ದಿಷ್ಟ ಕ್ಷೇತ್ರ, ವಿಷಯಗಳನ್ನು ಗುರುತಿಸಲಾಯಿತು. ಇದರಲ್ಲಿ ಶಿಕ್ಷಣ, ಆರೋಗ್ಯ, ಆಹಾರ, ನೀರು, ಕೃಷಿ, ಉದ್ಯೋಗ, ವಿಜ್ಞಾನ, ತಂತ್ರಜ್ಞಾನ, ಸಂಕಷ್ಟದಲ್ಲಿರುವ ಮಹಿಳೆಯರ ರಕ್ಷಣೆ, ಸಂಶೋಧನೆ, ಕಾರ್ಯನೀತಿ ನಿರೂಪಣೆ, ತರಬೇತಿ, ಹೆಣ್ಣುಮಕ್ಕಳ ಮಾರಾಟ, ಬಡ ಮಹಿಳೆಯರು, ವಲಸೆ ಮಹಿಳೆಯರು, ನಿರಾಶ್ರಿತರು, ಅಲ್ಪಸಂಖ್ಯಾತರು, ಹೀಗೆ ನೂರಾರು ಸಂಘಟನೆ, ಗುಂಪಿಗೆ ಸಂಬಂಧಪಟ್ಟ ಮಹಿಳಾ ವಿಷಯಗಳನ್ನು ಗುರುತಿಸಿ ಅಲ್ಲಿಯ ಸಮಸ್ಯೆಗಳನ್ನು ಪರಿಹರಿಸಲು ದಾರಿಗಳನ್ನು ಹುಡುಕುವ ಪ್ರಯತ್ನ ನಡೆಯಿತು.

ಇದರಲ್ಲೂ ಸರ್ಕಾರೇತರ ಸಂಸ್ಥೆಗಳ ವೇದಿಕೆಯು ಸಮಾನಾಂತರವಾಗಿ ಗೋಷ್ಠಿಗಳನ್ನು ನಡೆಸಿತು. ಸುಮಾರು ೧೫,೦೦೦ ಮಹಿಳೆಯರು ಅದರಲ್ಲಿ ಭಾಗವಹಿಸಿದ್ದರು. ೧೨೦೦ ಕಾರ್ಯಾಗಾರ, ಸಭೆ, ಗುಂಪು ಚರ್ಚೆ, ವಸ್ತು ಪ್ರದರ್ಶನಗಳ ಕಾರ್ಯಕ್ರಮಗಳನ್ನು ಏರ್ಪಡಿಸಿ ಮಹಿಳೆಯರ ಸಹೋದರಿಯತ್ವದಲ್ಲಿ ಒಗ್ಗಟ್ಟನ್ನು ಪ್ರದರ್ಶಿಸಲಾಯಿತು. ಸಮ್ಮೇಳನವು ಯಶಸ್ವಿಯಾದರೂ ಕೆಲವು ಪ್ರಶ್ನೆಗಳೊಂದಿಗೆ ಪ್ರತಿನಿಧಿಗಳು ತಮ್ಮ ದೇಶಕ್ಕೆ ಹಿಂದಿರುಗಬೇಕಾಯಿತು. ತಮ್ಮ ದೇಶಕ್ಕೆ ಹೋದ ಮೇಲೆ ಏನು ಮಾಡಬೇಕು? ಪುರುಷಾಧಿಪತ್ಯದಿಂದ ಕೂಡಿರುವ ಸರ್ಕಾರದ ಇಲಾಖೆಗಳು ಮತ್ತು ಸಚಿವಾಲಯಗಳನ್ನು ಹೇಗೆ ಜಂಡರ್ ಸೂಕ್ಷ್ಮಗೊಳಿಸುವುದು, ಮಹಿಳೆಯರ ವಿರುದ್ಧ ಕೆಲಸ ಮಾಡುವ ಆರ್ಥಿಕ ನೀತಿ, ಕಾನೂನು ಹಾಗು ಪರಂಪರೆಗಳನ್ನು ಹೇಗೆ ಬದಲಾಯಿಸುವುದು? ನೈರೋಬಿ ಸಮ್ಮೇಳನದಲ್ಲಿ ಪ್ರಾರಂಭಗೊಂಡ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಲು ಮುಂದಿನ ಪೀಳಿಗೆಯನ್ನು ಹೇಗೆ ಸಿದ್ಧಪಡಿಸುವುದು? ಇತ್ಯಾದಿ.

೧೦ ವರ್ಷಗಳ ನಂತರ ೪ನೇ ವಿಶ್ವ ಮಹಿಳಾ ಸಮಾವೇಶವನ್ನು ೧೯೯೫ರಲ್ಲಿ ಚೀನಾದ ಬೀಜಿಂಗ್‌ನಲ್ಲಿ ಆಯೋಜಿಸಲಾಯಿತು. ಇದು ಮೂರು ಮುಖ್ಯ ಉದ್ದೇಶಗಳನ್ನು ಹೊಂದಿತ್ತು:

೧. ವಿಜ್ಞಾನ, ತಂತ್ರಜ್ಞಾನ, ಆರ್ಥಿಕತೆ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ೨೧ನೇ ಶತಮಾನದಲ್ಲಿ ಎದುರಾಗಬಹುದಾದ ಸವಾಲುಗಳನ್ನು ಎದುರಿಸಲು ಮಹಿಳೆಯರನ್ನು ಸನ್ನದ್ಧರನ್ನಾಗಿಸುವುದು ಮತ್ತು ಅದಕ್ಕೆ ಸೂಕ್ತ ವಾತಾವರಣ ಮೂಡಿಸುವುದು.

೨. ನಿರ್ಧಾರ ಕೈಗೊಳ್ಳುವ ಕಾರ್ಯಗಳಲ್ಲಿ ಮಹಿಳೆಯರು ಹೆಚ್ಚು ಸಕ್ರಿಯವಾಗಿ ಭಾಗವಹಿಸುವಂತಾಗಲು ಅವರನ್ನು ಹೇಗೆ ಸಶಕ್ತಗೊಳಿಸಬೇಕು ಎಂಬುದನ್ನು ತಿಳಿಯುವುದು.

೩. ನೈರೋಬಿ ಸಮ್ಮೇಳನದ 'ಫಾರ್ವರ್ಡ್ ಲುಕಿಂಗ್ ಸ್ಟ್ರಾಟಜೀಸ್'ಅನ್ನು ಜಾರಿಗೊಳಿಸುವ ಕಾರ್ಯವು ಅಪೂರ್ಣವಾಗಿದ್ದರೆ ಅದನ್ನು ಪೂರ್ಣಗೊಳಿಸಲು ವೇದಿಕೆಯನ್ನು ನಿರ್ಮಿಸುವುದು.

ಈ ಸಮ್ಮೇಳನದಲ್ಲೂ ವೈವಿಧ್ಯಮಯ ವಿಷಯಗಳನ್ನು ಗುರುತಿಸಿ ಕೇಂದ್ರೀಕರಿಸಲಾಯಿತು. ಹೆಚ್ಚುತ್ತಿರುವ ಮಹಿಳೆಯರ ಬಡತನ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿನ ಅಸಮಾನತೆ, ಗರಿಷ್ಠ ಮಟ್ಟದಲ್ಲಿ ಮಹಿಳೆಯರ ಸಾಮರ್ಥ್ಯವನ್ನು ಬಳಸಿಕೊಳ್ಳುವುದು, ಯುದ್ಧ ಮತ್ತಿತರ ಗಲಭೆಗಳಲ್ಲಿ ತೊಂದರೆಗೀಡಾದ ಮಹಿಳೆಯರ ಸ್ಥಿತಿ, ಮಹಿಳಾ ಹಕ್ಕುಗಳನ್ನು ಗುರುತಿಸುವಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಂಡುಬರುವ ಅರಿವು ಮತ್ತು ಬದ್ಧತೆಯ ಕೊರತೆ, ಮಹಿಳೆಯರು ಸಮಾಜಕ್ಕೆ ನೀಡುತ್ತಿರುವ ಕೊಡುಗೆಯನ್ನು ಗುರುತಿಸಿ ಪ್ರೋತ್ಸಾಹಿಸಲು ಮಾಧ್ಯಮವನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವುದು, ಪರಿಸರ ಸಂರಕ್ಷಣೆಯಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸಿ ಬೆಂಬಲ ನೀಡದಿರುವುದು, ಮುಂತಾದ ವಿಷಯಗಳು ಬೀಜಿಂಗ್ ಸಮ್ಮೇಳನದಲ್ಲಿ ಚರ್ಚಿತವಾದವು. ಬೀಜಿಂಗ್ ಸಮಾವೇಶವೇ ಕೊನೆಯದಾಗಿತ್ತು. ಮತ್ತೆ ಸಮಾವೇಶಗಳು ನಡೆಯಲಿಲ್ಲ. ನಾಲ್ಕು ಸಮ್ಮೇಳನಗಳು ವಿಶ್ವಮಟ್ಟದಲ್ಲಿ ಮಹಿಳೆಯರ ಜೀವನದಲ್ಲಿ ಬದಲಾವಣೆ ತರಲು ಕಾರಣವಾದವು ಎನ್ನುವುದರಲ್ಲಿ ಸಂಶಯವಿಲ್ಲ. ಎಲ್ಲಾ ಗುರಿಗಳನ್ನು ಸಾಧಿಸಲಾಗಲಿಲ್ಲ. ಇನ್ನು ನಡೆಯಬೇಕಾದ ಹಾದಿ ದೀರ್ಘವಾಗಿದೆ. ಮೇಲಿನಿಂದ ಕೆಳಗೆ ಬರುವ ಪರಿಕ್ರಮದ ಬದಲಿಗೆ ಕೆಳಗಿನಿಂದ ಮೇಲೆ ಹೋಗುವ ಪರಿಕ್ರಮವನ್ನು ಅನುಸರಿಸಿ ಸಮ್ಮೇಳನದ ಲಾಭಗಳು ಹೆಚ್ಚು ಮಹಿಳೆಯರನ್ನು ತಲುಪುವಂತಾಗಿಸಬೇಕು. ಅವಕಾಶವಂಚಿತ, ಅನನುಕೂಲ ಪರಿಸ್ಥಿತಿಯಲ್ಲಿರುವ ಮಹಿಳೆಯರ ಬೇಡಿಕೆಗಳು ಪೂರೈಸುವಂತೆ ಕಾರ್ಯನೀತಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಈ ಗುರಿಯನ್ನಿಟ್ಟುಕೊಂಡ ಮತ್ತೊಂದು ಸಮ್ಮೇಳನ ಆದಷ್ಟು ಬೇಗ ನಡೆಯಲಿ ಎಂದು ಆಶಿಸೋಣ.

## ಮಹಿಳೆಯರಿಗೋಸ್ಕರ ಸ್ಥಾಪನೆಗೊಂಡ ವಿಶ್ವಸಂಸ್ಥೆಯ ಅಂಗಸಂಸ್ಥೆಗಳು

ಮಹಿಳಾ ಸ್ಥಾನ ಸಮಿತಿ ಅಲ್ಲದೆ ವಿಶ್ವಸಂಸ್ಥೆಯು ಮಹಿಳಾ ವಿಷಯಗಳ ನಿರ್ವಹಣೆಗಾಗಿ ಪ್ರತ್ಯೇಕ ಉಪ ಘಟಕಗಳನ್ನು ಸ್ಥಾಪಿಸಿತು. ಅವುಗಳಲ್ಲಿ ಮುಖ್ಯವಾದವು

೧. ಮಹಿಳೆಯರ ಅಭಿವೃದ್ಧಿಗಾಗಿ ಅಂತಾರಾಷ್ಟ್ರೀಯ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಇನ್ಸ್‌ಟ್ರಾ)

೨. ಮಹಿಳೆಯರಿಗಾಗಿ ವಿಶ್ವಸಂಸ್ಥೆ ಅಭಿವೃದ್ಧಿ ನಿಧಿ (ಯುನಿಸೆಫ್)

೩. ಜಂಡರ್ ವಿಷಯಗಳಿಗೆ ವಿಶೇಷ ಸಲಹಾ ಕಛೇರಿ (Office of the Special Adviser on Gender Issues)

೪. ಮಹಿಳಾ ಅಭಿವೃದ್ಧಿ ವಿಭಾಗ (Division for the Advancement of Women (DAW))

೫. ವಿಶ್ವಸಂಸ್ಥೆಯಲ್ಲಿ ಮಹಿಳೆಯರು (UN Women)

೧೯೭೦ರ ದಶಕದಲ್ಲಿ ಮಹಿಳಾ ವಿಷಯಗಳಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಮಟ್ಟದಲ್ಲಾಗಲಿ, ಅಂತಾರಾಷ್ಟ್ರೀಯ ಮಟ್ಟದಲ್ಲಾಗಲಿ ಮಾಹಿತಿ, ಅಂಕಿಅಂಶಗಳ ಕೊರತೆಯಿತ್ತು. ಅದನ್ನು ನೀಗಿಸಲು ವಿಶ್ವಸಂಸ್ಥೆಯು ಮಹಿಳೆಯರ ಕುರಿತು ಸಂಶೋಧನೆ, ಅಧ್ಯಯನ, ಸಮೀಕ್ಷೆಗಳನ್ನು ಕೈಗೊಳ್ಳಲು ಪ್ರತ್ಯೇಕ ಅಂಗಸಂಸ್ಥೆಯನ್ನು ಸ್ಥಾಪಿಸಿತು. ಅದೇ "ಮಹಿಳೆಯರ ಅಭಿವೃದ್ಧಿಗಾಗಿ ಅಂತಾರಾಷ್ಟ್ರೀಯ ಸಂಶೋಧನಾ ಮತ್ತು ತರಬೇತಿ ಸಂಸ್ಥೆ" (International Research and Training Institute for the Advancement of Women) (INSTRAW). ತನ್ನ ಸದಸ್ಯ ರಾಷ್ಟ್ರಗಳಿಗೂ ಸಂಶೋಧನಾ ಸಮೀಕ್ಷೆ ಕಾರ್ಯಗಳನ್ನು ಕೈಗೊಳ್ಳಲು ಸೂಚಿಸಿತು. ೧೯೭೯ರಲ್ಲಿ ಸ್ಥಾಪನೆಗೊಂಡಿತು. ಇದರ ಮುಖ್ಯ ಕಛೇರಿ ಡೊಮಿನಿಕಲ್ ರಿಪಬ್ಲಿಕ್‌ನ ಸಮಚೊ ಡೊಮಿಂಗೊದಲ್ಲಿದೆ. ಇದರ ಧ್ಯೇಯ, ದರ್ಶನ ಹಾಗು ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ.

– ಸಂಶೋಧನೆ, ತರಬೇತಿ ಹಾಗು ಜ್ಞಾನದ ನಿರ್ವಹಣೆಯ ಕಾರ್ಯಗಳನ್ನು ಕೈಗೊಳ್ಳುತ್ತದೆ.

– ಸರ್ಕಾರಗಳು, ವಿಶ್ವಸಂಸ್ಥೆಯ ವ್ಯವಸ್ಥೆ, ನಾಗರಿಕ ಸಮಾಜ, ಶೈಕ್ಷಣಿಕ ತಜ್ಞರುಗಳ ಸಹಯೋಗದೊಂದಿಗೆ ಮಹಿಳಾ ಸಶಕ್ತೀಕರಣ ಮತ್ತು ಜಂಡರ್ ಸಮಾನತೆಯನ್ನು ಸಾಧಿಸುವ ಧ್ಯೇಯವನ್ನು ಹೊಂದಿದೆ.

– ಸಂಶೋಧನೆಗೆ ಹೆಚ್ಚು ಒತ್ತು ಕೊಡುತ್ತಿರುವ 'ಇನ್ಸ್‌ಟ್ರಾ', ಸಂಶೋಧನಾ ವಿಧಾನಗಳನ್ನು ಮತ್ತು ಮಹಿಳಾಭಿವೃದ್ಧಿಯ ಪರಿಕಲ್ಪನಾತ್ಮಕ ಚೌಕಟ್ಟನ್ನು ಕಟ್ಟಲು ಪ್ರಯತ್ನಿಸುತ್ತಿದೆ. ಮಹಿಳೆಯರ ಗೃಹ ಉತ್ಪಾದನಾ ಮೌಲ್ಯವನ್ನು ಮಾಪನ ಮಾಡುವುದು, ರಾಷ್ಟ್ರೀಯ ಆದಾಯಕ್ಕೆ ಮಹಿಳೆಯರು ನೀಡುತ್ತಿರುವ ಕೊಡುಗೆಯನ್ನು ಅಳೆಯುವುದು,

ವಲಸೆ ಹೋಗುವ ಮಹಿಳೆಯರ ಸ್ಥಿತಿಯನ್ನು ತಿಳಿಯುವುದು, ಹಣಕಾಸಿನ ವಿಲೇವಾರಿಯ ಜಂಡರ್ ಆಯಾಮವನ್ನು ವಿಶ್ಲೇಷಿಸುವುದು, ಮಹಿಳೆಯರಿಗೆ ಮೂಲಭೂತ ಆವಶ್ಯಕತೆ ಮತ್ತು ಹಣಕಾಸು ಲಭ್ಯತೆಯನ್ನು ಪರಿಶೀಲಿಸುವುದು, ಆಡಳಿತ ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ತಿಳಿಯುವಂತಹ ಸಮೀಕ್ಷೆ ನಡೆಸುವ ಅಧ್ಯಯನ ಮೊದಲಾದ ಕಾರ್ಯಗಳನ್ನು ಕೈಗೊಳ್ಳುತ್ತಾ ಬಂದಿದೆ.

– ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾರಿಗೊಳ್ಳುವ ಆರ್ಥಿಕ ಅಭಿವೃದ್ಧಿ ಕಾರ್ಯನೀತಿ, ಯೋಜನೆಗಳು ಮಹಿಳೆಯರ ಮೇಲೆ ಬೀರುವ ಪರಿಣಾಮಗಳನ್ನು ಪರೀಕ್ಷಿಸುವಂತಹ ಕಾರ್ಯಗಳನ್ನು ಕೈಗೊಂಡು ಅದರ ಫಲಿತಾಂಶಗಳನ್ನು ಆಧಾರವಾಗಿಟ್ಟುಕೊಂಡು ಸೂಕ್ತ ಕಾರ್ಯನೀತಿ, ಕಾರ್ಯಕ್ರಮಗಳ ಶಿಫಾರಸ್ಸುಗಳನ್ನು ನೀಡುತ್ತದೆ.

– ಜಾರಿಯಲ್ಲಿರುವ ಕಾರ್ಯಕ್ರಮ, ಒಡಂಬಡಿಕೆ, ಕಾರ್ಯನೀತಿಗಳ ಮೌಲ್ಯಮಾಪನಾ ಕಾರ್ಯಗಳನ್ನು ಕೈಗೊಳ್ಳುತ್ತಿದೆ.

– ಕ್ರಿಯಾತ್ಮಕ ಸಂಶೋಧನೆಗಳನ್ನು ಜಂಡರ್ ದೃಷ್ಟಿಕೋನದಿಂದ ಕೈಗೊಂಡು ಮಹಿಳೆಯರ ಕುರಿತು ಅಂಕಿಅಂಶಗಳನ್ನು ಸಂಗ್ರಹಿಸುವುದರ ಜೊತೆಗೆ ಮಹಿಳೆಯರ ಜೀವನದಲ್ಲಿ ಸುಧಾರಣೆ ತರಲು ಕ್ರಿಯಾತ್ಮಕ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಹೆಚ್ಚು ಮಹತ್ವ ನೀಡುತ್ತದೆ.

– ಮಹಿಳೆಯರಲ್ಲಿ ಸಾಮರ್ಥ್ಯ ಬೆಳೆಸಲು ತರಬೇತಿ ಕಾರ್ಯಕ್ರಮಗಳನ್ನು ವಿವಿಧ ಹಂತಗಳಲ್ಲಿ ಆಯೋಜಿಸಲಾಗುತ್ತಿದೆ.

ಇನ್ಸ್‌ಟ್ರಾ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು :

– ಜಂಡರ್ ಶಾಂತಿ ಮತ್ತು ಸುರಕ್ಷತಾ ಕಾರ್ಯಕ್ರಮ

– ಜಂಡರ್ ವಲಸೆ ಮತ್ತು ಅಭಿವೃದ್ಧಿ ಕಾರ್ಯಕ್ರಮ

– ಜಂಡರ್ ಆಡಳಿತ ಮತ್ತು ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಕಾರ್ಯಕ್ರಮ

– ಸಾಮರ್ಥ್ಯ ಬೆಳೆಸುವ ಕಾರ್ಯಕ್ರಮ

ಇನ್ಸ್‌ಟ್ರಾ ಕಾರ್ಯಕಾರಿ ಮಂಡಳಿಯನ್ನು ಹೊಂದಿದ್ದು ಅದರಲ್ಲಿ ೧೦ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳಿರುತ್ತಾರೆ. ಇವರನ್ನು 'ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲ್' ಮೂರು ವರ್ಷಗಳಿಗೆ ಆಯ್ಕೆಮಾಡುತ್ತಾರೆ. ಸದಸ್ಯರು

ವರ್ಷಕೊಮ್ಮೆ ಸಭೆ ಸೇರುತ್ತಾರೆ. ಈ ಮಂಡಳಿಯು ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲ್‌ಗೆ ಮತ್ತು ಜನರಲ್ ಅಸೆಂಬ್ಲಿಗೆ ವರದಿ ಸಲ್ಲಿಸುತ್ತದೆ. ಹೀಗೆ ಇನ್ಸ್ಟ್ರಾ ಸಂಸ್ಥೆಯು ತನ್ನ ಸ್ಟೇಕ್‌ಹೋಲ್ಡ್‌ರ್ಸ್‌ಗಳ ಸಾಮರ್ಥ್ಯ ಹೆಚ್ಚಿಸಿ ಜಂಡರ್ ಸಂಬಂಧಿ ಸಮಸ್ಯೆಗಳನ್ನು ನಿವಾರಿಸಲು ಮತ್ತು ಎಲ್ಲಾ ಕಾರ್ಯನೀತಿ ಮತ್ತು ಕಾರ್ಯಕ್ರಮಗಳಲ್ಲಿ ಜಂಡರ್ ಅಂಶಗಳು ಒಳಗೊಳ್ಳುವಂತೆ ಮಾಡುತ್ತಿದೆ.

ಮಹಿಳೆಯರಿಗಾಗಿ ವಿಶ್ವಸಂಸ್ಥೆಯ ಅಭಿವೃದ್ಧಿ ನಿಧಿ (United Nation Development Fund for Women (UNIFEM)) ವಿಶ್ವಸಂಸ್ಥೆಯ ಅಭಿವೃದ್ಧಿ ಗುಂಪಿನಲ್ಲಿ ಒಂದು ಭಾಗವಾಗಿ ೧೯೭೬ರಲ್ಲಿ ಸ್ಥಾಪನೆಗೊಂಡಿತು. ಇದನ್ನು ೨೦೧೧ರಲ್ಲಿ ಯೂನಿಫೆಮ್ ಅನ್ನು 'ವಿಶ್ವಸಂಸ್ಥೆಯಲ್ಲಿ ಮಹಿಳೆಯರು' ಎಂಬ ಹೊಸ ಸಂಸ್ಥೆಯೊಂದಿಗೆ ಸೇರಿಸಲಾಯಿತು. ಸೇರಿಸುವ ಮೊದಲು ಇದು ಅನೇಕ ಕಾರ್ಯಗಳನ್ನು ಕೈಗೊಳ್ಳುತ್ತಿತ್ತು. ಅಭಿವೃದ್ಧಿಶೀಲ ರಾಷ್ಟ್ರಗಳ ಮಹಿಳೆಯರ ಜೀವನ ಮಟ್ಟವನ್ನು ಸುಧಾರಿಸುವ ಗುರಿಯನ್ನು ಹೊಂದಿತ್ತು. ಜಂಡರ್ ಸಮಾನತೆ ತರಲು ಮತ್ತು ಮಹಿಳೆಯರನ್ನು ಸಶಕ್ತಗೊಳಿಸುವ ಸಲುವಾಗಿ ಕೈಗೊಳ್ಳುವ ಹೊಸ ತರಹದ ಯೋಜನೆಗಳಿಗೆ ಆರ್ಥಿಕ ನೆರವನ್ನು ನೀಡುತ್ತಿತ್ತು. ೧೦೦ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಮುಖ್ಯವಾಗಿ ನಾಲ್ಕು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದೆ.

೧. ಬಡತನದ ಸ್ತ್ರೀಕರಣವನ್ನು ಕಡಿಮೆ ಮಾಡುವುದು.

೨. ಮಹಿಳೆಯರ ಮೇಲಿನ ದೌರ್ಜನ್ಯವನ್ನು ಕೊನೆಗೊಳಿಸುವುದು.

೩. ಮಹಿಳೆಯರು ಮತ್ತು ಹುಡುಗಿಯರಲ್ಲಿ ಎಚ್.ಐ.ವಿ ಏಡ್ಸ್ ಕಾಯಿಲೆಗಳು ಹರಡದಂತೆ ತಡೆಯುವುದು.

೪. ಶಾಂತಿ ಮತ್ತು ಯುದ್ಧದ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವದ ಆಡಳಿತದಲ್ಲಿ ಜಂಡರ್ ಸಮಾನತೆಯನ್ನು ಸಾಧಿಸುವುದು.

ಯುನಿಫೆಮ್ ಖಾಸಗಿ ವಲಯದ ಸಹಯೋಗದೊಂದಿಗೆ ಅನೇಕ ಕ್ಷೇತ್ರ ಗಳಲ್ಲಿ ಕೆಲಸ ಮಾಡುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಕಡಿಮೆ ಮಾಡುವುದು, ಮಹಿಳೆಯರಿಗೆ ಆರ್ಥಿಕ ಅವಕಾಶಗಳನ್ನು ಹೆಚ್ಚಿಸುವುದು, ಸಂಪೂರ್ಣ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು ಮತ್ತು ಅವರ ಮಾನವ ಹಕ್ಕುಗಳನ್ನು ರಕ್ಷಿಸುವುದು ಮೊದಲಾದ ಕಾರ್ಯಕ್ರಮಗಳನ್ನು ಖಾಸಗಿ ಸಂಸ್ಥೆಗಳೊಂದಿಗೆ ಕೈಗೊಳ್ಳುತ್ತದೆ. ಕಾರ್ಪೋರೇಟ್ ವಲಯಗಳಲ್ಲಿ ಮಹಿಳಾ ಉದ್ಯೋಗಿಗಳಿಗೆ ಸಂಬಂಧಪಟ್ಟಂತೆ ವೃತ್ತಿ ಅಭಿವೃದ್ಧಿ, ಸುರಕ್ಷತೆ, ಆರೋಗ್ಯ, ಪಾರದರ್ಶಕತೆ, ನಿರ್ವಹಣೆ,

ಆಡಳಿತ, ಮಾರುಕಟ್ಟೆಯಲ್ಲಿ ತಾರತಮ್ಯ, ನಿರ್ಲಕ್ಷ್ಯ ತೋರದಂತೆ ಕ್ರಮಕೈಗೊಳ್ಳುವ ಆಡಳಿತ ನಡವಳಿಕೆಗಳ ಸೂಚಿಗಳನ್ನು ರೂಪಿಸಿದೆ. ಸದಸ್ಯ ದೇಶಗಳ ಸ್ಥಳೀಯ ಸರ್ಕಾರೇತರ ಸಂಸ್ಥೆಗಳೊಂದಿಗೆ ಅರಿವು ಕಾರ್ಯಕ್ರಮ, ತರಬೇತಿ ಶಿಬಿರಗಳನ್ನು ಏರ್ಪಡಿಸಿ ಮಹಿಳೆಯರಲ್ಲಿ ನಾಯಕತ್ವಗುಣ, ಸಂವಾದ ನಡೆಸುವ, ನಿರ್ಣಯಗಳನ್ನು ಕೈಗೊಳ್ಳುವ, ಜಾಗೃತಿ ಮೂಡಿಸುವ, ಸರ್ಕಾರದ ಪ್ರತಿನಿಧಿಗಳೊಂದಿಗೆ ಚರ್ಚಿಸುವ ಸಾಮರ್ಥ್ಯವನ್ನು ಬೆಳೆಸುವ ಪ್ರಯತ್ನ ಮಾಡುತ್ತಿದೆ. ದೇಶಿಕ ಮಹಿಳೆಯರು ಎಂದರೆ ಆದಿವಾಸಿ, ಬುಡಕಟ್ಟು, ಹಿಂದುಳಿದ ಜಾತಿ ಮಹಿಳೆಯರ ಹಕ್ಕುಗಳ ರಕ್ಷಣೆಗೆ ಸಂಬಂಧಪಟ್ಟಂತೆಯು ಕಾರ್ಯಗಾರ, ಸಮ್ಮೇಳನ, ಶಿಬಿರ, ತರಬೇತಿ, ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಯುನಿಫೆಮ್ ಅಂತಾರಾಷ್ಟ್ರೀಯಮಟ್ಟದ ಸಂಸ್ಥೆಯಾಗಿ ಸದಸ್ಯ ರಾಷ್ಟ್ರಗಳ ಮಹಿಳಾಭಿವೃದ್ಧಿಗಾಗಿಯೇ ಕೆಲಸ ಮಾಡುತ್ತಿರುವ ಪ್ರಮುಖ ಸಂಸ್ಥೆಯಾಗಿದೆ.

## ವಿಶ್ವಸಂಸ್ಥೆ ಮಹಿಳೆಯರು

ಜಂಡರ್ ಸಮಾನತೆ ಮತ್ತು ಮಹಿಳಾ ಸಶಕ್ತೀಕರಣದ ಅಸ್ತಿತ್ವ ಕೊಡಲು ೨೦೧೦ ರಲ್ಲಿ 'ವಿಶ್ವಸಂಸ್ಥೆ ಮಹಿಳೆಯರು' ಎಂಬ ಅಂಗ ಸಂಸ್ಥೆಯನ್ನು ಸ್ಥಾಪಿಸಿತು. ಇದು ಮೊದಲು ಚಾಲ್ತಿಯಲ್ಲಿದ್ದ ನಾಲ್ಕು ಅಂಗಸಂಸ್ಥೆಗಳ ಒಗ್ಗೂಡುವಿಕೆಯ ರೂಪ. ಮಹಿಳಾ ಮುನ್ನಡೆ ವಿಭಾಗ, ಇನ್ಸ್ಸ್ಟ್ರಾ, ಆಫೀಸ್ ಆಫ್ ಸ್ಪೆಶಲ್ ಅಡ್ವೆಂಚರ್ ಆನ್ ಜಂಡರ್ ಇಶ್ಯೂಸ್ ಎಂಡ್ ಅಡ್ವಾನ್ಸ್‌ಮೆಂಟ್ ಆಫ್ ವಿಮೆನ್ ಮತ್ತು ಯುನಿಫೆಮ್ ಸೇರಿಸಿ 'ವಿಶ್ವಸಂಸ್ಥೆ ಮಹಿಳೆಯರು' ಎಂಬ ದೊಡ್ಡ ಅಂಗಸಂಸ್ಥೆಯನ್ನು ತೆರೆಯಲಾಯಿತು.

ಇದರ ಮುಖ್ಯ ಪಾತ್ರ :

– ಅಂತರ್ ಸರ್ಕಾರಿ ಸಂಸ್ಥೆಗಳಿಗೆ ಅಂತಾರಾಷ್ಟ್ರೀಯ ಮಟ್ಟದ ಕಾರ್ಯನೀತಿ, ಮಾನದಂಡಗಳನ್ನು ರೂಪಿಸಿಕೊಡುವುದು.

– ಸದಸ್ಯ ರಾಷ್ಟ್ರಗಳಿಗೆ ತಾಂತ್ರಿಕ ಮತ್ತು ಹಣಕಾಸಿನ ಸಹಾಯ ನೀಡುವುದು, ನಾಗರಿಕ ಸಮಾಜದ ಪಾಲುಗಾರಿಕೆಯೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳುವುದು.

– ಜಂಡರ್ ಸಮಾನತೆಯನ್ನು ಎತ್ತಿಹಿಡಿಯುವಲ್ಲಿ ಮತ್ತು ಸಾಧಿಸುವಲ್ಲಿ ವಿಶ್ವಸಂಸ್ಥೆಯು ಬದ್ಧವಾಗಿರುವಂತೆ ನೋಡಿಕೊಳ್ಳುವುದು.

– ಮಹಿಳೆಯರು ಮತ್ತು ಹುಡುಗಿಯರ ಮೇಲಿನ ದೌರ್ಜನ್ಯವನ್ನು ಹೋಗಲಾಡಿಸುವುದು.

ಮಹಿಳೆಯರನ್ನು ಸಶಕ್ತಗೊಳಿಸುವುದು, ಸ್ತ್ರೀ–ಪುರುಷರ ನಡುವೆ ಸಮಾನತೆ ತರುವುದು, ಅಭಿವೃದ್ಧಿಯಲ್ಲಿ ಇಬ್ಬರು ಸಮಾನ ಪಾಲುದಾರರಾಗಿ ಫಲಾನುಭವಿಗಳಾಗುವಂತೆ ಮಾಡುವುದು, ಮಹಿಳೆಯರ ಮಾನವ ಹಕ್ಕುಗಳ ರಕ್ಷಣೆ ಮಾಡುವುದು, ಸಮಾಜದಲ್ಲಿ ಶಾಂತಿ, ಭದ್ರತೆ ಸಿಗುವಂತೆ ಮಾಡುವುದು 'ವಿಶ್ವಸಂಸ್ಥೆ ಮಹಿಳೆಯರು' ಸಂಸ್ಥೆಯ ಕಾರ್ಯಕ್ಷೇತ್ರಗಳಾಗಿವೆ.

ಎಲ್ಲಾ ಮಾನವ ಹಕ್ಕುಗಳ ಮತ್ತು ಮಾನವ ಅಭಿವೃದ್ಧಿ ವಿಷಯಗಳು ಜಂಡರ್ ಆಯಾಮಗಳನ್ನು ಹೊಂದಿವೆ. ಮಹಿಳೆಯರ ಮಾನವಹಕ್ಕು ಮಾನವ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಮತ್ತು ಸಮಾನತೆ ತಂದುಕೊಡುವಂತಹ ಎಲ್ಲಾ ಕ್ಷೇತ್ರಗಳಲ್ಲೂ 'ವಿಶ್ವಸಂಸ್ಥೆ ಮಹಿಳೆಯರು' ಕಾರ್ಯನಿರ್ವಹಿಸುತ್ತದೆ. ಅವುಗಳನ್ನು ಹೆಸರಿಸುವುದಾದರೆ,

– ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ
– ಶಾಂತಿ ಮತ್ತು ಭದ್ರತೆ
– ನಾಯಕತ್ವ ಮತ್ತು ಭಾಗವಹಿಸುವಿಕೆ
– ಆರ್ಥಿಕ ಸಶಕ್ತೀಕರಣ
– ರಾಷ್ಟ್ರೀಯ ಯೋಜನೆ ಮತ್ತು ಆಯವ್ಯಯ
– ಮಾನವ ಹಕ್ಕುಗಳು
– ೨೦೧೫ ಅಭಿವೃದ್ಧಿಯೇತರ ಕಾರ್ಯಸೂಚಿ
– ಸಹಸ್ರಮಾನ ಅಭಿವೃದ್ಧಿ ಗುರಿಗಳು

ಈ ಸಂಸ್ಥೆಯು ಪ್ರತಿ ಕ್ಷೇತ್ರದಲ್ಲೂ ಮಹಿಳೆಯರನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಅವರ ಸಶಕ್ತೀಕರಣಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನೀತಿ, ಯೋಜನೆ ಕಾರ್ಯಕ್ರಮಗಳನ್ನು ರೂಪಿಸುತ್ತಾ, ಅವು ರಾಷ್ಟ್ರ, ರಾಜ್ಯ ಹಾಗು ತಳಮಟ್ಟದಲ್ಲಿ ಜಾರಿಗೊಳ್ಳುವಂತೆ ನೋಡಿಕೊಳ್ಳುತ್ತಿದೆ.

ವಿಶ್ವಸಂಸ್ಥೆಯು ತನ್ನ ಇತರ ಅಂಗಸಂಸ್ಥೆಗಳಾದ ವಿಶ್ವ ಆರೋಗ್ಯ ಸಂಸ್ಥೆ, ಯು.ಎನ್.ಡಿ.ಪಿ, ಐ.ಎಲ್.ಓ, ವಿಶ್ವಬ್ಯಾಂಕ್, ಯುನೈಟ್ ನೇಷನ್ಸ್ ಪಾಪುಲೇಷನ್ ಫಂಡ್, ಯುನೈಟೆಡ್ ನೇಷನ್ಸ್ ರಿಸರ್ಚ್ ಇನ್ಸ್‌ಟಿಟ್ಯೂಟ್ ಆಫ್ ಸೋಶಿಯಲ್ ಡೆವಲಪ್‌ಮೆಂಟ್, ಯುನೆಸ್ಕೊ, ಯುನಿಸೆಫ್, ಯುನೈಟ್ ನೇಷನ್ಸ್ ಎನ್ವೈರ್ನಮೆಂಟ್ ಪ್ರೋಗ್ರಾಂ ಮುಂತಾದ ಸಂಸ್ಥೆಗಳಿಗೂ ತಮ್ಮ ಗುರಿ, ಯೋಜನೆ, ಕಾರ್ಯಕ್ರಮ, ಆಯವ್ಯಯದಲ್ಲಿ ಜಂಡರ್ ಆಯಾಮವನ್ನು ಅಳವಡಿಸಿಕೊಳ್ಳಲು ಮತ್ತು ಮಹಿಳೆಯರಿಗಾಗಿಯೇ ಯೋಜನೆಗಳನ್ನು ರೂಪಿಸುವಂತೆ ತಿಳಿಸಿದೆ.

## ಮಹಿಳೆಯರ ಮಾನವ ಅಭಿವೃದ್ಧಿ ಮಾಪನ

ವಿಶ್ವಸಂಸ್ಥೆಯು ಜಾಗತಿಕ ಮಟ್ಟದಲ್ಲಿ ಮಹಿಳಾ ಸಶಕ್ತೀಕರಣಕ್ಕೆ ಪೂರಕವಾಗಿ ಕೈಗೊಂಡ ಮಹತ್ತರ ಯೋಜನೆಯೆಂದರೆ ಮಹಿಳೆಯರ ಮಾನವ ಅಭಿವೃದ್ಧಿಯನ್ನು ಮಾಪನಮಾಡಿದ್ದು. ವಿಶ್ವಸಂಸ್ಥೆಯ ಯು.ಎನ್.ಡಿ.ಪಿಯು ಜಾಗತಿಕ ಅಭಿವೃದ್ಧಿ ಸಂಪರ್ಕಜಾಲವಾಗಿದೆ. ಇದು ಜನರಲ್ ಅಸೆಂಬ್ಲಿಯ ಕಾರ್ಯಕಾರಿ ಮಂಡಳಿ. ಇದರಲ್ಲಿ ೧೭೭ ಸದಸ್ಯ ರಾಷ್ಟ್ರಗಳಿವೆ. ಇದು ತನ್ನ ಸದಸ್ಯ ರಾಷ್ಟ್ರಗಳು ಅಭಿವೃದ್ಧಿ ಸವಾಲುಗಳನ್ನು ಎದುರಿಸಲು ಬೇಕಾದ ನೆರವನ್ನು ನೀಡುತ್ತದೆ. ಸಹಸ್ರಮಾನ ಅಭಿವೃದ್ಧಿ ಗುರಿಗಳನ್ನು ಮುಟ್ಟಲು ತರಬೇತಿ, ಪರಿಣತಿ, ಹಣಕಾಸಿನ ಸಹಾಯವನ್ನು ವಿಶೇಷವಾಗಿ ಅಭಿವೃದ್ಧಿ ಹೊಂದದ ದೇಶಗಳಿಗೆ ನೀಡುತ್ತದೆ. ಇದು ಐದು ಮುಖ್ಯ ವಲಯಗಳಾದ ಬಡತನವನ್ನು ಕಡಿಮೆ ಮಾಡುವುದು, ಎಚ್.ಐ.ವಿ/ಏಡ್ಸ್, ಪ್ರಜಾಪ್ರಭುತ್ವ ಆಡಳಿತ, ಇಂಧನ ಮತ್ತು ಪರಿಸರ, ಸಾಮಾಜಿಕ ಅಭಿವೃದ್ಧಿ, ವಿಷಮ ಸ್ಥಿತಿಯನ್ನು ತಡೆಗಟ್ಟುವ ಮತ್ತು ಪುನರ್ ರೂಪಿಸುವುದರಲ್ಲಿ ಕೆಲಸ ಮಾಡುತ್ತಿದೆ.

ಯು.ಎನ್.ಡಿ.ಪಿಯು ೧೯೯೦ ರಿಂದ ಕೈಗೊಳ್ಳುತ್ತಿರುವ ಅತ್ಯಂತ ಮಹತ್ವದ ಯೋಜನೆಯೆಂದರೆ:

ಜಾಗತಿಕ ಮಟ್ಟದಲ್ಲಿ ಮಾನವ ಅಭಿವೃದ್ಧಿಯನ್ನು ಅಳೆಯುವುದು. ಇದು ಮಾನವರನ್ನು ದೇಶದ ಸಂಪತ್ತೆಂದು ಪರಿಗಣಿಸಿ ಮಾನವ ಅಭಿವೃದ್ಧಿಯನ್ನು ಮುಖ್ಯವಾಹಿನಿ ಅಭಿವೃದ್ಧಿಯ ಪ್ರಕ್ರಿಯೆಯ ಕೇಂದ್ರಬಿಂದುವಾಗಿಸಿದೆ. ೧೯೯೦ ರಿಂದ ಪ್ರತಿ ವರ್ಷ ತನ್ನೆಲ್ಲ ಸದಸ್ಯ ರಾಷ್ಟ್ರಗಳ ಮಾನವ ಅಭಿವೃದ್ಧಿಯನ್ನು ಮಾಪನಮಾಡಿ ವರದಿ ತಯಾರಿಸುತ್ತಿದೆ. ಒಟ್ಟು ಮಾನವ ಅಭಿವೃದ್ಧಿಯಲ್ಲಿ ಮಹಿಳೆಯರ ಮಾನವ ಅಭಿವೃದ್ಧಿಯನ್ನು ಒಳಗೊಂಡಿದ್ದರೂ, ಅದು ಮಹಿಳೆಯರ ನಿಜವಾದ ಮಾನವ ಅಭಿವೃದ್ಧಿಯನ್ನು ಪ್ರತಿಬಿಂಬಿಸುವುದಿಲ್ಲ ಎಂಬುದನ್ನು ಅರಿತು ೧೯೯೫ರಲ್ಲಿ ಪ್ರತ್ಯೇಕವಾಗಿ ಮಹಿಳಾ ಮಾನವ ಅಭಿವೃದ್ಧಿಯನ್ನು ಅಳೆದು 'ಜಂಡರ್ ಮತ್ತು ಮಾನವ ಅಭಿವೃದ್ಧಿ ೧೯೯೫' ವರದಿಯನ್ನು ಪ್ರಕಟಿಸಿತು. ಇದು ಮಹಿಳಾಭಿವೃದ್ಧಿ ಹಾಗು ಸಶಕ್ತೀಕರಣದ ಹಾದಿಯಲ್ಲಿ ಒಂದು ದೊಡ್ಡ ಮೈಲಿಗಲ್ಲು. ಏಕೆಂದರೆ ಇದು ಚಾಲ್ತಿಯಲ್ಲಿರುವ ಜಂಡರ್, ಸಮಾನತೆ, ಅವಕಾಶ ವಂಚಿತರಾಗುತ್ತಿರುವ ಮಹಿಳೆಯ ಸ್ಥಿತಿ, ಮಹಿಳೆಯರ ಕೆಳಸ್ಥಾನ, ಮುಂತಾದವುಗಳನ್ನು ದಾಖಲೆ ಸಮೇತ ಈ ವರದಿ ತೋರಿಸಿಕೊಟ್ಟಿತು. ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಅಸಮಾನತೆಯಿದೆ, ಏಕೆ ಇದೆ ಅನ್ನುವುದನ್ನು ಬಿಚ್ಚಿಟ್ಟಿತು. ಮುಂದೆ ಮಹಿಳಾ ಸಶಕ್ತೀಕರಣಕ್ಕೆ ಜಂಡರ್ ಸಮಾನತೆ ತರುವುದಕ್ಕೆ ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವುದಕ್ಕೆ ಏನು ಕ್ರಮಗಳನ್ನು ಕೈಗೊಳ್ಳ

ಬೇಕೆಂಬುದಕ್ಕೆ ಮಾರ್ಗಸೂಚಿಯನ್ನು ತಯಾರಿಸಲು ಸಹಾಯ ಮಾಡಿತು. ಹೀಗಾಗಿ ಈ ವರದಿಯ ಜಂಡರ್ ಸಮಾನತೆಯು ಇತಿಹಾಸದಲ್ಲಿ ಕ್ರಾಂತಿಕಾರಕ ಹೆಜ್ಜೆಯಾಗಿದೆ. 'ಮಾನವ ಅಭಿವೃದ್ಧಿಯನ್ನು ಅಲಿಂಗೀಕರಣ ಮಾಡದಿದ್ದರೆ ಅಪಾಯ' ಎಂಬ ಸಾಕ್ಷಿಯನ್ನು ರೂಪಿಸಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಒಳಗೊಳ್ಳುವುದು ಎಷ್ಟು ಮಹತ್ವ ಎನ್ನುವುದನ್ನು ಸೂಚಿಸಿತು. ಅರ್ಧದಷ್ಟು ಜನಸಂಖ್ಯೆಯಿರುವ ಮಹಿಳೆಯರನ್ನು ಅಭಿವೃದ್ಧಿಯಿಂದ ಹೊರಗಿಟ್ಟು ಅದರ ಲಾಭ ಪಡೆಯುವುದರಿಂದ ವಂಚಿತರನ್ನಾಗಿಸಿದರೆ ಅದು ಅನ್ಯಾಯವಾಗುತ್ತದೆ ಮತ್ತು ತಾರತಮ್ಯ ತೋರಿದಂತಾಗುತ್ತದೆ ಎಂದು ಹೇಳಿತು. ವರದಿಯು ಅಭಿವೃದ್ಧಿಯ ಜಂಡರ್ ತಟಸ್ಥವಾಗಿಲ್ಲ, ಅದು ಜಂಡರ್ ಅಂತರದಿಂದ ಕೂಡಿದೆ ಅನ್ನುವುದನ್ನು ತೋರಿಸಿಕೊಟ್ಟಿತು.

ಮಹಿಳೆಯರನ್ನು ಸಶಕ್ತಗೊಳಿಸಲು ಪೂರಕವಾದಂತಹ ತತ್ತ್ವಗಳನ್ನು ಅಳವಡಿಸಿಕೊಂಡಿತು. ಮಹಿಳೆಯರ ಸಾಮರ್ಥ್ಯವನ್ನು ಬೆಳೆಸುವುದರ ಮೇಲೆ ಹೂಡಿಕೆ ಮಾಡಿ ಸಶಕ್ತಗೊಳಿಸಿದರೆ ಅದರಿಂದ ಅವರಿಗಷ್ಟೆ ಲಾಭವಾಗುವುದಿಲ್ಲ, ಬದಲಿಗೆ ಇಡೀ ಅಭಿವೃದ್ಧಿಗೆ ಒಳಿತಾಗುತ್ತದೆ ಅನ್ನುವುದನ್ನು ವರದಿ ಒತ್ತಿ ಹೇಳಿತು. ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಆಯ್ಕೆಯ ಅವಕಾಶಗಳಿರಬೇಕು. ಒಂದು ವೇಳೆ ಅಡ್ಡಿಗಳಿದ್ದರೆ ಅವುಗಳನ್ನು ಹೋಗಲಾಡಿಸಬೇಕು ಎಂದು ಹೇಳಿತು. ಮಹಿಳಾ ಮಾನವ ಅಭಿವೃದ್ಧಿಯ ಅಳೆಯುವಿಕೆಯು ಅನೇಕ ವಾಸ್ತವಾಂಶಗಳನ್ನು, ಸತ್ಯಾಂಶಗಳನ್ನು ಬೆಳಕಿಗೆ ತಂದಿತು.

– ಜಗತ್ತು ಈಗಲೂ ಜಂಡರ್ ಅಸಮಾನತೆಯಿಂದ ಕೂಡಿದೆ.

– ರಾಷ್ಟ್ರೀಯ ಆದಾಯಕ್ಕೂ ಜಂಡರ್ ಅಸಮಾನತೆ ಹೋಗಲಾಡಿಸುವುದಕ್ಕೂ ಸಂಬಂಧವಿಲ್ಲ.

– ಕೆಲವು ರಾಷ್ಟ್ರಗಳು ವೇಗವಾಗಿ ಅಭಿವೃದ್ಧಿ ಹೊಂದುತ್ತಿವೆ. ಆದರೆ ಸ್ತ್ರೀ-ಪುರುಷರ ನಡುವಿನ ಅಸಮಾನತೆ ಹಾಗೆಯೇ ಇದೆ.

– ಮಹಿಳೆಯರ ಶೈಕ್ಷಣಿಕ ಮತ್ತು ಆರೋಗ್ಯ ಮಟ್ಟ ಸುಧಾರಿಸುತ್ತಿದ್ದರೂ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳ ಬಾಗಿಲುಗಳು ಮುಚ್ಚಿವೆ.

– ಮಹಿಳೆಯರ ಆರ್ಥಿಕ ಕೊಡುಗೆಯನ್ನು ಅಪಮೌಲ್ಯಗೊಳಿಸಲಾಗಿದೆ. ಅದರ ಅಪರೋಕ್ಷ ಕೊಡುಗೆ ಸುಮಾರು ೧೧ ಟ್ರಿಲಿಯನ್ ಡಾಲರ್ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮಹಿಳಾ ಮಾನವ ಅಭಿವೃದ್ಧಿಯನ್ನು ಅಳೆಯಲು ಬಳಸಿದ ಸೂಚ್ಯಂಕಗಳಾದ ಜಿಡಿಐ ಮತ್ತು ಜಿ.ಇ.ಎಂ ದೇಶದ ಆರ್ಥಿಕ ಪ್ರಗತಿ, ಅಂದರೆ ರಾಷ್ಟ್ರೀಯ ಆದಾಯ, ರಾಷ್ಟ್ರೀಯ ಆಂತರಿಕ ಉತ್ಪನ್ನ, ಬಡತನ, ಉದ್ಯೋಗ, ಬಂಡವಾಳ ಹೂಡುವಿಕೆ, ಒಟ್ಟು ಮಾನವ ಅಭಿವೃದ್ಧಿ ಹಾಗು ಜಂಡರ್ ಸಮಾನತೆಗಳ ನಡುವಿನ ಸಂಬಂಧವನ್ನು ತೋರಿಸಿಕೊಟ್ಟಿತು. ಜಿ.ಡಿ.ಐ ಮಹಿಳೆಯರ ಮಾನವ ಸಾಮರ್ಥ್ಯದ ಮಟ್ಟವನ್ನು ಸೂಚಿಸಿದರೆ, ಜಿ.ಇ.ಎಂ ಅವರ ಸಾಮರ್ಥ್ಯದ ಬಳಕೆ ಎಷ್ಟರ ಮಟ್ಟಿಗೆ ಆಗಿದೆ ಅನ್ನುವುದನ್ನು ಸೂಚಿಸುತ್ತದೆ. ನಾರ್ಡಿಕ್ ದೇಶಗಳಾದ ಸ್ವೀಡನ್, ಫಿನ್‌ಲ್ಯಾಂಡ್, ನಾರ್ವೆ ಮತ್ತು ಡೆನ್ಮಾರ್ಕ್ ದೇಶಗಳನ್ನು ಬಿಟ್ಟರೆ ಉಳಿದ ದೇಶಗಳಲ್ಲಿ ಮಹಿಳೆಯರ ಮಾನವ ಅಭಿವೃದ್ಧಿ ಅಂದರೆ ಜಿ.ಡಿ.ಐ ಕೆಳಮಟ್ಟದಲ್ಲಿದೆ. ಶಿಕ್ಷಣಮಟ್ಟ ಹಾಗೂ ಜೀವಿತಾವಧಿಯಲ್ಲಿ ಪುರುಷರಿಗೆ ಸಮಾನವಾಗಿದ್ದರೂ ಆದಾಯ ಪಡೆಯುವಲ್ಲಿ ಮಹಿಳೆಯರು ಪುರುಷರಿಗಿಂತ ಹಿಂದೆ ಇದ್ದಾರೆ. ವಿಶೇಷವಾಗಿ ರಾಜಕೀಯದಲ್ಲಿ ಅವರ ಭಾಗವಹಿಸುವಿಕೆ ಅತ್ಯಂತ ಕಡಿಮೆಯಿದ್ದು, ದುಡಿಮೆಯಲ್ಲಿ ಪುರುಷರಿಗೆ ಸಮಾನರಿದ್ದರೂ ಉನ್ನತ ಅಧಿಕಾರ ಸ್ಥಾನಗಳನ್ನು ಪಡೆಯಲಾಗಿಲ್ಲ. ಈ ಎಲ್ಲಾ ಅಸಮಾನತೆಗಳನ್ನು ಹೋಗಲಾಡಿಸಿ ಮಹಿಳೆಯರನ್ನು ಸಶಕ್ತಗೊಳಿಸಲು ಮಹಿಳಾ ಮಾನವ ಅಭಿವೃದ್ಧಿ ವರದಿಯು ೫ ಅಂಶಗಳ ಶಿಫಾರಸ್ಸುಗಳನ್ನು ಮಾಡಿತು.

೧. ಈಗಿರುವ ಅಂತಾರಾಷ್ಟ್ರೀಯ/ರಾಷ್ಟ್ರೀಯ ಕಾನೂನು ಸವಲತ್ತುಗಳನ್ನು ಬಳಸಿಕೊಂಡು ಮಹಿಳೆಯರಿಗೆ ನ್ಯಾಯ, ಹಕ್ಕು, ರಕ್ಷಣೆ, ಸಮಾನತೆ ದೊರಕುವಂತೆ ಕಾನೂನು ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು.

೨. ಮಹಿಳೆಯರ ಆರ್ಥಿಕ ಆಯ್ಕೆಗಳನ್ನು ವಿಸ್ತರಿಸಲು ಸೂಕ್ತ ಆರ್ಥಿಕ ನೀತಿ ಹಾಗು ಕೌಟುಂಬಿಕ ರಚನೆಯಲ್ಲಿ ಬದಲಾವಣೆ ತರಬೇಕು. (ಉದಾ: ಮನೆಗೆಲಸದ ಹಂಚಿಕೆ, ಮಹಿಳಾ ಉದ್ಯೋಗಿಗಳಿಗೆ ಕೆಲಸದ ಅವಧಿ, ತೆರಿಗೆ, ಬಡ್ಡಿ, ಆಸ್ತಿ ಹಕ್ಕಿನಲ್ಲಿ ವಿಶೇಷ ಸವಲತ್ತುಗಳು)

೩. ನಿರ್ಧಾರ ಕೈಗೊಳ್ಳುವ ಸ್ಥಾನಗಳಲ್ಲಿ ಶೇಕಡ ೩೦ ಮೀಸಲಾತಿ.

೪. ಸ್ತ್ರೀ ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಯೋಜನೆಗಳು.

೫. ಆರ್ಥಿಕ ಮತ್ತು ರಾಜಕೀಯ ಅವಕಾಶಗಳ ಲಭ್ಯತೆಯನ್ನು ಹೆಚ್ಚಿಸಲು ಮೂಲ ಸಾಮಾಜಿಕ ಸೇವೆಗಳನ್ನು ಸಂತಾನೋತ್ಪತ್ತಿ ಆರೋಗ್ಯ ಸೇವೆ, ಹಣಕಾಸಿನ ಸೌಲಭ್ಯ, ಸುಸ್ಥಿರ ಜೀವನೋಪಾಯ ಒದಗಿಸುವ ಬಡತನ ನಿರ್ಮೂಲನ ಕಾರ್ಯಕ್ರಮ ಮತ್ತು ಸಾಮರ್ಥ್ಯ ಬೆಳೆಸುವ ಹಾಗು ಸಶಕ್ತಗೊಳಿಸುವ ಯೋಜನೆಗಳನ್ನು ಹಮ್ಮಿಕೊಳ್ಳುವುದು.

ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಸ್ತ್ರೀ–ಪುರುಷರ ನಡುವೆ ಇರುವ ಅಂತರವನ್ನು ಬಟಾಬಯಲು ಮಾಡಿದ ಈ ವರದಿ ಮುಂದೆ ಯಾವ ಕಾರ್ಯನೀತಿ, ಯೋಜನೆಗಳನ್ನು ಕೈಗೊಂಡರೆ ಸೂಕ್ತ ಎಂಬ ಸಲಹೆಗಳನ್ನು ನೀಡಿ ಮಹಿಳಾ ಸಶಕ್ತೀಕರಣ ಪ್ರಕ್ರಿಯೆಗೆ ಕ್ರಾಂತಿಕಾರಕ ಚಾಲನೆಯನ್ನು ನೀಡಿತು. ರಾಷ್ಟ್ರ ಮಟ್ಟದಲ್ಲಿಯೂ ಅವುಗಳನ್ನು ಅಳವಡಿಸಿಕೊಳ್ಳಲು ಮಾರ್ಗತೋರಿತು.

## ರಾಷ್ಟ್ರೀಯ ಮಟ್ಟ – ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ

ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ತತ್ತ್ವಗಳಿಂದ ಪ್ರಭಾವಗೊಂಡು ರೂಪಿತವಾದ ನಮ್ಮ ಸಂವಿಧಾನವು ಲಿಂಗಭೇದ ನಿಷೇಧಿಸಿ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸಮಾನತೆ ದೊರಕುವಂತೆ ಮಾಡಿತು. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಮಹಿಳೆಯರಿಗೆ ಸಂಬಂಧಪಟ್ಟ ಅಂತಾರಾಷ್ಟ್ರೀಯ ಒಡಂಬಡಿಕೆ, ಕಾಯಿದೆಗಳನ್ನು ಭಾರತ ಸರ್ಕಾರವು ಅಳವಡಿಸಿಕೊಂಡಿತು. ಪ್ರಾರಂಭದಲ್ಲಿ 'ಮಹಿಳಾ ಸಶಕ್ತೀಕರಣ'ದ ಪರಿಕಲ್ಪನೆಯಿಲ್ಲದಿದ್ದರೂ ಅದಕ್ಕೆ ಪೂರಕವಾದ ವಾತಾವರಣವು ರೂಪುಗೊಳ್ಳುತ್ತಾ ಹೋಯಿತು. ಮಹಿಳೆಯರ ಕಲ್ಯಾಣ, ಅಭಿವೃದ್ಧಿ ಮತ್ತು ಸಶಕ್ತೀಕರಣಕ್ಕಾಗಿ ೧೯೫೦ರ ದಶಕದಿಂದ ಸರ್ಕಾರ ಕೈಗೊಂಡ ಪ್ರಯತ್ನ ಜಾರಿಗೊಂಡ ವಿವಿಧ ಕಾರ್ಯನೀತಿ ಕಾರ್ಯಕ್ರಮಗಳನ್ನು ಗುರುತಿಸಬಹುದು.

– ಸಂವಿಧಾನದಲ್ಲಿ ಜಂಡರ್ ಸಮಾನತೆಯನ್ನು ಅಳವಡಿಸಿಕೊಂಡಿದ್ದು

– ರಾಜ್ಯ ನಿರ್ದೇಶಕ ತತ್ವಗಳ ಕಾರ್ಯನೀತಿಯಲ್ಲೂ ಮಹಿಳಾ ಪರ ನಿಲುವುಗಳು.

– ಮಹಿಳೆಯರ ಹಕ್ಕುಗಳ ರಕ್ಷಣೆ, ಸಮಾನತೆ, ನ್ಯಾಯ ತಂದುಕೊಡುವಂತಹ ಕಾಯಿದೆಗಳ ಜಾರಿ ಮತ್ತು ತಿದ್ದುಪಡಿ.

– ಕೇಂದ್ರ ಸಮಾಜ ಕಲ್ಯಾಣ ಮಂಡಳಿ ಯೋಜನೆಗಳಲ್ಲಿ ಮಹಿಳೆಯರಿಗೆ ಆದ್ಯತೆ.

– ೧೯೭೧ರಲ್ಲಿ 'ಭಾರತದ ಮಹಿಳೆಯರ ಸ್ಥಾನ ರಾಷ್ಟ್ರೀಯ ಸಮಿತಿ'ಯನ್ನು ರಚಿಸಿ ಅದರ ಕ್ಷೇತ್ರ ಅಧ್ಯಯನವನ್ನು ಆಧರಿಸಿ 'ಸಮಾನತೆಯೆಡೆಗೆ' ಎಂಬ ವರದಿಯನ್ನು ೧೯೭೪ರಲ್ಲಿ ಪ್ರಕಟಿಸಿತು. ಇದು ಭಾರತದ ಇತಿಹಾಸದಲ್ಲಿ ಮಹಿಳೆಯರ ಸ್ಥಾನ ಕುರಿತು ಅಧಿಕೃತ ಮಾಹಿತಿಯನ್ನು ನೀಡಿದಂತಹ ಮೊಟ್ಟ ಮೊದಲ ದಾಖಲೆ, ಹಾಗೂ ಮುಂದೆ ಮಹಿಳಾಭಿವೃದ್ಧಿ ಸಶಕ್ತೀಕರಣಕ್ಕೆ ಪ್ರಾಯೋಗಿಕ ಪ್ರಯತ್ನಗಳನ್ನು ಕೈಗೊಳ್ಳಲು ತಾತ್ವಿಕ ನೆಲೆಯನ್ನು ಒದಗಿಸಿದಂತಹ ವರದಿ.

– ಮಹಿಳಾ ವಿಷಯಗಳನ್ನು ನಿರ್ವಹಿಸಲು ಪ್ರತ್ಯೇಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಚಿವಾಲಯ, ನಿಗಮ, ಆಯೋಗಗಳ ಸ್ಥಾಪನೆ

– ಪಂಚವಾರ್ಷಿಕ ಯೋಜನೆಯಲ್ಲಿ 'ಮಹಿಳಾಭಿವೃದ್ಧಿ ಅಧ್ಯಾಯದ' ಸೇರ್ಪಡೆ

– ಮಹಿಳಾ ನಿರ್ದಿಷ್ಟ ಕಾರ್ಯಕ್ರಮಗಳ ಅನುಷ್ಠಾನ (ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯ, ಸ್ವಸಹಾಯ ಗುಂಪುಗಳ ರಚನೆ)

– ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿ

– ಮಹಿಳಾ ಸಶಕ್ತೀಕರಣ ರಾಷ್ಟ್ರೀಯ ಕಾರ್ಯನೀತಿಯ ಅಳವಡಿಕೆ

– ಉದ್ಯೋಗದಲ್ಲಿ ಮಹಿಳೆಯರಿಗೆ ಮೀಸಲಾತಿ (ಕೆಲವು ರಾಜ್ಯಗಳಲ್ಲಿ).

– ಆರ್ಥಿಕ ನೀತಿಯಲ್ಲಿ ಜಂಡರ್ ಬಜೆಟಿಂಗ್, ಜಂಡರ್ ಯೋಜನೆಗಳ ಅಳವಡಿಕೆ

ಸರ್ಕಾರದ ಕೆಲವು ಪ್ರಯತ್ನಗಳನ್ನು ಸಂಕ್ಷಿಪ್ತ ವಿವರಣೆ ಮೂಲಕ ತಿಳಿದುಕೊಳ್ಳೋಣ

೧. ಎಲ್ಲಾ ಕ್ಷೇತ್ರಗಳಲ್ಲಿ ಸ್ತ್ರೀ–ಪುರುಷರಿಗೆ ಸಮಾನತೆ, ಸ್ವಾತಂತ್ರ್ಯಗಳ ಹಕ್ಕುಗಳನ್ನು ನೀಡುವ ಮೂಲಕ ಸಂವಿಧಾನವು ಮಹಿಳಾ ಸಶಕ್ತೀಕರಣಕ್ಕೆ ನಾಂದಿಯನ್ನು ಹಾಡಿತು. ಇದು ಏಕೆ ತುಂಬ ಮಹತ್ವದ್ದಾಗುತ್ತದೆ ಎಂದರೆ ಅನೇಕ ದೇಶಗಳಲ್ಲಿ ಮಹಿಳೆಯರಿಗೆ ಸಂವಿಧಾನಾತ್ಮಕ ಸಮಾನತೆಯಿಲ್ಲ. ಅದನ್ನು ಪಡೆಯಲು ಹೋರಾಟ ಮಾಡುತ್ತಿದ್ದಾರೆ. ಸಮಾನತೆಯಷ್ಟೆ ಅಲ್ಲದೆ ಮಹಿಳೆಯರ ಜೈವಿಕ ಸ್ಥಿತಿ ಮತ್ತು ಕ್ರಿಯೆ, ಸಾಮಾಜಿಕ ಸ್ಥಿತಿ, ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ಕೆಲವು ವಿಶೇಷ ಸವಲತ್ತುಗಳನ್ನು ನೀಡಿದೆ. (ಉದಾಹರಣೆಗೆ ಹೆರಿಗೆ ಭತ್ಯೆ ಸೌಲಭ್ಯ). ಮಹಿಳೆಯರ ಮೇಲೆ ಪ್ರತಿಕೂಲ ಪರಿಣಾಮ ಬೀರುವಂತಹ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ವಿಶೇಷ ಕಾಯಿದೆಗಳನ್ನು ಅನುಷ್ಠಾನಗೊಳಿಸಲಾಯಿತು. ಉದಾ: ವರದಕ್ಷಿಣೆ ಕಾಯಿದೆ, ಬಾಲ್ಯವಿವಾಹ ನಿಷೇಧ ಕಾಯಿದೆ, ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಅಪರಾಧಿ ಕಾಯಿದೆಯಲ್ಲಿ ತಿದ್ದುಪಡಿ, ಕೌಟುಂಬಿಕ ಹಿಂಸೆ ನಿಷೇಧ ಕಾಯಿದೆ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವ ಕಾಯಿದೆಗಳನ್ನು ಜಾರಿಗೊಳಿಸಲಾಯಿತು. ಇಷ್ಟೆಲ್ಲ ಕಾಯಿದೆಗಳಿದ್ದರೂ ಮಹಿಳೆಯರ ಹಕ್ಕುಗಳ ಉಲ್ಲಂಘನೆ, ನ್ಯಾಯ ದೊರಕುವುದರಲ್ಲಿ ವಿಳಂಬವಾಗುತ್ತಿರುವುದು ಕಂಡುಬರುತ್ತದೆ. ಮಹಿಳೆಯರ ಮೇಲೆ ದೌರ್ಜನ್ಯವೆಸಗುವುದರ ಮೂಲಕ ಪುರುಷಾಧಿಪತ್ಯ ಮಹಿಳೆಯರನ್ನು

ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದೆ. ಮಹಿಳೆಯರ ಚಲನ, ನಿರ್ಧಾರ ಕೈಗೊಳ್ಳುವ ಹಕ್ಕು, ಆರ್ಥಿಕ ಸ್ವಾವಲಂಬನೆಗಳಿಗೆ ಈಗಲೂ ಚ್ಯುತಿಯುಂಟಾಗುತ್ತಿದ್ದು ಮಹಿಳಾ ಸಶಕ್ತೀಕರಣ ಪ್ರಕ್ರಿಯೆ ನಿಧಾನವಾಗುತ್ತಿದೆ.

೨. ಮಹಿಳೆಯರ ಜನಸಂಖ್ಯೆ, ಅವರ ಸಮಸ್ಯೆಗಳ ತೀವ್ರತೆ, ಅವುಗಳ ಶೀಘ್ರ ನಿವಾರಣೆಯ ಆವಶ್ಯಕತೆಯನ್ನು ಮನಗಂಡು ಸರ್ಕಾರ ಮಹಿಳೆಯರಿಗಾಗಿ ಮಹಿಳಾ ವಿಷಯಗಳ ನಿರ್ವಹಣೆಗಾಗಿ ಪ್ರತ್ಯೇಕ ಸಚಿವಾಲಯ, ಇಲಾಖೆ, ಘಟಕ, ನಿಗಮ, ಆಯೋಗಗಳನ್ನು ಸ್ಥಾಪಿಸಿತು. ಪ್ರತ್ಯೇಕವಾಗಿ ಸ್ಥಾಪಿಸಿದರೂ ಮಹಿಳೆಯರನ್ನು ಸಾಂಪ್ರದಾಯಿಕ ದೃಷ್ಟಿಕೋನದಿಂದ ನೋಡುವುದನ್ನು ಬಿಡಲಾಗಿಲ್ಲ ಎನ್ನುವುದಕ್ಕೆ ಉದಾಹರಣೆಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಇಲಾಖೆಯಲ್ಲಿ 'ಮಕ್ಕಳ'ನ್ನು ಸೇರಿಸಿರುವುದು ಕಂಡುಬರುತ್ತದೆ. ಮಕ್ಕಳ ಬಗ್ಗೆ ಕಾಳಜಿಯಿರುವುದಾದರೆ ಅವರಿಗೆ ಪ್ರತ್ಯೇಕ ಸಚಿವಾಲಯ ಇಲಾಖೆ ಸ್ಥಾಪಿಸಲಿ. ಮಹಿಳೆಯರೊಂದಿಗೆ ಮಕ್ಕಳನ್ನು ಬಾಲದಂತೆ ಏಕೆ ಸೇರಿಸಬೇಕು? ಅಂದರೆ ಮಹಿಳೆಯನ್ನು ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ನೋಡಲು ಸಾಧ್ಯವಾಗುತ್ತಿಲ್ಲ. ಅವಳನ್ನು ಗೃಹಿಣಿಯಾಗಿ, ತಾಯಿಯಾಗಿ ಗುರುತಿಸುವುದಕ್ಕೆ ಆದ್ಯತೆ ನೀಡಲಾಗುತ್ತಿದೆ.

ಈ ಸಚಿವಾಲಯ ಮತ್ತು ಇಲಾಖೆಗಳ ಕಾರ್ಯಕ್ರಮಗಳಲ್ಲಿ ಕಲ್ಯಾಣ, ಅಭಿವೃದ್ಧಿ ಹಾಗು ಸಶಕ್ತೀಕರಣದ ಕಾರ್ಯಕ್ರಮಗಳಿವೆ. ನಿರ್ಗತಿಕ, ಸಂಕಷ್ಟದಲ್ಲಿರುವ ಮಹಿಳೆಯರಿಗೆ ಆಶ್ರಯ ತಾಣ, ಗ್ರಾಮೀಣ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ, ಕೌಶಲ್ಯ ತರಬೇತಿ, ಸಾಧನೆ ಮಾಡಿದ ಮಹಿಳೆಯರಿಗೆ ಪ್ರಶಸ್ತಿ, ಅಂಗನವಾಡಿ ಕೇಂದ್ರಗಳನ್ನು ನಡೆಸುವುದು, ಆರೋಗ್ಯ ಯೋಜನೆಗಳು, ಆದಾಯೋತ್ಪನ್ನ ಚಟುವಟಿಕೆಗಳಿಗೆ ಸಹಾಯಧನ ಮತ್ತು ಸಾಲ ನೀಡುವುದು, ಸ್ವಸಹಾಯ ಗುಂಪುಗಳ ರಚನೆ, ಮುಂತಾದವು ಸೇರಿವೆ. ಪ್ರತ್ಯೇಕ ಸಚಿವರು, ಸಿಬ್ಬಂದಿ, ಹಣಕಾಸಿಕ ಅನುದಾನವೂ ದೊರಕುತ್ತಿವೆ. ಆದರೆ ಅನುಷ್ಠಾನದಲ್ಲಿ ಇತರ ಸರ್ಕಾರಿ ಇಲಾಖೆಗಳ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆ, ಗುರಿ ಸಾಧನೆ ಕಂಡುಬರುತ್ತಿಲ್ಲ. ಸಂಪೂರ್ಣ ಮಹಿಳಾಪರ ದೃಷ್ಟಿಕೋನ, ಬದ್ಧತೆ, ಪ್ರಾಮಾಣಿಕತೆ ಇರುವ ಸಚಿವರು, ಸಿಬ್ಬಂದಿಯವರು ಇಲ್ಲಿ ಕಾರ್ಯನಿರ್ವಹಿಸಬೇಕು. ಆದರೆ ಅಂತಹವರ ಕೊರತೆಯಿಲ್ಲಿ ಕಂಡುಬರುತ್ತಿರುವುದರಿಂದ ಭಾರತದ ಮಹಿಳೆಯರ ಸ್ಥಾನ ಉತ್ತಮಗೊಳಿಸುವ ಅವರನ್ನು ಸಶಕ್ತಗೊಳಿಸುವ ಗತಿ ನಿಧಾನವಾಗುತ್ತಿದೆ.

೩. ದೇಶದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರವಾಗಿದ್ದರೂ ಪಂಚವಾರ್ಷಿಕ ಯೋಜನೆಯಲ್ಲಿ ಅವರ ಅಭಿವೃದ್ಧಿಗಾಗಿ ಪ್ರತ್ಯೇಕ ಆದಾಯ, ಹಣಕಾಸಿನ ಹಂಚಿಕೆ ಪಡೆಯಲು ೭ನೇ ಪಂಚವಾರ್ಷಿಕ ಯೋಜನೆಯವರೆಗೂ ಕಾಯಬೇಕಾಯಿತು. ಈ ಯೋಜನೆಯಲ್ಲಿ 'ಮಹಿಳಾಭಿವೃದ್ಧಿ ಆದಾಯ'ವನ್ನು ಸೇರಿಸಿ ಪ್ರತ್ಯೇಕವಾಗಿ ಹಣವನ್ನು ಮೀಸಲಿಡಲಾಯಿತು. ಇದರಡಿಯಲ್ಲಿ ಮಹಿಳಾ ನಿರ್ದಿಷ್ಟ ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳು ಜಾರಿಗೊಂಡವು. ಮಹಿಳಾ ಉದ್ಯಮಶೀಲತೆಯನ್ನು ಬೆಳೆಸಲು ಮಹಿಳಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಯಿತು. ಮಹಿಳೆಯರ ಶಿಕ್ಷಣ, ಆರೋಗ್ಯ ಹಾಗು ಆರ್ಥಿಕ ಸ್ವಾವಲಂಬನೆಗೆ ಹೆಚ್ಚು ಒತ್ತು ನೀಡಲಾಯಿತು.

೪. ಮಹಿಳೆಯರ ರಾಜಕೀಯ ಸಶಕ್ತೀಕರಣದ ಸಾಧನವಾಗಿ ಪಂಚಾಯತ್ ವ್ಯವಸ್ಥೆಯಲ್ಲಿ ಶೇಕಡ ೩೦ರಷ್ಟು ಮೀಸಲಾತಿ ಮೂಡಿಬಂದಿತು. ತಳಮಟ್ಟದ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪರಿಮಾಣಾತ್ಮಕ ಭಾಗವಹಿಸುವಿಕೆ ಗಣನೀಯವಾಗಿ ಏರಿತು. ಆದರೆ ಗುಣಾತ್ಮಕ ಭಾಗವಹಿಸುವಿಕೆ ಉತ್ತಮಗೊಳ್ಳಬೇಕಿದೆ. ಗ್ರಾಮ ಪಂಚಾಯಿತಿಗಳಲ್ಲಿ ಕೆಲವೆಡೆ ಮಹಿಳಾ ಅಧ್ಯಕ್ಷರು, ಸದಸ್ಯರು ಸಕ್ರಿಯವಾಗಿ ಭಾಗವಹಿಸುತ್ತಿರುವ ಉದಾಹರಣೆಗಳು ರಾಜಕೀಯವಾಗಿಯೂ ಮಹಿಳೆಯರು ಯಶಸ್ವಿಯಾಗಿ ಕಾರ್ಯನಿರ್ವಹಿಸ ಬಲ್ಲರು ಎನ್ನುವುದನ್ನು ತೋರಿಸಿಕೊಟ್ಟಿದೆ. ಆದರೆ ಪುರುಷ ದೃಷ್ಟಿಕೋನವು ಯಶಸ್ವಿ ಮಹಿಳೆಯರನ್ನು ಮರೆಮಾಡಿ ತಂದೆ, ಪತಿ, ಅಣ್ಣ ತಮ್ಮಂದಿರ ಮೂಲಕ ಕೆಲಸ ಮಾಡುವ ಮಹಿಳೆಯರನ್ನು, ಭ್ರಷ್ಟಾಚಾರದಲ್ಲಿ ತೊಡಗಿರುವ, ಕೇವಲ ಹೆಬ್ಬೆಟ್ಟನ್ನು ಒತ್ತಿ ಮೂಕ ಪ್ರೇಕ್ಷಕರಾಗಿರುವ ರಾಜಕೀಯ ಹಿನ್ನೆಲೆಯಿರುವ ಮೇಲುಸ್ತರದ ಮಹಿಳಾ ಸದಸ್ಯರನ್ನು ಮುಂದಿಟ್ಟುಕೊಂಡು, ಮೀಸಲಾತಿಯಿಂದ ಏನು ಪ್ರಯೋಜನವೆಂದು ಕೇಳುತ್ತಾ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನೀಡಬೇಕಾಗಿರುವ ಮೀಸಲಾತಿಯನ್ನು ನಿರಾಕರಿಸುತ್ತಾ ಬಂದಿದೆ. ೧೫ ವರ್ಷಗಳಿಂದ ೮೧ನೇ ಸಂವಿಧಾನ ತಿದ್ದುಪಡಿ ಮಸೂದೆಯು ಜಾರಿಗೊಳ್ಳದೆ ಹಾಗೆ ಉಳಿದಿದೆ. ಎಂದಾದರೊಂದು ದಿನ ಅದು ಜಾರಿಗೆ ಬರುತ್ತದೆ, ಮತ್ತು ಅದರಿಂದ ಭಾರತದ ಮಹಿಳೆಯರ ರಾಜಕೀಯ ಜೀವನದಲ್ಲಿ ಸಕಾರಾತ್ಮಕ ಕ್ರಾಂತಿಕಾರಕ ಬದಲಾವಣೆ ಉಂಟಾಗುತ್ತದೆ ಎಂದು ಆಶಿಸೋಣ.

೫. ಮಹಿಳಾ ಸಶಕ್ತೀಕರಣ ಪ್ರಕ್ರಿಯೆಗೆ ಒಂದು ಸಮಗ್ರ ಚೌಕಟ್ಟನ್ನು ನೀಡಲು ೨೦೦೧ರಲ್ಲಿ "ಮಹಿಳಾ ಸಶಕ್ತೀಕರಣ ರಾಷ್ಟ್ರೀಯ ನೀತಿ"ಯನ್ನು ಜಾರಿಗೆ

ತರಲಾಯಿತು. ಕಾನೂನು ವ್ಯವಸ್ಥೆ, ರಾಜಕೀಯ ಭಾಗವಹಿಸುವಿಕೆ, ಶಿಕ್ಷಣ, ಉದ್ಯೋಗಾವಕಾಶ, ಆರೋಗ್ಯ, ಪೌಷ್ಟಿಕತೆ, ದೌರ್ಜನ್ಯ ನಿರ್ಮೂಲನೆ, ಹಣಕಾಸಿನ ಸೌಲಭ್ಯ, ತಂತ್ರಜ್ಞಾನ, ಜಾಗತೀಕರಣ, ವಿವಿಧ ಸಂಸ್ಥೆಗಳ ನಡುವೆ ಸಂಯೋಜನೆ, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜಂಡರ್ ದೃಷ್ಟಿಕೋನವನ್ನು ಸೇರಿಸುವುದು, ಇವೇ ಮುಂತಾದ ವಲಯಗಳಲ್ಲಿ ಮಹಿಳೆಯರ ಸಬಲೀಕರಣಕ್ಕೆ ಅಗತ್ಯವಾದ ಕಾರ್ಯನೀತಿ, ಯೋಜನೆಗಳನ್ನು ಹಮ್ಮಿಕೊಳ್ಳುವುದಕ್ಕೆ ಈ ರಾಷ್ಟ್ರೀಯ ನೀತಿಯು ತಾತ್ವಿಕ ನೆಲೆಯನ್ನು ಒದಗಿಸುತ್ತದೆ.

೬. ಮಹಿಳೆಯರನ್ನು ಆರ್ಥಿಕವಾಗಿ ಸಬಲಗೊಳಿಸಲು ಜಂಡರ್ ಬಜೆಟಿಂಗ್ ಮತ್ತು ಜಂಡರ್ ಯೋಜನೆಯನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಸಾಮಾನ್ಯ ಆಯವ್ಯಯ ಪತ್ರದಲ್ಲಿ ಗೃಹಿಣಿಯರಿಗೆ, ಉದ್ಯೋಗಸ್ಥ ಹಾಗು ಬಡ ಮಹಿಳೆಯರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ರೂಪಿಸಿ ಅದಕ್ಕೆ ಪ್ರತ್ಯೇಕ ಹಣದ ಹಂಚಿಕೆ ನೀಡಲಾಗುತ್ತಿದೆ. ತೆರಿಗೆ ವಿನಾಯಿತಿ, ಸ್ಟ್ಯಾಂಡರ್ಡ್ ಡಿಡಕ್ಷನ್ ಏರಿಕೆ, ಬೆಲೆ ಏರಿಕೆ ನಿಯಂತ್ರಣ, ಎಲ್.ಪಿ.ಜಿ, ಸೀಮೆಎಣ್ಣೆಗೆ ಸಹಾಯಧನ, ಬಡ ಮಹಿಳೆಯರಿಗೆ ಪಡಿತರ ಚೀಟಿ ವಿತರಣೆ, ಮಾಸಾಶನ, ವಿಧವೆಯರಿಗೆ ಪಿಂಚಣಿ, ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಯಾವುದೇ ಸಾಮಾನ್ಯ ಯೋಜನೆ ಕಾರ್ಯನೀತಿಗಳನ್ನು ಜಂಡರ್ ವಿಶ್ಲೇಷಣೆಗೆ ಒಳಪಡಿಸಿ ಅವು ಮಹಿಳೆಯರ ಮೇಲೆ ಬೀರುವ ಪರಿಣಾಮವನ್ನು ಪರಿಶೀಲಿಸುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ತಯಾರಿಸುತ್ತಿರುವ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾಮಟ್ಟದ ಮಾನವ ಅಭಿವೃದ್ಧಿ ವರದಿಗಳಲ್ಲಿ 'ಜಂಡರ್ ಅಸಮಾನತೆ ಸೂಚ್ಯಂಕ'ಗಳನ್ನು ಲೆಕ್ಕಹಾಕಿ ಮಹಿಳಾ ಮಾನವ ಅಭಿವೃದ್ಧಿಯನ್ನು ಅಳೆಯಲಾಗುತ್ತಿದೆ. 'ಜಂಡರ್ ಅಸಮಾನತೆ ಸೂಚ್ಯಂಕ'ವು ಸ್ತ್ರೀ ಪುರುಷರ ನಡುವಿನ ಅಭಿವೃದ್ಧಿ ಅಂತರವನ್ನು ಗುರುತಿಸಿ ಅದನ್ನು ಕಡಿಮೆ ಮಾಡಲು ಏನೇನು ಕ್ರಮಕೈಗೊಳ್ಳಬಹುದು ಎನ್ನುವುದನ್ನು ಸೂಚಿಸಲಾಗುತ್ತಿದೆ.

ಇಷ್ಟೆಲ್ಲ ಪ್ರಯತ್ನಗಳು ನಡೆದಿದ್ದರೂ, ಮಹಿಳಾ ಚಳುವಳಿಯ ಒತ್ತಡದ ಫಲವಾಗಿ ಕಾಯಿದೆಗಳಲ್ಲಿ ತಿದ್ದುಪಡಿ, ಸುಧಾರಣೆಗಳನ್ನು ಮಾಡುತ್ತಿದ್ದರೂ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿವೆ. ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ, ಕೌಟುಂಬಿಕ ಹಿಂಸೆಗಳ ಪ್ರಕರಣ, ಅತ್ಯಾಚಾರ ಪ್ರಕರಣಗಳು– ವಿಶೇಷವಾಗಿ ಚಿಕ್ಕ ಚಿಕ್ಕ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಹೆಚ್ಚಾಗುತ್ತಿರುವುದರಿಂದ

ನಾವು ಮಹಿಳೆಯರ ಸಶಕ್ತೀಕರಣದ ಕಡೆಗೆ ಹೋಗುತ್ತಿದ್ದೇವೆಯೋ, ಅಥವಾ ಅವರನ್ನು ಅಶಕ್ತರನ್ನಾಗಿಸುತ್ತಿದ್ದೇವೆಯೋ ಎನ್ನುವ ಪ್ರಶ್ನೆ ಏಳುತ್ತದೆ.

## ಸರ್ಕಾರೇತರ ಸಂಸ್ಥೆಗಳು ಮತ್ತು ಮಹಿಳಾ ಸಶಕ್ತೀಕರಣ

ಸ್ವಾತಂತ್ರ್ಯಾನಂತರ ಸರ್ಕಾರ ಅಭಿವೃದ್ಧಿ ಕಾರ್ಯಗಳ ಹೊಣೆಯನ್ನು ತಾನೇ ಹೊತ್ತುಕೊಂಡಿತು. ಆದರೆ ದೇಶದ ವ್ಯಾಪ್ತಿ, ಜನಸಂಖ್ಯೆ ಮತ್ತು ಕೈಗೊಳ್ಳಬೇಕಾದ ಕಾರ್ಯಗಳ ಅಗಾಧತೆಯನ್ನು ಮನಗಂಡು ಸ್ವಯಂ ಸೇವಾ ಸಂಸ್ಥೆಗಳನ್ನು ತೊಡಗಿಸಿಕೊಳ್ಳಲು ಪ್ರಾರಂಭಿಸಿತು. ಮೊದಲಿಗೆ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ಜನಕಲ್ಯಾಣ ಯೋಜನೆಗಳನ್ನು ಈ ಸ್ವಯಂಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಪ್ರಯತ್ನಿಸಿತು. ಇದಕ್ಕೂ ಪ್ರೇರಣೆ ವಿಶ್ವಸಂಸ್ಥೆಯ ಕಾರ್ಯತಂತ್ರ. ವಿಶ್ವಸಂಸ್ಥೆಯು ತನ್ನ ಕಾರ್ಯ ವಿಸ್ತರಣೆಗೆ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಕೆಲಸಮಾಡುತ್ತಿದ್ದ ಸರ್ಕಾರೇತರ ಸಂಸ್ಥೆಗಳನ್ನು ಸೇರಿಸಿಕೊಂಡಿತು. ಅನುದಾನ ಪಡೆಯುವ ಮತ್ತು ಜನರೊಂದಿಗೆ ನೇರವಾಗಿ ಕೆಲಸಮಾಡುವ ಸರ್ಕಾರೇತರ ಸಂಸ್ಥೆಗಳು ವಿಶ್ವ ಸಂಸ್ಥೆಯ ನಿರ್ಧಾರಕೈಗೊಳ್ಳುವಿಕೆ ಮತ್ತು ಕಾರ್ಯನಿರ್ವಹಣೆಯಲ್ಲಿ ಪ್ರಬಲ ಸ್ಥಾನ ಪಡೆದವು.

೧೯೭೦ರ ದಶಕದ ಹೊತ್ತಿಗೆ ಸರ್ಕಾರೇತರ ಸಂಸ್ಥೆಗಳು ಸರ್ಕಾರಿ ವಲಯಕ್ಕೆ ಪರ್ಯಾಯ ವ್ಯವಸ್ಥೆಯಾಗಿ ರೂಪುಗೊಂಡವು. ಇವುಗಳಲ್ಲಿ ಎರಡು ಪ್ರಕಾರದ ಸಂಸ್ಥೆಗಳನ್ನು ನೋಡಬಹುದು. ಒಂದು, ಸ್ತ್ರೀಪುರುಷರಿಬ್ಬರನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳು. ಇನ್ನೊಂದು, ಕೇವಲ ಮಹಿಳೆಯರಿಗಾಗಿ ಮಹಿಳಾ ವಿಷಯಗಳನ್ನಿಟ್ಟುಕೊಂಡು ಕೆಲಸ ಮಾಡುವ ಸಂಸ್ಥೆಗಳು. ಮೊದಲನೆಯದರಲ್ಲಿ ಜನರ ಹಾಗು ಸಾಮಾನ್ಯ ವಿಷಯಗಳೊಂದಿಗೆ ಮಹಿಳೆಯರು ಮಹಿಳಾ ವಿಷಯಗಳು ಒಂದು ಭಾಗವಾಗಿರುತ್ತವೆ. ಎರಡನೆಯದರಲ್ಲಿ ಮಹಿಳೆಯರು ಟಾರ್ಗೆಟಾಗಿದ್ದು ಮಹಿಳಾ ವಿಷಯಗಳಿಗೆ ಕೇಂದ್ರೀಕೃತವಾಗಿರುತ್ತವೆ. ಎರಡೂ ಪ್ರಕಾರಗಳು ಮಹಿಳಾಭಿವೃದ್ಧಿ ಮತ್ತು ಮಹಿಳಾ ಸಶಕ್ತೀಕರಣದಲ್ಲಿ ಪ್ರಮುಖ ಪಾತ್ರವಹಿಸಿವೆ.

ಎಪ್ಪತ್ತರ ದಶಕದ ಮತ್ತೊಂದು ಬೆಳವಣಿಗೆಯೆಂದರೆ ಸ್ವಾಯತ್ತ ಮಹಿಳಾ ಸಂಘಟನೆಗಳ ಉಗಮ. ಇವು ಮಹಿಳೆಯರ ಮೇಲಿನ ದೌರ್ಜನ್ಯ, ಅನ್ಯಾಯದ ವಿರುದ್ಧದ ಹೋರಾಟ ಹಾಗು ಮಹಿಳಾ ಹಕ್ಕುಗಳ ರಕ್ಷಣೆಗಾಗಿ ಚಳವಳಿ ಮಾಡಿದವು. ಇವುಗಳ ಉಗ್ರ ಹೋರಾಟದ ಫಲವಾಗಿ ಅನೇಕ ಕಾಯಿದೆಗಳಿಗೆ ತಿದ್ದುಪಡಿಗಳು ಹಾಗು ಹೊಸ ಕಾಯಿದೆಗಳು ಜಾರಿಗೆ ಬಂದವು, ಮಹಿಳಾ ವಿಷಯಗಳಿಗೆ

ದನಿಕೊಡಿಸುವಲ್ಲಿ ಈ ಸಂಘಟನೆಗಳು ಯಶಸ್ವಿಯಾದವು. ಮಹಿಳಾ ಚಳವಳಿಯನ್ನು ಸಾಮಾಜಿಕ ಚಳವಳಿಗಳ ಮುಖ್ಯವಾಹಿನಿಗೆ ತಂದವು. ಅತ್ಯಾಚಾರ, ವರದಕ್ಷಿಣೆ, ಗರ್ಭಪಾತದ ಹಕ್ಕು, ಬಾಲ್ಯ ವಿವಾಹ, ಕೌಟುಂಬಿಕ ಹಿಂಸೆ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ, ಆಸ್ತಿ ಹಕ್ಕು, ಕೋಮುವಾದದ ಹಿಂಸೆ, ಸೈನಿಕರಿಂದಾಗುವ ದೌರ್ಜನ್ಯ ಮುಂತಾದ ವಿಷಯಗಳನ್ನು ಇಟ್ಟುಕೊಂಡು ಹೋರಾಟ ಮಾಡಿದವು. ದೌರ್ಜನ್ಯಮುಕ್ತ ಮತ್ತು ಸಮಾನತೆಯಿಂದ ಕೂಡಿದ ಸಮಾಜವನ್ನು ಕಟ್ಟುವ ಗುರಿಯನ್ನು ಹೊಂದಿರುವ ಈ ಸಂಘಟನೆಗಳು ಹಿಂಸೆಗೆ ಒಳಗಾದ , ಸಂಕಷ್ಟಕ್ಕೀಡಾದ ಮಹಿಳೆಯರಿಗೆ ನೈತಿಕ, ಆರ್ಥಿಕ, ಕಾನೂನಾತ್ಮಕ ಹೋರಾಟದ ಬೆಂಬಲ ಸೂಚಿಸಿದವು. ಇತ್ತೀಚಿನ ದಿನಗಳಲ್ಲಿ ಹಿಂಸೆಯ ಪ್ರಕರಣಗಳು ಬೆಳಕಿಗೆ ಬರುತ್ತಿರುವುದರ ಹಿಂದೆ ಈ ಮಹಿಳಾ ಸಂಘಟನೆಗಳ ಪಾತ್ರವಿದೆ. ಮಹಿಳಾ ವಿಷಯಗಳು ಖಾಸಗಿಯಾದುವಲ್ಲ, ಅವುಗಳಿಗೆ ಸಾಮಾಜಿಕ ಆಯಾಮವಿದೆ ಅನ್ನುವುದನ್ನು ತೋರಿಸಿಕೊಟ್ಟು 'ವೈಯಕ್ತಿಕವಾದುದು ರಾಜಕೀಯವಾದುದು' ಎಂಬ ತತ್ವವನ್ನು ಬಯಲಿಗೆಳೆದವು.

ಸಾಮಾಜಿಕ ಅಭಿವೃದ್ಧಿಯನ್ನು ಗುರಿಯನ್ನಾಗಿಟ್ಟುಕೊಂಡ ಸರ್ಕಾರೇತರ ಸಂಸ್ಥೆಗಳು ವೈವಿಧ್ಯಮಯ ವಿಷಯ ಹಾಗು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಡತನ ನಿರ್ಮೂಲನೆ, ಸಾಕ್ಷರತೆ, ಶಿಕ್ಷಣ, ಆರೋಗ್ಯ, ಪರಿಸರ, ಕುಟುಂಬ ಯೋಜನೆ, ಕೌಶಲ್ಯ ಅಭಿವೃದ್ಧಿ, ಕಾನೂನು, ದೌರ್ಜನ್ಯ, ಕೃಷಿ, ಆದಾಯೋತ್ಪನ್ನ ಚಟುವಟಿಕೆ, ಕರಕುಶಲ ವಸ್ತುಗಳ ತಯಾರಿಕೆ ಮೊದಲಾದ ವಿಷಯಗಳಲ್ಲಿ ಇವು ಕೆಲಸ ಮಾಡುತ್ತಿವೆ. ಹೆಚ್ಚಾಗಿ ನಗರದ ಕೊಳಚೆ ಪ್ರದೇಶ, ಗ್ರಾಮೀಣ ಪ್ರದೇಶದ ಹಿಂದುಳಿದ ಜಾತಿ ಮತ್ತು ಕೆಳವರ್ಗದ ಮಹಿಳೆಯರನ್ನು ಗುರಿಯಾಗಿಟ್ಟುಕೊಂಡಿರುವ ಈ ಸಂಸ್ಥೆಗಳು ಅವರ ವೈಯಕ್ತಿಕ ಮತ್ತು ಸಾಮುದಾಯಿಕ ಸಶಕ್ತೀಕರಣಕ್ಕೆ ಬೇಕಾದ ಪರಿಸರವನ್ನು ಸೃಷ್ಟಿಸಿ ಹಕ್ಕುಗಳಿಗಾಗಿ, ಅನ್ಯಾಯ ಮತ್ತು ಶೋಷಣೆ ವಿರುದ್ದ ಸಂಘಟಿತರಾಗುವಂತೆ ಮಾಡುತ್ತಿವೆ. ಮಹಿಳೆಯರ ಆವಶ್ಯಕತೆ, ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುತ್ತಾ ಸರ್ಕಾರದ ಯೋಜನೆ ಕಾರ್ಯಕ್ರಮಗಳನ್ನು ಮಹಿಳೆಯರಿಗೆ ತಲುಪಿಸುವ ಕೆಟಲಿಸ್ಟ್‌ಗಳಾಗಿ ಕಾರ್ಯನಿರ್ವಹಿಸುತ್ತಿವೆ. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ತತ್ವವನ್ನಿಟ್ಟುಕೊಂಡು ಮಹಿಳೆಯರನ್ನು ಸ್ವಸಹಾಯ ಗುಂಪಿನಲ್ಲಿ ಸಂಘಟಿಸಿದ ಕೀರ್ತಿ ಸರ್ಕಾರೇತರ ಸಂಸ್ಥೆಗಳಿಗೆ ಸಲ್ಲುತ್ತದೆ. ಉಳಿತಾಯ ಪ್ರವೃತ್ತಿ, ಕೌಶಲ್ಯದ ಬೆಳವಣಿಗೆ, ಆದಾಯಗಳಿಕೆ, ಸ್ವಾವಲಂಬನೆ ಶಿಕ್ಷಣ ಆರೋಗ್ಯ, ಕಾನೂನು ಅರಿವು, ನಿರ್ಧಾರ ಕೈಗೊಳ್ಳುವಿಕೆ, ಮೌಢ್ಯ ಕಂದಾಚಾರಗಳಿಂದ ಮುಕ್ತಿ, ಹೊರ ಜಗತ್ತಿನೊಂದಿಗೆ ಸಂಪರ್ಕ ಸಂವಹನ ಕಲೆ, ಲೆಕ್ಕಪತ್ರಗಳ ನಿರ್ವಹಣೆ ಮುಂತಾದವುಗಳನ್ನು ಕಲಿಸಿ

ಅವರನ್ನು ಸಶಕ್ತಗೊಳಿಸುವತ್ತ ಕರೆದೊಯ್ಯುತ್ತಿವೆ. ಅವುಗಳಲ್ಲೂ ಕೆಲವು ಲೋಪದೋಷಗಳಿದ್ದರೂ ಮಹಿಳೆಯರನ್ನು ಸಂಘಟಿಸಿ ಅವರ ಜೀವನದಲ್ಲಿ ಸಕಾರಾತ್ಮಕ ಸುಧಾರಣೆ ತಂದಿರುವುದಲ್ಲಿ ಸರ್ಕಾರೇತರ ಸಂಘಸಂಸ್ಥೆಗಳ ಪಾತ್ರವನ್ನು ಗುರುತಿಸಲೇಬೇಕು. ಈ ಸಂಸ್ಥೆಗಳಿಲ್ಲದೆ ಕೇವಲ ಸರ್ಕಾರದ ಮಧ್ಯಪ್ರವೇಶದ ಯೋಜನೆ, ಅನುದಾನ, ಕಾರ್ಯಕ್ರಮಗಳನ್ನಷ್ಟೇ ನಂಬಿಕೊಂಡಿದಿದ್ದರೆ ಈಗ ಆಗಿರುವಷ್ಟು ಸುಧಾರಣೆ ಕಾಣಲಿಕ್ಕಾಗುತ್ತಿರಲಿಲ್ಲವೇನೊ ಅಥವಾ ಮಹಿಳಾ ಸಶಕ್ತೀಕರಣಕ್ಕಂತೂ ಖಂಡಿತ ಹಿನ್ನಡೆಯುಂಟಾಗುತ್ತಿತ್ತು.

## ರಾಜ್ಯ ಮಟ್ಟ–ತಳಮಟ್ಟದ ಕಾರ್ಯತಂತ್ರಗಳು ಮತ್ತು ಮಹಿಳಾ ಸಶಕ್ತೀಕರಣ

ಕರ್ನಾಟಕದಲ್ಲಿ ಮಹಿಳಾ ಸಶಕ್ತೀಕರಣಕ್ಕೆ ಪೂರಕವಾದ ಪರಿಸ್ಥಿತಿ, ಕಾರ್ಯನೀತಿ, ಕಾರ್ಯಕ್ರಮಗಳು ರೂಪುಗೊಂಡಿದ್ದರೂ ಕೆಲವು ಮಹಿಳಾ ವಿರೋಧಿ ಘಟನೆ, ಸಂದರ್ಭಗಳು ಸೃಷ್ಟಿಯಾಗುತ್ತಿರುವುದು ಆತಂಕದ ವಿಚಾರ. ಮೊದಲಿಗೆ ಪೂರಕ ಪ್ರಯತ್ನಗಳನ್ನು ಗಮನಿಸೋಣ. ಉತ್ತರ ಭಾರತದ ಮಹಿಳೆಯರಿಗೆ ಹೋಲಿಸದರೆ ದಕ್ಷಿಣ ಭಾರತದ ಮಹಿಳೆಯರ ಸ್ಥಾನ ಉತ್ತಮವಾಗಿದೆ. ದಕ್ಷಿಣ ಭಾರತದ ರಾಜ್ಯವಾದ ಕರ್ನಾಟಕದಲ್ಲಿ ಮಹಿಳೆಯರ ಸ್ಥಾನ ಅತ್ಯುತ್ತಮವಾಗಿಲ್ಲದಿದ್ದರೂ ಸಮಾಧಾನಕರವಾಗಿದೆ. ಇದಕ್ಕೆ ಐತಿಹಾಸಿಕ ಹಿನ್ನೆಲೆಯ ಜೊತೆಗೆ ಸರ್ಕಾರದ ಮಧ್ಯಪ್ರವೇಶದ ಕಾರಣವಾಗಿರಬಹುದು. ಕರ್ನಾಟಕದ ಪ್ರಾದೇಶಿಕ ಚಿತ್ರಣವನ್ನು ತೆಗೆದುಕೊಂಡರೆ ಉತ್ತರ ಕರ್ನಾಟಕದ ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳು ಅನುಷ್ಠಾನಗೊಂಡಿವೆ. ರಾಜ್ಯ ಸರಕಾರವು ಕೇಂದ್ರ ಸರ್ಕಾರದ ಮಹಿಳಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದೆ, ಜೊತೆಗೆ ತನ್ನದೇ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಶೈಕ್ಷಣಿಕ, ಔದ್ಯೋಗಿಕ, ಆರ್ಥಿಕನೆರವು ನೀಡುವ ಯೋಜನೆಗಳನ್ನು ಜಾರಿಗೆ ತಂದಿದೆ. ಉದಾ: ಹುಡುಗಿಯರಿಗೆ ವಸತಿ ನಿಲಯ, ಗ್ರಾಮೀಣ ಹೆಣ್ಣುಮಕ್ಕಳಿಗೆ ಹಾಜರಾತಿ ವಿದ್ಯಾರ್ಥಿವೇತನ, ಉದ್ಯೋಗಸ್ಥ ಮಹಿಳೆಯರಿಗೆ ಶಿಶುಕೇಂದ್ರ ಮತ್ತು ವಸತಿ ನಿಲಯ, ಹೆಣ್ಣು ಮಗುವಿನ ಜನನವನ್ನು ಸ್ವಾಗತಿಸಲು, ಪ್ರೋತ್ಸಾಹಿಸಲು "ಭಾಗ್ಯಲಕ್ಷ್ಮಿ ಯೋಜನೆ" (ಹೆಣ್ಣು ಮಗು ಹುಟ್ಟಿದರೆ ಅದರ ಹೆಸರಲ್ಲಿ ಒಂದು ಲಕ್ಷದ ಬಾಂಡ್ ನೀಡಲಾಗುವುದು), ಹೆಣ್ಣು ಮಗು ದಿನವನ್ನು ಆಚರಿಸುವುದು, ಬಾಲ್ಯ ವಿವಾಹ ನಿಷೇಧ ಕಾಯಿದೆ ಜಾರಿಗೊಳಿಸುವುದು, ಮಹಿಳೆಯರು ಮತ್ತು ಮಕ್ಕಳ ಮಾರಾಟ ತಡೆಯುವ ಯೋಜನೆ, ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ, ಹೆಣ್ಣು ಮಕ್ಕಳನ್ನು ಶಾಲೆಗೆ ಕರೆತರುವ 'ಬಾನಗಲದತ್ತ

ಬಾಲೆ' ಯೋಜನೆ, ಗ್ರಾಮೀಣ ಮಹಿಳೆಯರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಅವರನ್ನು ಸ್ವಸಹಾಯ ಗುಂಪುಗಳ ಮೂಲಕ ಸಂಘಟಿಸುವ 'ಸ್ತ್ರೀ ಶಕ್ತಿ ಯೋಜನೆ', ಮುಂತಾದವುಗಳು ಮಹಿಳೆಯರ ಸಬಲೀಕರಣದೆಡೆಗೆ ನಡೆಯಲು ಸಹಕಾರಿಯಾಗಿವೆ. ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ಮಹಿಳಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ. ಮಹಿಳೆಯರ ಹಕ್ಕುಗಳ ರಕ್ಷಣೆಗೆ, ಅನ್ಯಾಯ, ತುಳಿತಕ್ಕೊಳಗಾಗಿದ್ದರೆ ಕಾನೂನು ರಕ್ಷಣೆ ಹಾಗು ಪರಿಹಾರ ಒದಗಿಸಲು 'ರಾಜ್ಯ ಮಹಿಳಾ ಆಯೋಗದ' ಸ್ಥಾಪನೆಯು ಮಹಿಳಾ ಸಶಕ್ತೀಕರಣದ ಪ್ರಕ್ರಿಯೆಗೆ ಪೂರಕವಾಗಿದೆ.

ಅನೈತಿಕ ಮಾರಾಟ, ವೇಶ್ಯಾವಾಟಿಕೆಗೆ ಬಲಿಯಾದ ಹೆಣ್ಣು ಮಕ್ಕಳ ರಕ್ಷಣೆ ಹಾಗು ಪುನರ್ವಸತೀಕರಣಕ್ಕೆ 'ಉಜ್ವಲ' ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆ. ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಜಿಲ್ಲಾಮಟ್ಟದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇತ್ತೀಚೆಗೆ ರಾಜ್ಯ ಸರ್ಕಾರವು ತಯಾರಿಸಿದ 'ಜಿಲ್ಲಾ ಮಾನವ ಅಭಿವೃದ್ಧಿ' ವರದಿಗಳಲ್ಲಿ ಜಂಡರ್ ಅಸಮಾನತೆ ಸೂಚ್ಯಂಕಗಳನ್ನು ಲೆಕ್ಕಹಾಕಿ ಜಿಲ್ಲಾ, ತಾಲೂಕು ಮತ್ತು ಗ್ರಾಮ ಮಟ್ಟದಲ್ಲಿರುವ ಜಂಡರ್ ಅಸಮಾನತೆಯನ್ನು ಗುರುತಿಸಿ ಅದನ್ನು ಹೋಗಲಾಡಿಸಲು ಶಿಫಾರಸ್ಸುಗಳನ್ನು ಮಾಡಲಾಗಿದೆ. ಇದನ್ನು ಆಧರಿಸಿ ರಾಜ್ಯ ಸರ್ಕಾರವು ಮಹಿಳಾ ಸಶಕ್ತೀಕರಣದ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಬಹುದೆಂದು ಆಶಿಸೋಣ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲೂ ಮೊದಲು ಶೇ.೩೩ ನಂತರ ಶೇ.೫೦ ಮೀಸಲಾತಿ ನೀಡುವುದರ ಮೂಲಕ ಕರ್ನಾಟಕ ರಾಜ್ಯ ಮಹಿಳೆಯರ ರಾಜಕೀಯ ಸಶಕ್ತೀಕರಣದಲ್ಲಿ ಮುಂಚೂಣಿಯಲ್ಲಿದೆ. (ಇದರ ಗುಣಾತ್ಮಕ ಪರಿಣಾಮ ಬೇರೆ ವಿಷಯ).

ಇಷ್ಟೆಲ್ಲ ಪೂರಕ ಮಧ್ಯಪ್ರವೇಶವಿದ್ದರು ನಮ್ಮ ಮಹಿಳೆಯರ ಸಶಕ್ತೀಕರಣಕ್ಕೆ ಹಿನ್ನಡೆಯನ್ನುಂಟುಮಾಡುವಂತಹ ದೌರ್ಜನ್ಯದ ಪ್ರಕರಣಗಳು ಅದರಲ್ಲೂ ಅತ್ಯಾಚಾರಗಳು ಹೆಚ್ಚುತ್ತಿರುವುದು ಗಂಭೀರ ಸಂಗತಿಯಾಗಿದೆ. ಬೆಂಗಳೂರು ನಗರದಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ಸುರಕ್ಷತೆಯಿಲ್ಲದಿರುವುದು ಅವರ ಆರ್ಥಿಕ ಸ್ವಾವಲಂಬನೆಗೆ ಧಕ್ಕೆ ಉಂಟುಮಾಡುತ್ತಿದೆ.

ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಲು ಮಹಿಳೆಯರ ಪರಿಸ್ಥಿತಿಯನ್ನು ಉತ್ತಮಪಡಿಸುವುದು ಒಂದು ಕಾರ್ಯತಂತ್ರವೆಂದು ಪರಿಗಣಿಸಲಾಗಿದೆ. ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸುವುದರ

ಮೂಲಕ ಅವರನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಇದರಿಂದ ಸಾವಿರಾರು ಹೆಣ್ಣುಮಕ್ಕಳು ಸ್ನಾತಕೋತ್ತರ, ಎಂ.ಫಿಲ್, ಪಿಹೆಚ್.ಡಿ ಪದವಿಗಳನ್ನು ಪಡೆದು ವೃತ್ತಿ ಜೀವನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಾಧ್ಯವಾಗುತ್ತಿದೆ.

ಹೀಗೆ ಕರ್ನಾಟಕದಲ್ಲಿ ಮಹಿಳಾ ಸಶಕ್ತೀಕರಣದ ಪ್ರಕ್ರಿಯೆ ನಡೆದುಕೊಂಡು ಹೋಗುತ್ತಿದ್ದರೂ, ಸವೆಸಬೇಕಾದ ಹಾದಿ ಇನ್ನೂ ದೀರ್ಘವಾಗಿದೆ. ಸರ್ಕಾರದ ಮಧ್ಯಪ್ರವೇಶ, ಮಹಿಳಾ ಸಂಘಟನೆಗಳ ಹೋರಾಟ ಹಾಗು ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಮಹಿಳಾ ಸಶಕ್ತೀಕರಣದ ಪ್ರಕ್ರಿಯೆ ವೇಗವಾಗಿ ಪರಿಣಾಮಕಾರಿಯಾಗಿ ಪರಿಣಮಿಸಲಿ ಎಂಬುದು ಎಲ್ಲರ ಆಶಯ.

## ತಳಮಟ್ಟದಲ್ಲಿ ಮಹಿಳಾ ಸಶಕ್ತೀಕರಣ ಪ್ರಕ್ರಿಯೆ

ನಮಗೆಲ್ಲ ತಿಳಿದಿರುವಂತೆ ಮಹಿಳೆಯರು ಏಕರೂಪ ಗುಂಪಿಗೆ ಸೇರಿದವರಲ್ಲ. ವಿವಿಧ ವರ್ಗ, ಜಾತಿ, ಧರ್ಮ, ಪ್ರದೇಶ ಮತ್ತು ಜನಾಂಗಗಳಲ್ಲಿ ಹರಡಿಕೊಂಡಿರುವ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ವೈವಿಧ್ಯತೆಯನ್ನು ಹೊಂದಿದ್ದಾರೆ. ಇದರಿಂದ ಅವರ ಸಶಕ್ತೀಕರಣ ಪ್ರಕ್ರಿಯೆಯು ಸಹಜವಾಗಿ ಭಿನ್ನವಾಗಿರುತ್ತದೆ. ಅನುಸರಿಸುವ ಕಾರ್ಯತಂತ್ರ ವಿಧಾನಗಳು ಬೇರೆಯಾಗಿರುತ್ತವೆ. ಉದಾಹರಣೆಗೆ ಮುಂದುವರಿದ ರಾಷ್ಟ್ರದ ಮತ್ತು ಮೇಲು ವರ್ಗದ ಮಹಿಳೆಯರ ಸಶಕ್ತೀಕರಣ ಪ್ರಕ್ರಿಯೆಯು ಅಭಿವೃದ್ಧಿಶೀಲ ರಾಷ್ಟ್ರಗಳ ಮತ್ತು ಮಧ್ಯಮ ಕೆಳವರ್ಗದ ಮಹಿಳೆಯರ ಸಶಕ್ತೀಕರಣ ಪ್ರಕ್ರಿಯೆಗಿಂತ ವಿಭಿನ್ನವಾಗಿರುತ್ತದೆ. ಮೊದಲ ಗುಂಪಿಗೆ ಸ್ಟ್ರಾಟಜಿಕ್ ಜಂಡರ್ ನೀಡ್ಸ್‌ಗಳನ್ನು ಪೂರೈಸಿದರೆ ಎರಡನೆ ಗುಂಪಿನವರಿಗೆ ಪ್ರಾಕ್ಟಿಕಲ್ ಜಂಡರ್ ನೀಡ್ಸ್‌ಗಳನ್ನು ಪೂರೈಸಬೇಕಾಗುತ್ತದೆ. ಅದೇ ರೀತಿ ನಗರ ಮತ್ತು ಗ್ರಾಮೀಣ ಮಹಿಳೆಯರ ಪರಿಸ್ಥಿತಿ ಆವಶ್ಯಕತೆ ಸಮಸ್ಯೆಗಳು ಭಿನ್ನವಾಗಿರುವಾಗ ಸಶಕ್ತೀಕರಣದ ವಿಧಾನಗಳು ಬೇರೆಯಾಗಬೇಕಾಗುತ್ತದೆ.

೧೯೭೦ರ ದಶಕದಲ್ಲಿ ಮೂರನೆ ಜಗತ್ತಿನ ಮಹಿಳಾ ಲೋಕದಲ್ಲಿ ತೀವ್ರವಾದ ಬದಲಾವಣೆ ತರುವಂತಹ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲಾಯಿತು. ಅದೇ ತಳಮಟ್ಟದ ಮಹಿಳೆಯರನ್ನು ಸಂಚಲನಗೊಳಿಸಿ ಸಂಘಟಿಸಿದ್ದು. ಗ್ರಾಮೀಣ ಮಹಿಳೆಯರು ಮತ್ತು ನಗರದ ಕೆಳವರ್ಗದ ಮತ್ತು ಕೊಳಚೆಪ್ರದೇಶದ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಸಂಘಟನೆಗೊಂಡರು. ಮಹಿಳಾ ಚಳವಳಿಯ ಗುಂಪು ಮತ್ತು ಸರ್ಕಾರೇತರ ಸಂಸ್ಥೆಗಳು ಈ ಮಹಿಳೆಯರನ್ನು ಸಂಘಟಿಸುವಲ್ಲಿ ಪ್ರಮುಖ

ಪಾತ್ರವಹಿಸಿವೆ. ಒಂದು ಕಡೆ, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡುತ್ತಿದ್ದ ಮಹಿಳಾ ಚಳವಳಿಯು ನಗರದ ಮಧ್ಯಮ ವರ್ಗದ ಮಹಿಳೆಯರನ್ನು ಸಂಚಲನಗೊಳಿಸಿದರೆ ಮತ್ತೊಂದೆಡೆ ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಮತ್ತು ಕೊಳಚೆಪ್ರದೇಶಗಳನ್ನು ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಜನರನ್ನು ಸಂಘಟಿಸಿದವು. ಮಹಿಳಾ ಗುಂಪನ್ನು ಟಾರ್ಗೆಟ್ ಆಗಿ ಇಟ್ಟುಕೊಂಡು ಅವರನ್ನು ಸಂಘಟಿಸುತ್ತಾ ಸಾಮಾಜಿಕವಾಗಿ ಆರ್ಥಿಕವಾಗಿ ಸಶಕ್ತಗೊಳಿಸುವುದಕ್ಕೆ ಪ್ರತ್ಯೇಕ ಕಾರ್ಯಕ್ರಮಗಳನ್ನು ಅವು ಹಮ್ಮಿಕೊಂಡವು. ಬಡತನ ನೀಗಿಸುವ ಯೋಜನೆ ಜೊತೆಗೆ ಮಹಿಳೆಯರನ್ನು ಸ್ವಸಹಾಯ ಗುಂಪುಗಳಲ್ಲಿ ಸಂಘಟಿಸಿ ಉಳಿತಾಯ ಮಾಡುವ ಪ್ರವೃತ್ತಿಯನ್ನು ಬೆಳೆಸುವುದು, ಕೌಶಲ್ಯ ತರಬೇತಿ ನೀಡುವುದು, ಸರ್ಕಾರ ಬ್ಯಾಂಕುಗಳಿಂದ ಹಣಕಾಸಿನ ಸಹಾಯ ದೊರಕುವಂತೆ ಮಾಡಿ ಆದಾಯೋತ್ಪನ್ನ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿಸಿದವು. ಸಾಕ್ಷರತೆ, ಕಾನೂನು, ಆರೋಗ್ಯದ ಕುರಿತು ಅರಿವು ಮೂಡಿಸುವ ಪ್ರಯತ್ನ ಮಾಡಿದವು. ೧೯೮೦ರ ದಶಕದಲ್ಲಿಯೇ ಮೈರಾಡ ಎಂಬ ಸರ್ಕಾರೇತರ ಸಂಸ್ಥೆಯು ಕರ್ನಾಟಕದ ಚಾಮರಾಜನಗರ ಮತ್ತು ಎಚ್.ಡಿ.ಕೋಟೆ ಜಿಲ್ಲೆಗಳಲ್ಲಿ ಗ್ರಾಮೀಣ ಮತ್ತು ಬುಡಕಟ್ಟು ಮಹಿಳೆಯರನ್ನು ಸ್ವಸಹಾಯ ಗುಂಪುಗಳಲ್ಲಿ ಸಂಘಟಿಸಿದ ಮೊಟ್ಟ ಮೊದಲ ಸಂಸ್ಥೆ.

ಮಹಿಳಾ ಚಳವಳಿಯು ಮಹಿಳೆಯರಿಗೆ ಅನ್ಯಾಯವಾದಾಗ, ದೌರ್ಜನ್ಯ ನಡೆದಾಗ ಅದನ್ನು ಪ್ರತಿಭಟಿಸಿ ರ್‍ಯಾಲಿ, ಧರಣಿ, ಮನವಿ ಸಲ್ಲಿಕೆ, ಸಹಿ ಸಂಗ್ರಹ ನಡೆಸುತ್ತಾ, ಸಂಕಷ್ಟಕ್ಕೀಡಾದ ಮಹಿಳೆಯರಿಗೆ ಆಶ್ರಯ, ಪೊಲೀಸ್, ವಕೀಲರ ನೆರವನ್ನು ಒದಗಿಸಿಕೊಟ್ಟು ಆಪ್ತಸಮಾಲೋಚನೆ ನಡೆಸಿ ಗಂಡಾಂತರದಿಂದ ಪಾರಾಗುವಂತೆ ಮಾಡಿದವು. ಕೆಲವು ಸಂಸ್ಥೆಗಳು ತಳಮಟ್ಟದ ಮಹಿಳೆಯರು ರಾಜಕೀಯ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಿದವು.

೧೯೯೦ ದಶಕದಲ್ಲಿ ಕೇಂದ್ರ ಸರ್ಕಾರ ಪ್ರಾರಂಭಿಸಿದ 'ಮಹಿಳಾ ಸಂಖ್ಯಾ' ಯೋಜನೆಯು ಗ್ರಾಮೀಣ ಮಹಿಳೆಯರನ್ನು ಜಾಗೃತಗೊಳಿಸಿ ಸಾಮಾಜಿಕವಾಗಿ, ಆರ್ಥಿಕವಾಗಿ ಸಶಕ್ತಗೊಳ್ಳುವಂತೆ ಮಾಡುವಲ್ಲಿ ಅತ್ಯಂತ ಯಶಸ್ವಿ ಯೋಜನೆಯಾಗಿದೆ. ಅದು ಅನೌಪಚಾರಿಕ ಶಿಕ್ಷಣ, ಆರೋಗ್ಯ, ಕಾನೂನು, ಆಡಳಿತ, ಆರ್ಥಿಕ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ಮಹಿಳೆಯರನ್ನು ಸಂಘಟಿಸಿ ಸಬಲರಾಗುವಂತೆ ಮಾಡಿತು.

ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಗುಂಪುಗಳಲ್ಲಿ ಒಗ್ಗೂಡಿರುವ ಮಹಿಳೆಯರು ಅಲ್ಲಿಯ ಅನೇಕ ಚಟುವಟಿಕೆ ಹಾಗು ನಿರ್ಧಾರ ಕೈಗೊಳ್ಳುವಿಕೆ

ಮೇಲೆ ಪ್ರಭಾವ ಬೀರುವಷ್ಟು ಸಶಕ್ತಗೊಂಡಿದ್ದಾರೆ. ಕೆಲವು ನಕರಾತ್ಮಕ ಬೆಳವಣಿಗೆಗಳಾಗಿದ್ದರೂ ಆರ್ಥಿಕವಾಗಿ, ರಾಜಕೀಯವಾಗಿ ಸರ್ಕಾರ ಮತ್ತು ಸ್ಥಳೀಯ ಮಟ್ಟದಲ್ಲಿ ಪ್ರಭಾವಿ ಗುಂಪಾಗಿ ಹೊರಹೊಮ್ಮುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ.

ಹಿಂದೆಲ್ಲ ಮಹಿಳೆಯರ ಮೇಲೆ ಹಿಂಸೆ ನಡೆದರೆ ಅದು ಖಾಸಗಿ ವಿಷಯ, ಕುಟುಂಬದ ಮರ್ಯಾದೆ ಹಾಳಾಗುತ್ತದೆ, ಮಹಿಳೆಯ ಮುಂದಿನ ಜೀವನ ಕಷ್ಟವಾಗುತ್ತದೆ ಎಂದೆಲ್ಲ ಯೋಚಿಸಿ ಅದನ್ನು ಆದಷ್ಟು ಮುಚ್ಚಿಡಲು ಪ್ರಯತ್ನಿಸಲಾಗುತ್ತಿತ್ತು. ಆದರೆ ಹಿಂಸೆಯ ಪ್ರಕರಣಗಳು ಹೆಚ್ಚಾಗಿ ಲಕ್ಷಾಂತರ ಮಹಿಳೆಯರ ಜೀವಗಳು ಬಲಿಯಾದಾಗ ಖಾಸಗಿ ಸಮಸ್ಯೆಗಳು ಸಾರ್ವಜನಿಕ ಸಮಸ್ಯೆಯ ಸ್ವರೂಪ ಪಡೆದು ಅವುಗಳ ವಿರುದ್ಧ ಹೋರಾಟ ಪ್ರಾರಂಭವಾದವು. ೧೯೭೦ರ ದಶಕದಲ್ಲಿ ಸ್ಥಳೀಯ ಮತ್ತು ತಳಮಟ್ಟದಲ್ಲಿ ಹುಟ್ಟಿಕೊಂಡ ಸ್ವಾಯತ್ತ ಮಹಿಳಾ ಚಳವಳಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಪ್ರಮುಖ ವಿಷಯವನ್ನಾಗಿ ಕೈಗೆತ್ತಿಕೊಂಡಿತು. ಸರ್ಕಾರ ಕೂಡ ಈ ಹೋರಾಟಕ್ಕೆ ಸ್ಪಂದಿಸಿ ಹೊಸ ಕಾಯಿದೆ ಮತ್ತು ಇದ್ದ ಕಾಯಿದೆಯ ತಿದ್ದುಪಡಿಗೆ ಮುಂದಾಯಿತು.

ಸಮೂಹ ಮಾಧ್ಯಮಗಳು ಇಂದು ಮಹಿಳಾ ವಿಷಯಗಳಿಗೆ ಅದರಲ್ಲಿಯೂ ದೌರ್ಜನ್ಯಕ್ಕೆ ಸಂಬಂಧಪಟ್ಟಂತೆ ವ್ಯಾಪಕ ಪ್ರಚಾರ ನೀಡುತ್ತಿವೆ. ಹೀಗಾಗಿ ಮಹಿಳಾ ವಿಷಯಗಳು ಖಾಸಗಿಯಾಗಿ ಉಳಿಯದೆ ಸಾರ್ವಜನಿಕವಾಗಿಯೇ ಚರ್ಚೆಯಾಗುತ್ತಿವೆ. ಮಹಿಳೆಯರು ತಮ್ಮ ಮೇಲಾಗುವ ಹಿಂಸೆ, ಅನ್ಯಾಯ, ಶೋಷಣೆಗಳನ್ನು ಮುಕ್ತವಾಗಿ ಹೇಳಿಕೊಳ್ಳುತ್ತಿದ್ದಾರೆ. ಅತಿಯಾದ ಪ್ರಚಾರ ಮಹಿಳೆಯರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ, ಅಲ್ಲದೆ ನಮ್ಮ ಸಂಸ್ಕೃತಿ ಪರಂಪರೆಗೆ ಧಕ್ಕೆಯುಂಟಾಗುತ್ತದೆ ಎಂಬ ವಾದವೂ ಇದೆ. ಆದರೂ ಆದರ್ಶ ಮಹಿಳೆಯ ಕಲ್ಪನೆಯನ್ನು ಹೇರಿ ಎಷ್ಟೇ ಕಷ್ಟ ಬಂದರೂ ಸಹಿಸಿಕೊಳ್ಳಬೇಕು ಎಂಬ ನಿರ್ಬಂಧದಿಂದ ಹೊರಬರಲು ಸಾಧ್ಯವಾಗಿದೆ. ಇದಕ್ಕೆ ತಳಮಟ್ಟದ ಮಹಿಳಾ ಸಂಘಟನೆ, ಹೋರಾಟ ಕಾರಣವಾಗಿದೆ.

ಹಿಂಸೆಯಿಂದ ಮುಕ್ತವಾದ ಸಮಾಜವನ್ನು ಕಟ್ಟುವುದು ಮಹಿಳಾ ಸಶಕ್ತೀಕರಣದ ಸಾಧನವೂ ಹೌದು ಪ್ರತಿಫಲವೂ ಹೌದು. ಮಹಿಳಾ ಹಕ್ಕುಗಳ ರಕ್ಷಣೆ, ದೌರ್ಜನ್ಯದಿಂದ ವಿಮೋಚನೆ ಮತ್ತು ಜಂಡರ್ ಸಮಾನತೆಯ ಸಾಧನೆ ಮಹಿಳಾ ಸಶಕ್ತೀಕರಣಕ್ಕೆ ಹಾದಿ ಮಾಡಿಕೊಡುತ್ತದೆ. ಮೊದಲೆ ಚರ್ಚಿಸಿದಂತೆ ಇದು ಬರವಣಿಗೆಯಲ್ಲಿ, ಮಾತಿನಲ್ಲಿ ಹೇಳುವಷ್ಟು ಸರಳ ಸಂಗತಿಯಲ್ಲ, ತುಂಬ ಸಂಕೀರ್ಣವಾಗಿದೆ. ಆಶಾಭಾವದಿಂದ ನಿರಂತರ ಪ್ರಯತ್ನದಿಂದ ಇದನ್ನು ಮುಂದುವರೆಸಿಕೊಂಡು ಹೋಗಬೇಕಿದೆ.

* * * * *

## ಅಧ್ಯಾಯ ೪

# ಮಹಿಳಾ ಸಶಕ್ತೀಕರಣದ ಪರಿಣಾಮ, ಅಡ್ಡಿ ಹಾಗು ಸವಾಲುಗಳು

ತಾತ್ವಿಕ ನೆಲೆ ಹಾಗು ಪ್ರಾಯೋಗಿಕ ನೆಲೆಗಳಲ್ಲಿ ಮಹಿಳಾ ಸಶಕ್ತೀಕರಣವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆವು. ೨೦ ವರ್ಷಗಳ ಬೆಳವಣಿಗೆಯಲ್ಲಿ ಕೊಂಚ ಮಟ್ಟಿಗೆ ಮಹಿಳಾ ಸಶಕ್ತೀಕರಣವು ಸಾಕಾರಗೊಂಡಿರುವುದನ್ನು ಗಮನಿಸಬಹುದು. ಆದರೆ ಇನ್ನೂ ದೀರ್ಘ ಹಾದಿಯಲ್ಲಿ ನಡೆಯಬೇಕಾಗಿದೆ. ಸಾಕಾರಗೊಂಡಿರುವ ಸಶಕ್ತೀಕರಣದ ಪರಿಣಾಮಗಳೇನು ಮತ್ತು ಮುಂದೆ ಸಾಧಿಸಬೇಕಿರುವ ಸಶಕ್ತೀಕರಣಕ್ಕೆ ಇರುವ ಅಡ್ಡಿಗಳು ಯಾವುವು, ಅವುಗಳನ್ನು ಹೋಗಲಾಡಿಸಲು ಅನುಸರಿಸಬೇಕಾದ ಕಾರ್ಯತಂತ್ರಗಳು ಯಾವುವು ಅನ್ನುವುದನ್ನು ಚರ್ಚಿಸುವುದೇ ಈ ಅಧ್ಯಾಯದ ಉದ್ದೇಶ.

೧೯೭೦, ೮೦ರ ದಶಕದರಲ್ಲಿ ಕಲ್ಯಾಣ ಕಾರ್ಯಕ್ರಮ ಹಾಗು ಅಭಿವೃದ್ಧಿ ಕಾರ್ಯಗಳ ಮೂಲಕ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಿದ್ದರಿಂದ ಸ್ವಲ್ಪಮಟ್ಟಿಗೆ ಮಹಿಳೆಯರ ಸಾಕ್ಷರತೆ, ಶಿಕ್ಷಣಮಟ್ಟ, ಆರೋಗ್ಯಮಟ್ಟ, ಆರ್ಥಿಕ ಸ್ಥಿತಿ ಸುಧಾರಿಸಿತು. ಆದರೆ ಒಟ್ಟು ಮಹಿಳಾಭಿವೃದ್ಧಿಯ ಪ್ರಮಾಣ ತೃಪ್ತಿದಾಯಕವಾಗಿರಲಿಲ್ಲ. ೮೦ರ ದಶಕದ ಕೊನೆಭಾಗದಲ್ಲಿ 'ಮಹಿಳಾ ಸಶಕ್ತೀಕರಣ'ದ ಪರಿಕಲ್ಪನೆ ಹುಟ್ಟಿಕೊಂಡ ನಂತರ ಮಹಿಳಾಭಿವೃದ್ಧಿಯನ್ನು ಅರ್ಥೈಸುವ ದೃಷ್ಟಿಕೋನ ಹಾಗು ಅದನ್ನು ಸಾಧಿಸುವ ವಿಧಾನಗಳು ಬದಲಾದವು. 'ಮಹಿಳಾಭಿವೃದ್ಧಿ ಹಾಗು ಮಹಿಳಾ ಸಶಕ್ತೀಕರಣ'ಕ್ಕೆ ಇರುವ ವ್ಯತ್ಯಾಸವೇನು?ಎಂಬ ಪ್ರಶ್ನೆ ಏಳುತ್ತದೆ. ಕುಟುಂಬ, ಸಮಾನತೆ ಹಾಗು ದೇಶದ ಅಭಿವೃದ್ಧಿಯ ಸಲುವಾಗಿ ಮಹಿಳೆಯರ ಸ್ಥಿತಿ, ಸ್ಥಾನವನ್ನು ಉತ್ತಮಪಡಿಸಬೇಕೆಂಬ ಗುರಿಯನ್ನು 'ಮಹಿಳಾಭಿವೃದ್ಧಿ' ಹೊಂದಿದ್ದರೆ, ಮಹಿಳೆಯರಿಗೋಸ್ಕರ ಮಹಿಳೆಯರ ಸ್ಥಿತಿಯನ್ನು ಸುಧಾರಿಸಿದರೆ ತಾನಾಗಿಯೇ ಕುಟುಂಬ, ಸಮಾಜ ಹಾಗು ದೇಶದ ಅಭಿವೃದ್ಧಿಯಾಗುತ್ತದೆ ಎಂಬ ಗುರಿಯನ್ನು 'ಮಹಿಳಾ ಸಶಕ್ತೀಕರಣ' ಹೊಂದಿದೆ. ಮಹಿಳಾಭಿವೃದ್ಧಿಯು ಮಹಿಳೆಯರನ್ನು ಕೇವಲ

ಟಾರ್ಗೆಟ್ ಗುಂಪಾಗಿ ನೋಡಿದರೆ ಮಹಿಳಾ ಸಶಕ್ತೀಕರಣವು ಅವರನ್ನು ಸಹಭಾಗಿಗಳನ್ನಾಗಿ, ಪಾಲುದಾರರನ್ನಾಗಿ ನೋಡುತ್ತದೆ.

ಕುಟುಂಬವಾಗಲಿ, ಸರ್ಕಾರದ ಸಂಸ್ಥೆಗಳಾಗಲಿ 'ಮಹಿಳಾಭಿವೃದ್ಧಿ'ಯನ್ನು ಒಪ್ಪಿಕೊಳ್ಳುತ್ತವೆ. ಆದರೆ 'ಮಹಿಳಾ ಸಶಕ್ತೀಕರಣ'ವನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಸಶಕ್ತೀಕರಣವು ಸಾಮಾಜಿಕ ರಚನೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ಬೇಡುತ್ತದೆ. ಪುರುಷರು ತಮ್ಮ ಸವಲತ್ತು, ಅಧಿಕಾರಗಳನ್ನು ಹಂಚಿಕೊಳ್ಳುವಂತೆ ಮಾಡುತ್ತದೆ. ಇದ್ಯಾವುದನ್ನು ಪುರುಷಪ್ರಧಾನ ಸಮಾಜ ಒಪ್ಪಿಕೊಳ್ಳುವುದಿಲ್ಲ. ಶಿಕ್ಷಣ, ಅರಿವು, ಉದ್ಯೋಗ ಪಡೆದು ಆರ್ಥಿಕವಾಗಿ ಸ್ವತಂತ್ರರಾಗಿರುವ ಮಹಿಳೆಯರು ಪುರುಷಾಧಿಪತ್ಯವನ್ನು ಪ್ರಶ್ನಿಸುತ್ತಾರೆ, ವಿರೋಧಿಸುತ್ತಾರೆ. ಇದನ್ನು ಸಹಿಸದ ಪುರುಷವರ್ಗವು ಮಹಿಳಾ ಸಶಕ್ತೀಕರಣವನ್ನು ವಿರೋಧಿಸುತ್ತದೆ. ಒಂದು ಉದಾಹರಣೆಯ ಮೂಲಕ ನೋಡುವುದಾದರೆ ಶಿಕ್ಷಣದ ಮೂಲಕ ಜಾಗೃತರಾದ ಹೆಣ್ಣುಮಕ್ಕಳು ಮನೆಯಲ್ಲಿ ತಾರತಮ್ಯ ತೋರಿದರೆ ಪ್ರಶ್ನಿಸುತ್ತಾರೆ. ಕೆಲಸದ ಹಂಚಿಕೆ, ಆಸ್ತಿಯಲ್ಲಿ ಸಮಪಾಲು, ಮುಕ್ತಸಂಚಲನೆ, ಉನ್ನತ ಶಿಕ್ಷಣ ಮತ್ತು ಉದ್ಯೋಗದ ಆಯ್ಕೆ, ನಿರ್ಧಾರ ಕೈಗೊಳ್ಳುವ ಹಕ್ಕನ್ನು ಕೇಳುತ್ತಾರೆ, ಪಡೆಯಲು ಪ್ರಯತ್ನಿಸುತ್ತಾರೆ. ಇದರಿಂದ ಸಹಜವಾಗಿ ಕುಟುಂಬದಲ್ಲಿ ಘರ್ಷಣೆ ಉಂಟಾಗುತ್ತದೆ. ಘರ್ಷಣೆ ಆಗಿದ್ದಕ್ಕೆ ಮಹಿಳೆಯರನ್ನು ಕಾರಣವಾಗಿಸಿ, ಅವರನ್ನು ಸಶಕ್ತಗೊಳಿಸಿದರೆ ಕುಟುಂಬ ಒಡೆಯುತ್ತದೆ, ನಮ್ಮ ಸಂಸ್ಕೃತಿ, ಸಂಪ್ರದಾಯಗಳು ಹಾಳಾಗುತ್ತವೆ. ಆದುದರಿಂದ ಅವರನ್ನು ಮನೆಗೆ ಸೀಮಿತಗೊಳಿಸುವುದು ಒಳ್ಳೆಯದೆಂದು ಆ ನಿಟ್ಟಿನಲ್ಲಿ ಕಾರ್ಯತಂತ್ರಗಳು ರೂಪುಗೊಳ್ಳುತ್ತವೆ. ನಗರ ಪ್ರದೇಶಗಳಲ್ಲಿ ವಿಚ್ಛೇದನ ಹೆಚ್ಚಾಗಲು, ವೃದ್ಧಾಶ್ರಮಗಳು ತಲೆ ಎತ್ತಲು, ಪ್ರೀತಿಸಿ ಮದುವೆಯಾಗುವ ಪ್ರಕರಣಗಳು ಹೆಚ್ಚಾಗಲು ಹೆಣ್ಣಮಕ್ಕಳೇ ಕಾರಣ ಎಂದು ಹೇಳಲಾಗುತ್ತಿದೆ. ಇವೆಲ್ಲವು ಮಹಿಳಾ ಸಶಕ್ತೀಕರಣಕ್ಕೆ ಹಿನ್ನಡೆಯನ್ನುಂಟುಮಾಡುತ್ತವೆ.

ಸಶಕ್ತೀಕರಣವು ಹೆಣ್ಣುಮಕ್ಕಳಲ್ಲಿ ಗೊಂದಲವನ್ನು ಉಂಟುಮಾಡುತ್ತದೆ. ಸಶಕ್ತೀಕರಣದ ಫಲವಾಗಿ ಸಮಾನತೆ, ಸಾತಂತ್ರ್ಯ, ಹಕ್ಕುಗಳನ್ನು ಕೇಳಿದರೆ, ಚಲಾಯಿಸಿದರೆ ಕುಟುಂಬದ ಬೆಂಬಲ ಮತ್ತು ಸಂಬಂಧವನ್ನು ಕಳೆದುಕೊಳ್ಳುವ ಪರಿಸ್ಥಿತಿ ಬರಬಹುದು. ಕಳೆದುಕೊಂಡು ಆಚೆ ಬಂದರೆ ಒಂಟಿಯಾಗಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕುಟುಂಬ ಅಥವಾ ವ್ಯಕ್ತಿ ಸ್ವಾತಂತ್ರ್ಯ ಇವುಗಳಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳುವ ಸಂದರ್ಭ ಬಂದಾಗ ಹೆಣ್ಣುಮಕ್ಕಳು ಗೊಂದಲಕ್ಕೀಡಾಗುತ್ತಾರೆ.

ಮಹಿಳಾ ಸಶಕ್ತೀಕರಣವನ್ನು ವಿರೋಧಿಸುವವರು ಅದನ್ನು ಸ್ವೇಚ್ಛಾಚಾರ

ವೆನ್ನುವಂತೆ ಬಿಂಬಿಸುತ್ತಾರೆ. ಶಿಕ್ಷಣ, ಅರಿವು, ಜಾಗೃತಿ ಹೊಂದಿದ ಹೆಣ್ಣುಮಕ್ಕಳು ಸಮಾನತೆ, ಹಕ್ಕು, ಸ್ವಾತಂತ್ರ್ಯಗಳು ಬೇಕು ಎಂದು ಕೇಳಿದರೆ ಅಥವಾ ಹೊಂದಿದರೆ ಅವರು ಹದ್ದುಮೀರುತ್ತಿದ್ದಾರೆ, ಸ್ವಕೇಂದ್ರಿತರಾಗುತ್ತಿದ್ದಾರೆ, ಸ್ವಾರ್ಥಿಗಳಾಗುತ್ತಿದ್ದಾರೆ ಎಂದು ಟೀಕೆ ಮಾಡಲಾಗುತ್ತದೆ. ಮಹಿಳೆಯರನ್ನು ಸಾಂಪ್ರದಾಯಿಕ ಪಾತ್ರದಲ್ಲಷ್ಟೆ ನೋಡುತ್ತಾ ಅವರಿಂದ ವಿಧೇಯತೆ, ಶರಣಾಗತಿ, ಅಧೀನದಲ್ಲಿರುವುದನ್ನು, ನಿಯಂತ್ರಣದಲ್ಲಿರುವುದನ್ನು ಮಾತ್ರ ನೀರೀಕ್ಷಿಸುವ ಪುರುಷಪ್ರಧಾನ ಮನಸ್ಸುಗಳಿಗೆ ಸಮಾನತೆ, ಹಕ್ಕುಗಳನ್ನು ಕೇಳುವುದು ಸ್ವೇಚ್ಛಾಚಾರವೆನಿಸುತ್ತದೆ. ಅದನ್ನು ಸ್ವೇಚ್ಛಾಚಾರವೆಂದು ಬಿಂಬಿಸುತ್ತಾ ಮಹಿಳಾ ಸಶಕ್ತೀಕರಣಕ್ಕೆ ಅಡ್ಡಿಯನ್ನು ಉಂಟುಮಾಡುತ್ತದೆ.

ಪುರುಷರು ಮಹಿಳಾ ಸಶಕ್ತೀಕರಣವನ್ನು ಒಪ್ಪಿಕೊಂಡರೆ ತಮ್ಮ ಕೆಲವು ಸವಲತ್ತು, ಅಧಿಕಾರ, ಸಂಪತ್ತನ್ನು ಬಿಟ್ಟುಕೊಡಬೇಕಾಗುತ್ತದೆ ಎಂದು ಭಾವಿಸುತ್ತಾರೆ. ವಾಸ್ತವದಲ್ಲಿ ಅದನ್ನು ಅವರು ಬಿಟ್ಟುಕೊಡುವುದಲ್ಲ, ಹಂಚಿಕೊಳ್ಳುತ್ತಾರೆ. ಹಿಂದಿನಿಂದ ಮಹಿಳೆಯರು ಅವುಗಳಿಂದ ವಂಚಿತರಾಗಿದ್ದಾರೆ, ಇಂದು ಅದನ್ನು ಕೇಳುತ್ತಿದ್ದಾರಷ್ಟೆ. ಹಂಚಿಕೊಳ್ಳಲು ಇಚ್ಛಿಸದ ಪುರುಷರು ಮಹಿಳೆಯರು ಸಶಕ್ತಗೊಳ್ಳುವುದನ್ನು ವಿರೋಧಿಸುತ್ತಾರೆ.

ಕೆಲವು ಪುರುಷರು ಒಟ್ಟು ಮಹಿಳಾ ಸಶಕ್ತೀಕರಣವನ್ನು ಒಪ್ಪಿಕೊಂಡರೂ ವೈಯಕ್ತಿಕ ಮಟ್ಟಕ್ಕೆ ಬಂದಾಗ ನಿರಾಕರಿಸುತ್ತಾರೆ. ತಮ್ಮದೇ ಕುಟುಂಬದಲ್ಲಿ ಕೆಲಸದ ಹಂಚಿಕೆ, ಆಸ್ತಿಯಲ್ಲಿ ಪಾಲು, ಮುಕ್ತ ಸಂಚಲನೆ, ನಿರ್ಧಾರ ಕೈಗೊಳ್ಳುವ ವಿಷಯಗಳಲ್ಲಿ ತಾಯಿ, ಅಕ್ಕ, ತಂಗಿ, ಹೆಂಡತಿಯೊಂದಿಗೆ ಹಂಚಿಕೊಳ್ಳಲು ಒಪ್ಪುವುದಿಲ್ಲ.

ವ್ಯಕ್ತಿಯ ಮನಸ್ಥಿತಿ, ಕುಟುಂಬ ಅಥವಾ ಸಮಾಜದ ಮನೋಭಾವಕ್ಕೂ ಮಹಿಳಾ ಸಶಕ್ತೀಕರಣಕ್ಕೂ ಸಂಬಂಧವಿದೆ. ಮಹಿಳೆಯರು ಈಗಾಗಲೇ ಸಶಕ್ತರಿದ್ದಾರೆ. ಒಂದು ವೇಳೆ ಅಶಕ್ತರಾಗಿದ್ದರೆ ಸಶಕ್ತಗೊಳಿಸಬಹುದು. ಆದರೆ ಸಶಕ್ತ ಮಹಿಳೆಯರನ್ನು ಒಪ್ಪಿಕೊಳ್ಳುವ ಮನಸ್ಸಿರಬೇಕು. ಮಾನವರ ಮನಸ್ಸು ಅತ್ಯಂತ ಸಂಕೀರ್ಣವಾದುದು. ಅಹಂ, ನಿರೀಕ್ಷೆ, ಮೇಲರಿಮೆ, ಕೀಳರಿಮೆ, ಸ್ವಾರ್ಥ, ನಿಸ್ವಾರ್ಥ, ಪ್ರತಿಷ್ಠೆ, ಆಸೆ, ನಿರಾಸೆ, ಮತ್ಸರ, ದ್ವೇಷ, ಹಠ, ಶಾಂತಿ, ಸಂಕುಚಿತ, ವಿಶಾಲ ಮನೋಭಾವ, ಮುಂತಾದ ಗುಣಗಳುಳ್ಳ ಮಾನವನ ಮನಸ್ಸು ತನಗೊಂದು, ಬೇರೆಯವರಿಗೊಂದು ಎಂಬ ಪ್ರವೃತ್ತಿಯನ್ನು ಹೊಂದಿರುತ್ತದೆ. ಈ ಎಲ್ಲಾ ಗುಣಗಳು ಜೆನಟಿಕ್ಕಾಗಿ ಪರಿಸರದಿಂದ ಸಂದರ್ಭ ಘಟನೆಗಳಿಂದ ಬಂದಿರಬಹುದು. ಒಬ್ಬ ವ್ಯಕ್ತಿಯು ಹೆಣ್ಣಿರಲಿ, ಗಂಡಿರಲಿ ಮನಸ್ಥಿತಿ ಹೇಗಿರುತ್ತದೋ ಅದರಂತೆ ಮಹಿಳಾ ಸಶಕ್ತೀಕರಣ

ಪ್ರಕ್ರಿಯೆಯನ್ನಾಗಲಿ, ಸಶಕ್ತಗೊಂಡ ಮಹಿಳೆಯರನ್ನು ಒಪ್ಪಿಕೊಳ್ಳುವ, ನಿರಾಕರಿಸುವ ಸಾಧ್ಯತೆಯಿರುತ್ತದೆ. ವ್ಯಕ್ತಿಯಲ್ಲಿ ಸ್ತ್ರೀಯರ ಬಗ್ಗೆ ಗೌರವ, ಸಮಾನ ಭಾವ, ವಿಶಾಲ ಮನೋಭಾವ, ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿದ್ದರೆ ಸಶಕ್ತಗೊಂಡ ಮಹಿಳೆಯರನ್ನು ಒಪ್ಪಿಕೊಳ್ಳುವ ಮನಸ್ಸಿರುತ್ತದೆ. ಸ್ವಾರ್ಥ, ಸಂಕುಚಿತ ಮನಸ್ಸು, ಶ್ರೇಷ್ಠತೆಯ ಮನೋಭಾವ, ಸ್ತ್ರೀಯರನ್ನು ಕೀಳಾಗಿ ನೋಡುವ ದೃಷ್ಟಿಕೋನವಿರುವ ವ್ಯಕ್ತಿಗಳು ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಿದರೂ, ಸ್ವತಃ ಕೈಗೊಂಡರೂ ಸಶಕ್ತಗೊಂಡ ವ್ಯಕ್ತಿಯೊಂದಿಗೆ ಸಮಾನ ಅವಕಾಶ, ಸಂಪತ್ತು, ಅಧಿಕಾರವನ್ನು ನಿರಾಕರಿಸುವ ಮನಸ್ಸುಗಳು ಇರುತ್ತವೆ. ಕೆಲವೊಮ್ಮೆ ಬೇರೆ ಮಹಿಳೆಯರ ಸಮಾನತೆ ಹಕ್ಕುಗಳನ್ನು ಒಪ್ಪಿಕೊಳ್ಳಬಹುದು. ಏಕೆಂದರೆ ಅವರೊಂದಿಗೆ ನೇರ ಹತ್ತಿರದ ಸಂಬಂಧ ಸಂಪರ್ಕವಿರುವುದಿಲ್ಲ. ಆದರೆ ತಮ್ಮ ಮನೆಯ ಮಹಿಳೆಯರ ಸ್ವಾತಂತ್ರ್ಯ, ಹಕ್ಕು, ಸಮಾನತೆಗಳನ್ನು ಒಪ್ಪಿಕೊಂಡರೆ ಮನೆಗೆಲಸ, ಸಂಪತ್ತು ಅಧಿಕಾರವನ್ನು ಹಂಚಿಕೊಳ್ಳಬೇಕಾಗಿರುವುದರಿಂದ ಅವರ ಸಶಕ್ತೀಕರಣವನ್ನು ವಿರೋಧಿಸುತ್ತಾರೆ. ಉದಾಹರಣೆಗೆ ಸಶಕ್ತಗೊಂಡ ಹೆಣ್ಣುಮಗಳು ಮನೆಗೆಲಸವನ್ನು ಪುರುಷರು ಮಾಡಬೇಕು, ಆಸ್ತಿಯನ್ನು ಸಮಾನವಾಗಿ ಹಂಚಿಕೊಳ್ಳಬೇಕು, ಏನೇ ನಿರ್ಧಾರ ಕೈಗೊಳ್ಳುವಾಗ ಸ್ತ್ರೀಯರ ಅಭಿಪ್ರಾಯವನ್ನು ಪಡೆಯಬೇಕೆಂದು ನಿರೀಕ್ಷಿಸುತ್ತಾರೆ, ಇವೆಲ್ಲ ಆಗಬೇಕೆಂದು ಆಗ್ರಹಿಸುತ್ತಾರೆ. ಇದನ್ನು ನಿರೀಕ್ಷಿಸದ, ಒಪ್ಪಿಕೊಳ್ಳಲು ತಯಾರಿಲ್ಲದ ಪುರುಷರು ಮಹಿಳೆಯರ ಸಶಕ್ತತೆಯನ್ನು ಅಹಂಕಾರ, ದುರಭಿಮಾನ, ಸ್ವಾರ್ಥವೆಂದು ತಿಳಿಯುತ್ತಾರೆ. ಮಹಿಳೆಯರು ಪರಾವಲಂಬಿಗಳಾದಷ್ಟು, ಅಶಕ್ತರಾದಷ್ಟು ಪುರುಷರಿಗೆ ಲಾಭ. ಅವರು ಸಶಕ್ತರಾದಷ್ಟು ಪುರುಷರಿಗೆ ಅನನುಕೂಲ ಹಾಗಾಗಿ ಸಶಕ್ತೀಕರಣವನ್ನು ವಿರೋಧಿಸುತ್ತಾರೆ.

ಪಾಶ್ಚಿಮಾತ್ಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಮಹಿಳಾ ಸಶಕ್ತೀಕರಣವನ್ನು ನೋಡುವುದಾದರೆ ಪಾಶ್ಚಿಮಾತ್ಯ ಮಹಿಳೆಯರು ಸಶಕ್ತ ಮಹಿಳೆಯರೆಂದು ಬಿಂಬಿತವಾಗುತ್ತಾರೆ. ಸಶಕ್ತರಾಗಿ ಕಂಡರೂ ಹಿಂಸೆಯಿಂದ ಮುಕ್ತರಾಗಿಲ್ಲ. ವಿಚ್ಛೇದನಗಳು ಹೆಚ್ಚಾಗುತ್ತಿದ್ದು ಅದರಿಂದ ಉಂಟಾಗುವ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅನೇಕ ಕ್ಷೇತ್ರಗಳಲ್ಲಿ ತಾರತಮ್ಯ ಎದುರಿಸುತ್ತಿದ್ದರೆ. ಸ್ವತಂತ್ರ ವ್ಯಕ್ತಿತ್ವ, ಸಮಾನತೆ, ಹಕ್ಕುಗಳನ್ನು ಕೇಳುವ ಮಹಿಳೆಯರು ಕುಟುಂಬ ಮತ್ತು ಕುಟುಂಬದ ಹೊರಗೆ ದೌರ್ಜನ್ಯ ಅಥವಾ ನಿರ್ಲಕ್ಷ್ಯ ಧೋರಣೆಗಳಿಗೆ ಒಳಗಾಗುವ ಅಥವಾ ಸಮಾನ ಅವಕಾಶಗಳಿಂದ ವಂಚಿತರಾಗುವ ಸಾಧ್ಯತೆ ಹೆಚ್ಚು. ಮಕ್ಕಳ ಪೋಷಣೆ, ಮನೆಯ ಜವಾಬ್ದಾರಿಯನ್ನು ಸಮಾನವಾಗಿ ಹಂಚಿಕೊಳ್ಳಲು, ಮುಕ್ತ

ಒಡನಾಟ ಹೊಂದುವ, ಸಮಾನ ಆಸ್ತಿ ಹಕ್ಕನ್ನು ಕೇಳುವಾಗ ಮನೆಯಲ್ಲಿ ಘರ್ಷಣೆಗಳು ಉಂಟಾಗುತ್ತವೆ. ಹೊಂದಿಕೊಳ್ಳುವ, ರಾಜಿಯಾಗುವ ಪ್ರಯತ್ನ, ಗುಣ ಇಬ್ಬರ ಕಡೆಯಿಂದಲೂ ಬಂದಾಗ ಘರ್ಷಣೆ ನಿವಾರಣೆಯಾಗುತ್ತದೆ. ಆದರೆ ಸ್ವಾರ್ಥ, ಅಹಂ, ಅವಿವೇಕದ ನಿರ್ಧಾರ, ದುಡುಕು ಸ್ವಭಾವಗಳು ಹೊಂದಾಣಿಕೆಗೆ ಅವಕಾಶ ಮಾಡಿಕೊಡುವುದಿಲ್ಲ. ಆರ್ಥಿಕವಾಗಿ ಸ್ವಾವಲಂಬಿಯಾದ, ಧೈರ್ಯವಿರುವ ಮಹಿಳೆಯರು ಘರ್ಷಣೆ ಬೇಡವೆಂದು ಹೊರಬರುತ್ತಾರೆ. ಪಾಶ್ಚಿಮಾತ್ಯ ಸಮಾಜದಲ್ಲಿ ಮತ್ತೊಂದು ಮದುವೆಯಾಗಲು ಪುರುಷರಿಗಿರುವಷ್ಟೆ ಅವಕಾಶ ಮಹಿಳೆಯರಿಗೂ ಇರುವುದರಿಂದ ಅವರು ಪುನಃ ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಾರೆ. ಶಿಕ್ಷಣ, ಉದ್ಯೋಗಾವಕಾಶ, ಆರ್ಥಿಕ ಸ್ವಾವಲಂಬನೆ, ನಿರ್ಧಾರ ಕೈಗೊಳ್ಳುವ ಹಕ್ಕು ಹೊರಜಗತ್ತಿನ ಸಂಪರ್ಕ ಹೊಂದಿರುವ ಪಾಶ್ಚಿಮಾತ್ಯ ಮಹಿಳೆಯರು ಸಶಕ್ತರಂತೆ ತೋರಿಬರುತ್ತಾರೆ. ಅದರೆ ಇದರ ನಡುವೆಯೂ ಅತಂತ್ರ ಸ್ಥಿತಿ, ಮಕ್ಕಳ ಪೋಷಣೆಯು ಜವಾಬ್ದಾರಿ, ಒಂಟಿತನ, ಹಿಂಸೆಗಳನ್ನು ಎದುರಿಸಬೇಕಾಗಬಹುದು. ಈ ಒಂದು ಪರಿಸ್ಥಿತಿಯನ್ನು ಭಾರತದ ದೃಷ್ಟಿಕೋನದಿಂದ ನೋಡಿದರೆ ಪಾಶ್ಚಿಮಾತ್ಯ ಮಹಿಳೆಯರು ಸ್ವಾರ್ಥಿಗಳು, ಅಹಂಕಾರಿಗಳು, ಕುಟುಂಬದ ಬಗ್ಗೆ ಕಾಳಜಿಯಿಲ್ಲದವರು, ಮಹತ್ವಾಕಾಂಕ್ಷಿಗಳು, ಜಗಳಗಂಟಿಯರು ಎಂದು ಕಂಡುಬರುತ್ತಾರೆ. ಮತ್ತೊಂದು ಮದುವೆಯನ್ನು ಭಾರತೀಯ ಸಂಸ್ಕೃತಿ ಒಪ್ಪಿಕೊಳ್ಳುವುದಿಲ್ಲ. ಅದೇನೆ ಕಷ್ಟವಾಗಲಿ ಹೆಣ್ಣು ಕುಟುಂಬದಲ್ಲಿ ಹೊಂದಾಣಿಕೆ ಮಾಡಿಕೊಂಡು ಗಂಡ, ಮಕ್ಕಳು, ಅತ್ತೆ, ಮಾವ, ತಂದೆ, ತಾಯಿಗೆ ಅನುಕೂಲವಾಗುವಂತೆ ನಡೆದುಕೊಳ್ಳಬೇಕೆಂದು ಅದು ನಿರೀಕ್ಷಿಸುತ್ತದೆ. ಪರ್ಯಾಯ ವ್ಯವಸ್ಥೆಯಿಲ್ಲದ ಭಾರತದ ಮಹಿಳೆ ಕೌಟುಂಬಿಕ ವ್ಯವಸ್ಥೆಗೆ ಹೊಂದಿಕೊಂಡು ಸುಧಾರಿಸಿಕೊಳ್ಳಬೇಕು. ಕೋಟ್ಯಂತರ ಮಹಿಳೆಯರು ಹಾಗೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಪ್ರತಿಕೂಲ ಪರಿಸ್ಥಿತಿಯಿಂದ ಆಚೆ ಬಂದು ಸ್ವತಂತ್ರವಾಗಿ ತನ್ನಿಚ್ಛೆಯಂತೆ ಬದುಕುವ ಪಾಶ್ಚಿಮಾತ್ಯ ಮಹಿಳೆ ಸಶಕ್ತಳೆನ್ನಬೇಕೋ, ಎಂತಹ ಸಂದಿಗ್ಧ, ಸಂಕಟ ಪರಿಸ್ಥಿತಿಯಲ್ಲೂ ಕುಟುಂಬವನ್ನು ಬಿಟ್ಟುಹೋಗದೆ ಅಲ್ಲೆ ಇದ್ದು ಎಲ್ಲರಿಗೂ ಒಪ್ಪಿಗೆಯಾಗುವಂತೆ ಅಥವಾ ಒಪ್ಪಿಗೆಯಾಗದಂತೆ ಬದುಕುವ ಸ್ತ್ರೀಯನ್ನು ಸಶಕ್ತಳೆನ್ನಬೇಕೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪಾಶ್ಚಿಮಾತ್ಯ ಮಹಿಳೆ ಭಾರತದ ಮಹಿಳೆಯರಿಗೆ ಮಾದರಿಯಾಗಬೇಕೇ? ಅಥವಾ ಭಾರತದ ಮಹಿಳೆ ಪಾಶ್ಚಿಮಾತ್ಯ ಮಹಿಳೆಯರಿಗೆ ಮಾದರಿಯಾಗಬೇಕೇ? ಬಹುಶಃ ಇವರಿಬ್ಬರ ನಡುವಿನ ಸುವರ್ಣ ಮಾಧ್ಯಮ ಮಾದರಿಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಸ್ವಾರ್ಥ, ಸ್ವಾತಂತ್ರ್ಯ, ಅಹಂ ಇಟ್ಟುಕೊಂಡು ಪರ್ಯಾಯ ವ್ಯವಸ್ಥೆಯನ್ನು ಹುಡುಕಿಕೊಂಡು ಹೋಗುವುದು

ಸಶಕ್ತೀಕರಣವಲ್ಲ. ನಿಸ್ವಾರ್ಥ, ತ್ಯಾಗ, ಪ್ರೀತಿ ಎಂದು ಹೇಳುತ್ತಾ ಆತ್ಮಬಲಿಕೊಟ್ಟುಕೊಂಡು ಸಮಾಜಕ್ಕೆ ಆದರ್ಶ ಮಹಿಳೆ ಎಂದು ಬಿಂಬಿಸಿಕೊಳ್ಳುವುದು ಸಶಕ್ತೀಕರಣವಲ್ಲ. ಒಬ್ಬ ಮಹಿಳೆ ತನ್ನ ಸ್ವಾತಂತ್ರ್ಯ, ಹಕ್ಕು, ತನ್ನತನವನ್ನು ಬಿಟ್ಟುಕೊಡದೆ, ಶೋಷಣೆ ತುಳಿತಕ್ಕೆ ಬಲಿಯಾಗದೆ ಪ್ರೀತಿ, ವಿಶ್ವಾಸ, ನಿಸ್ವಾರ್ಥ, ತ್ಯಾಗದ ಮೂಲಕ ತನ್ನ ಸುತ್ತಮುತ್ತಲಿನವರಿಗೆ ಪೂರಕವಾಗಿ ಬದುಕುವ ಮಹಿಳೆ ಸಶಕ್ತ ಮಹಿಳೆ ಎನಿಸಿಕೊಳ್ಳುತ್ತಾಳೆ.

ಸಶಕ್ತೀಕರಣವೆನ್ನುವುದು ಸಾಪೇಕ್ಷ ಪರಿಕಲ್ಪನೆ, ಪರಮವಲ್ಲ. ವ್ಯಕ್ತಿ ವ್ಯಕ್ತಿಗಳ ನಡುವೆ ಸಶಕ್ತತೆಯ ಸ್ವರೂಪ ಭಿನ್ನವಾಗಿರುತ್ತದೆ. ಒಬ್ಬ ವ್ಯಕ್ತಿಯಲ್ಲಿ ವಿವಿಧ ಹಂತ, ಸಂದರ್ಭ, ಘಟನೆಗಳಲ್ಲಿ ಸಶಕ್ತತೆಯು ಭಿನ್ನವಾಗಿ ಕಾಣಿಸಿಕೊಳ್ಳುತ್ತದೆ. ಸ್ತ್ರೀ–ಪುರುಷರ ಸಶಕ್ತೀಕರಣವು ಅನೇಕ ವಿಷಯಗಳಲ್ಲಿ ಏಕರೂಪವಾಗಿದ್ದರೂ ನಮ್ಮ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಹಾಗು ಜಂಡರ್ ಅಂಶಗಳು ಅವರ ಸಶಕ್ತೀಕರಣವನ್ನು ಭಿನ್ನವಾಗಿಸುತ್ತವೆ. ಸ್ತ್ರೀಗಿರುವ ಸಂತಾನೋತ್ಪತ್ತಿ ಶಕ್ತಿಯಲ್ಲಿ ಅವಳ ಪರಾವಲಂಬನೆ, ಅಧೀನತೆಗೆ ಕಾರಣವಾಗಿಸುತ್ತದೆ. ಅದರ ಮೂಲಕ ಅವಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ. ಅವಳನ್ನು ಕುಟುಂಬಕ್ಕೆ ಸೀಮಿತಗೊಳಿಸಿ ಕೌಶಲ್ಯ, ಪ್ರತಿಭೆಗಳನ್ನು ಮುರುಟಿ ಹಾಕುತ್ತದೆ.

ಮಹಿಳೆಯು ತನ್ನ ಜೀವನದ ವಿವಿಧ ಹಂತಗಳಲ್ಲಿ ಸಶಕ್ತತೆ/ಅಶಕ್ತತೆಯ ಪ್ರತೀಕವಾಗಿರುತ್ತಾಳೆ. ಆಕೆ ಬಾಲ್ಯ, ಯೌವ್ವನದಲ್ಲಿ ಸಶಕ್ತೀಕರಣಗೊಳ್ಳುವ ಹಂತದಲ್ಲಿದ್ದರೆ ಮಧ್ಯ ವಯಸ್ಸಿನ ಹೊತ್ತಿಗೆ ಸಶಕ್ತಳಾಗಿ ಹೊರಹೊಮ್ಮುತ್ತಾಳೆ. ಸಶಕ್ತಳಾಗಿ ರೂಪುಗೊಳ್ಳುವ ಹೊತ್ತಿನಲ್ಲಿ ಬೇರೆ ಬೇರೆ ಕಾರಣಗಳಿಂದ ಅಶಕ್ತಳಾದರೆ/ ಅಶಕ್ತಳನ್ನಾಗಿಸಿದರೆ ಅವಳು ಅದರಿಂದ ಹೊರಬಂದು ಸಶಕ್ತಳಾಗಿ ನಿಲ್ಲುವುದು ದೊಡ್ಡ ಸವಾಲೇ ಸರಿ. ಏಕೆಂದರೆ ಇಲ್ಲಿ ಅಡ್ಡಿಗಳು ಹೆಚ್ಚು. ಅವಳನ್ನು ಅಶಕ್ತಳನ್ನಾಗಿಸುವ ಪ್ರಯತ್ನ, ಆಕ್ರಮಣಗಳು ನಿರಂತರವಾಗಿ ನಡೆಯುತ್ತಿರುತ್ತವೆ.

ಮಹಿಳಾ ಸಶಕ್ತೀಕರಣಕ್ಕೆ ಅಡ್ಡಿ ಮೊದಲಿಗೆ ವ್ಯವಸ್ಥೆ ಹಾಗು ಪುರುಷರಿಂದ ಬರುತ್ತದೆ. ಕುಟುಂಬ, ವಿವಾಹ, ಕಾನೂನು, ಧರ್ಮ, ಆರ್ಥಿಕ ಪರಿಸ್ಥಿತಿಗಳು ಮಹಿಳೆಯರು ಸಶಕ್ತಗೊಳ್ಳಲು ಅಡ್ಡಿಯನ್ನು ಒಡ್ಡುತ್ತವೆ. ಉದಾಹರಣೆಗೆ ಮಹಿಳೆ ಹೊರಗೆ ದುಡಿದು ಆರ್ಥಿಕವಾಗಿ ಸ್ವತಂತ್ರಳಾಗಬೇಕಾದರೆ ಕುಟುಂಬದ ಜವಾಬ್ದಾರಿಯನ್ನು ಬಿಡುವಂತಿಲ್ಲ. ಎರಡನ್ನೂ ನಿಭಾಯಿಸಿಕೊಳ್ಳುವ 'ಸೂಪರ್ ವಿಮೆನ್' ಆದರೆ ಮಾತ್ರ ಹೊರಗೆ ದುಡಿಯಲು ಅವಕಾಶ. ಮನೆಯಲ್ಲಿ ಆಸ್ತಿಯಲ್ಲಿ ಸಮಪಾಲು ಕೇಳಿದರೆ ಸ್ವಾರ್ಥ, ಅಣ್ಣತಮ್ಮಂದಿರ ಬಗ್ಗೆ ಪ್ರೀತಿಯಿಲ್ಲ ಎಂದು

ದೂಷಿಸಲಾಗುತ್ತದೆ. ಸಾಮಾಜೀಕರಣದ ಮೂಲಕ ಒಬ್ಬ ವ್ಯಕ್ತಿಗಿರಬೇಕಾದ ಎಲ್ಲಾ ಗುಣಗಳನ್ನು ಮಹಿಳೆಯಿಂದ ನಿರೀಕ್ಷಿಸುತ್ತಾ ಅವು ಅವಳಲ್ಲಿ ಕಂಡುಬರದೆ ಮಾನವ ಸಹಜ ಗುಣಗಳನ್ನು ವ್ಯಕ್ತಪಡಿಸಿದರೆ ಅವಳನ್ನು ಕೆಟ್ಟವ್ಯಕ್ತಿಯನ್ನಾಗಿ ನೋಡಲಾಗುತ್ತದೆ. ಸಹನೆ, ತಾಳ್ಮೆ, ತ್ಯಾಗ, ವಿಶಾಲ ಮನೋಭಾವ, ಮುಂತಾದ ಒಳ್ಳೆಯ ಗುಣಗಳು ಅತಿಯಾದ ಹೇರಿಕೆಯಾಗಿ ಕೆಲವೊಮ್ಮೆ ಮಹಿಳೆಯರನ್ನು ಅಶಕ್ತರನ್ನಾಗಿಸುತ್ತವೆ. ಉದಾ: ಗಂಡ ಎಷ್ಟೆ ಹಿಂಸೆ ಮಾಡಿದರೂ, ಹೊಡೆಯುವುದು ಅವನ ಹಕ್ಕು. ತಾನು ತಪ್ಪು ಮಾಡಿದರೆ ತಿದ್ದುವುದು ಅವನ ಕರ್ತವ್ಯ ಎಂದು ಭಾವಿಸಿ ತನ್ನ ಮಾನವ ಹಕ್ಕಿನ ಉಲ್ಲಂಘನೆಯಾಗುತ್ತಿರುವುದನ್ನು ಗಮನಿಸಿಕೊಳ್ಳುವುದಿಲ್ಲ. ಸುತ್ತಮುತ್ತಲಿನವರು ಗಂಡನ ಹಿಂಸೆಯನ್ನು ಸಹಿಸಿಕೊಳ್ಳುವ ಮಹಿಳೆಯನ್ನು ಸೀತೆ, ಸಾವಿತ್ರಿಯಂಥ ಆದರ್ಶ ಮಹಿಳೆಯೆಂದು ಗುರುತಿಸುತ್ತಾರೆ. ಸಹಿಸಿಕೊಳ್ಳದಿದ್ದರೆ ಒಳ್ಳೆ ಹೆಂಗಸಲ್ಲ, ಬಜಾರಿ, ಗಟವಾಣಿ ಹೆಣ್ಣು ಎಂದು ಅಲ್ಲಗಳೆಯುತ್ತಾರೆ. ಅಲ್ಲದೆ ಹೆಣ್ಣಿನ ಗಂಡನ ಹಿಂಸೆಯಿಂದ ಆಚೆ ಬರಲು ಪರ್ಯಾಯ ವ್ಯವಸ್ಥೆಯು ಇರುವುದಿಲ್ಲ. ಒಂದು ವೇಳೆ ತಂದೆ, ತಾಯಿ, ಮನೆ, ಕೆಲಸ, ಸ್ನೇಹಿತರ ಸಹಾಯಗಳಂತಹ ಪರ್ಯಾಯ ವ್ಯವಸ್ಥೆಯನ್ನು ಹುಡುಕಿಕೊಂಡರೂ ಅವೂ ಶಾಶ್ವತವಾಗಿ ಅಥವಾ ಸುರಕ್ಷಿತವಾಗಿರುತ್ತವೆ ಎಂದು ಹೇಳಲು ಬರುವುದಿಲ್ಲ. ಹೀಗೆ ಮಹಿಳೆಯರನ್ನು ಅಶಕ್ತರನ್ನಾಗಿಸುವ ಸಂಗತಿ, ಕ್ರಿಯೆ, ಘಟನೆ, ಪರಿಸ್ಥಿತಿಗಳು ನೂರಾರಿದ್ದರೆ ಸಶಕ್ತಗೊಳಿಸುವ ಹಾದಿಗಳು ಕೆಲವು ಮಾತ್ರ.

ಮಹಿಳಾ ಸಶಕ್ತೀಕರಣವು ಸ್ವಾತಂತ್ರ್ಯ, ಹಕ್ಕು ಮತ್ತು ಸಮಾನತೆಗಳ ತತ್ವಗಳನ್ನು ಆಧರಿಸಿದೆ. ಇವುಗಳನ್ನು ಪಡೆಯುವುದು, ಉಳಿಸಿಕೊಳ್ಳುವುದು ಸುಲಭದ ಕಾರ್ಯವಲ್ಲ. ಸ್ವಾತಂತ್ರ್ಯದೊಂದಿಗೆ ಜವಾಬ್ದಾರಿ, ಹಕ್ಕಿನೊಂದಿಗೆ ಕರ್ತವ್ಯ ಹಾಗು ಸಮಾನತೆಯೊಂದಿಗೆ ಅರ್ಹತೆ ಜೊತೆಗೂಡಿ ಬರುತ್ತದೆ. ನಮ್ಮ ಜೀವನವು ಇತರರೊಂದಿಗೆ ತಳಕು ಹಾಕಿಕೊಂಡಿರುತ್ತದೆ. ಅಂದರೆ ನಾವು ಇತರರನ್ನು ಅವಲಂಬಿಸಿರುತ್ತೇವೆ ಅಥವಾ ಇತರರು ನಮ್ಮನ್ನು ಅವಲಂಬಿಸಿರುತ್ತಾರೆ. ಆಗ ನಾವು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಲು ಸಾಧ್ಯವಿಲ್ಲ. ಸ್ವಕೇಂದ್ರಿತ ವ್ಯಕ್ತಿಗಳಾದರೆ ಮಾತ್ರ ಸ್ವಾತಂತ್ರ್ಯ ಅನುಭವಿಸಲು ಸಾಧ್ಯ. ನಾವು ಹೊರುವ ಜವಾಬ್ದಾರಿ ನಮ್ಮ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ.

ಸ್ವಾತಂತ್ರ್ಯವು ಜಂಡರ್, ಕೌಟುಂಬಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಆಯಾಮಗಳನ್ನು ಹೊಂದಿದೆ. ಆರ್ಥಿಕ ಕಾರಣಗಳಿಂದಾಗಿ ಅವಲಂಬಿತರಾಗಿರುವಾಗ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲಾಗುವುದಿಲ್ಲ. ಒಬ್ಬ ವ್ಯಕ್ತಿಯ ಸ್ವಾತಂತ್ರ್ಯ ಮತ್ತೊಬ್ಬರ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಬಹುದು. ಜಂಡರನ್ನು ಆಧರಿಸಿ ಹೇಳುವುದಾದರೆ ಸ್ತ್ರೀಯು ಸ್ವತಂತ್ರಳಾಗಬೇಕೆಂದರೆ ಮನೆಗೆಲಸ, ಕುಟುಂಬದ ಜವಾಬ್ದಾರಿಯಿಂದ

ಮುಕ್ತಿ ಪಡೆಯಬೇಕು. ಅವಳು ಅದರಿಂದ ಹೊರ ಬಂದರೆ ಅವುಗಳನ್ನು ನಿರ್ವಹಿಸುವವರು ಯಾರು? ಪುರುಷ ಮಾಡಬೇಕು. ಪುರುಷ ಆ ಜವಾಬ್ದಾರಿ ತೆಗೆದುಕೊಂಡು ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಇಚ್ಛಿಸದೆ ಅವೆಲ್ಲವನ್ನು ಸ್ತ್ರೀಯ ಮೇಲೆ ಹೇರಲು ಪ್ರಯತ್ನಿಸುತ್ತಾನೆ. ಅವಳನ್ನು ಪರಾವಲಂಬಿ, ಅಧೀನಳನ್ನಾಗಿಸಿಕೊಂಡು ಅವಳ ಚಲನೆಗಳ ಮೇಲೆ ನಿರ್ಬಂಧ ಹೇರಿ ಅಶಕ್ತಳನ್ನಾಗಿಸಲು ನಿರಂತರ ಪ್ರಯತ್ನಿಸುತ್ತಿರುತ್ತಾನೆ.

ಹಕ್ಕು ಕೂಡ ಸ್ವಾಭಾವಿಕವಾಗಿ ಮಾನವ ಹಕ್ಕುಗಳ ಮೂಲಕ ಸ್ತ್ರೀ–ಪುರುಷರಿಗೆ ಸಮಾನವಾಗಿ ದೊರಕಿರುವಂತದ್ದು. ಆದರೆ ವಾಸ್ತವದಲ್ಲಿ ಪುರುಷರ ಹಕ್ಕುಗಳು ರಕ್ಷಣೆಯಾಗಿ ಸ್ತ್ರೀಯರ ಹಕ್ಕುಗಳು ಉಲ್ಲಂಘನೆಯಾಗುತ್ತವೆ. ಮಹಿಳೆಯರು ಹಕ್ಕು ಬೇಕು ಅದನ್ನು ಚಲಾಯಿಸುತ್ತೇವೆ ಎಂದರೆ ಪುರುಷರ ಅಹಂಗೆ ಧಕ್ಕೆಯಾಗುತ್ತದೆ. ಒಪ್ಪಿಕೊಂಡರೆ ಮಹಿಳೆಯರನ್ನು ಸಮಾನವಾಗಿ ನೋಡಬೇಕಾಗುತ್ತದೆ. ಅಲ್ಲದೆ ಸವಲತ್ತುಗಳನ್ನು ಹಂಚಿಕೊಳ್ಳಬೇಕಾಗುತ್ತದೆ. ಇದನ್ನು ಒಪ್ಪಿಕೊಳ್ಳದ ಪುರುಷರು ಮಹಿಳೆಯರಿಗೆ ಹಕ್ಕುಗಳನ್ನು ನಿರಾಕರಿಸುವುದು ಅಥವಾ ಉಲ್ಲಂಘಿಸುವುದರ ಮೂಲಕ ಅವರನ್ನು ಅಶಕ್ತಗೊಳಿಸುತ್ತಾರೆ. ಹುಟ್ಟುವ, ಬದುಕುವ ಹಕ್ಕನ್ನು ಕಿತ್ತುಕೊಳ್ಳುತ್ತಾರೆ. (ಭ್ರೂಣಹತ್ಯೆ, ಶಿಶುಹತ್ಯೆ) ಸಾಕ್ಷರತೆ, ಶಿಕ್ಷಣದ ನಿರಾಕರಣೆಗಳ ಮೂಲಕ ಜ್ಞಾನದ ಹಕ್ಕು, ಉದ್ಯೋಗ ನಿರಾಕರಣೆಗಳ ಮೂಲಕ ಆರ್ಥಿಕ ಸ್ವಾತಂತ್ರ್ಯದ ಹಕ್ಕನ್ನು, ರಾಜಕೀಯ ಕ್ಷೇತ್ರದಿಂದ ಹೊರಗಿಟ್ಟು ನಿರ್ಧಾರ ಕೈಗೊಳ್ಳುವ ಹಕ್ಕನ್ನು, ದೌರ್ಜನ್ಯ ಎಸಗುವುದರ ಮೂಲಕ ಘನತೆಯಿಂದ ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತಾರೆ.

ಇಷ್ಟೇ ಅಲ್ಲದೆ ಈ ಮೂರು ತತ್ವಗಳು ಮಾನಸಿಕ ನೆಲೆಯನ್ನು ಹೊಂದಿವೆ. ಅಂದರೆ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯ, ಸಮಾನತೆ ಮತ್ತು ಹಕ್ಕುಗಳು, ಎದುರಿನ ವ್ಯಕ್ತಿಯ ಮನೋಭಾವ, ಮಾನಸಿಕ ಸ್ಥಿತಿ, ವ್ಯಕ್ತಿತ್ವ, ಗುಣಾವಗುಣಗಳನ್ನು ಅವಲಂಬಿಸಿರುತ್ತದೆ. ಸ್ತ್ರೀಯ ಸ್ವಾತಂತ್ರ್ಯ, ಹಕ್ಕು, ಸಮಾನತೆಗಳು ಪುರುಷರ ಈ ಎಲ್ಲಾ ಅಂಶಗಳನ್ನು ಅವಲಂಬಿಸಿರುತ್ತದೆ. ಹೀಗಾಗಿ ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯು ಸರಳವಾಗಿ ಕೈಗೂಡುವಂತಹದಲ್ಲ. ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆಯಾಗಿರುವ ಸ್ಥಿತಿ, ವ್ಯವಸ್ಥೆಯಾಗಿದೆ. ಇದನ್ನು ಸೂಕ್ಷ್ಮವಾಗಿ ನಿಭಾಯಿಸಬೇಕಾಗಿದೆ. ಮಹಿಳೆಯರಲ್ಲಿನ ಆಂತರಿಕ ತುಡಿತ ಹಾಗು ಹೊರಗಿನ ಮಧ್ಯಪ್ರವೇಶ ಎರಡು ಕೂಡಿ ಸಶಕ್ತೀಕರಣ ಪ್ರಕ್ರಿಯೆಯನ್ನು ಮುನ್ನಡೆಸಬೇಕು. ಮಹಿಳೆಯರನ್ನು ಸಶಕ್ತಗೊಳಿಸಿದಾಕ್ಷಣ ಎಲ್ಲವೂ ಸರಿಹೋಗುವುದಿಲ್ಲ. ಮಹಿಳೆಯರ ಸಮಸ್ಯೆಗಳೆಲ್ಲ ಪರಿಹಾರವಾಗುವುದಿಲ್ಲ. ಅದು ಮತ್ತಷ್ಟು ಸಮಸ್ಯೆ, ಸಂಕೀರ್ಣ

ಪರಿಸ್ಥಿತಿಯನ್ನು ತಂದೊಡ್ಡಬಹುದು. ಅವುಗಳನ್ನು ನಿವಾರಿಸಿಕೊಂಡು ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯನ್ನು ನಿರಂತರವಾಗಿ ನಡೆಸಿಕೊಂಡು ಹೋಗಬೇಕಾಗಿದೆ.

ಕಾಯಿದೆಗಳ ಸವಲತ್ತಿದ್ದರೂ, ಆದರ್ಶ ಸ್ತ್ರೀಯ ಗುಣಾರೋಪ ಮಾಡಿ ಆಕೆಗಿರುವ ಹಣ ಸಂಪತ್ತನ್ನು ಹೊಂದುವ ಹಕ್ಕನ್ನು ಕಡೆಗಣಿಸುತ್ತಾರೆ. ಸಾಮಾಜಿಕ ಕಟ್ಟುಪಾಡು, ನಂಬಿಕೆ ಆಚರಣೆಗಳ ಮೂಲಕ ಮುಕ್ತಚಲನೆ, ಮೂಲಭೂತ ಆವಶ್ಯಕತೆಗಳನ್ನು ಮತ್ತು ವ್ಯಕ್ತಿಗತ ಹಕ್ಕನ್ನು ನಿರಾಕರಿಸಲಾಗುತ್ತದೆ.

ಸಮಾನತೆಯ ಪರಿಕಲ್ಪನೆ ಉದಾರವಾದ ಮತ್ತು ಪ್ರಜಾಪ್ರಭುತ್ವದಡಿಯಲ್ಲಿ ತಾತ್ವಿಕವಾಗಿ ಜಾರಿಯಲ್ಲಿದ್ದರೂ ಪ್ರಾಯೋಗಿಕವಾಗಿ ಜಾರಿಗೆ ತರುವುದು ಕಷ್ಟಸಾಧ್ಯ. ಸಮಾನತೆಯು ಸಾಪೇಕ್ಷವಾದ, ಅಮೂರ್ತವಾದ ಪರಿಕಲ್ಪನೆಯಾಗಿದ್ದು ವ್ಯಕ್ತಿಗತವಾಗಿ, ಸಾಮುದಾಯಿಕವಾಗಿ ಅನುಷ್ಠಾನಕ್ಕೆ ತರುವುದು ಕಷ್ಟಸಾಧ್ಯ. ವಿವಿಧ ಗುಂಪುಗಳಾಗಿ ಹಂಚಿಹೋಗಿರುವ ಮಾನವರು ಅಹಂ, ಪ್ರತಿಷ್ಠೆ, ಶ್ರೇಷ್ಠತೆ, ಸ್ಥಾನ, ಅಧಿಕಾರ, ಸಂಪತ್ತಿನ ಕಾರಣವಾಗಿ ಆಳುವ, ಆಳಿಸಿಕೊಳ್ಳುವ ವರ್ಗಗಳಾಗಿ ರೂಪುಗೊಂಡಿದ್ದಾರೆ. ಈಗಲೂ ಇವರ ನಡುವೆ ಸಮಾನತೆ ತರುವುದು ದೊಡ್ಡ ಸವಾಲು. ಜಂಡರ್, ವರ್ಗ, ಜಾತಿ, ಧರ್ಮ, ಪ್ರದೇಶ, ಜನಾಂಗಗಳ ಭೇದದಲ್ಲಿ ಅಸಮಾನತೆ ಉಂಟಾಗಿರುತ್ತದೆ. ಮಹಿಳೆಯರು ಇತರ ಅಸಮಾನತೆಗಳ ಜೊತೆಗೆ ಜಂಡರ್ ಅಸಮಾನತೆಯನ್ನೂ ಎದುರಿಸಬೇಕಾಗುತ್ತದೆ. ಅಸಮಾನತೆಯನ್ನು ಉಳಿಸಿ ಬೆಳೆಸುವುದರಿಂದ ಪುರುಷರಿಗೆ ಅನುಕೂಲ ಹೆಚ್ಚು. ಅಸಮಾನತೆಯನ್ನು ಹೋಗಲಾಡಿಸಿದರೆ ಸ್ತ್ರೀಯರಿಗೆ ಅನುಕೂಲವಾಗಿ ಪುರುಷರು ಅವಕಾಶ, ಸವಲತ್ತುಗಳನ್ನು ಬಿಟ್ಟುಕೊಡಬೇಕಾಗುತ್ತದೆ, ಬಿಟ್ಟುಕೊಡಬೇಕಾಗುತ್ತದೆ ಎನ್ನುವುದಕ್ಕಿಂತ ಹಂಚಿಕೊಳ್ಳಬೇಕಾಗುತ್ತದೆ. ಆದುದರಿಂದ ಪುರುಷರು ಅಸಮಾನತೆಯನ್ನು ಸಮರ್ಥಿಸುತ್ತಾರೆ, ಬೆಂಬಲಿಸುತ್ತಾರೆ. ಜಂಡರ್ ಅಸಮಾನತೆಯನ್ನು ಸಮರ್ಥಿಸಿಕೊಳ್ಳುವುದಕ್ಕೆ ಜೈವಿಕ ಅಂಶಗಳನ್ನು ಆಧಾರವಾಗಿಟ್ಟುಕೊಳ್ಳುತ್ತಾರೆ. ಜೈವಿಕ ಅಂಶಗಳು ವ್ಯತ್ಯಾಸಗಳನ್ನು ಹೇಳುತ್ತವೆಯೇ ಹೊರತು ಅಸಮಾನತೆಯನ್ನು ತೋರುವುದಿಲ್ಲ. ಜಂಡರ್ ಅಂಶಗಳನ್ನು ಇಟ್ಟುಕೊಂಡು ಅಸಮಾನತೆಯನ್ನು ಪ್ರಚುರಪಡಿಸಲಾಗುತ್ತಿದೆ. ಅಸಮಾನತೆಯನ್ನಿಟ್ಟುಕೊಂಡು ಮಹಿಳೆಯರನ್ನು ಅಶಕ್ತರನ್ನಾಗಿಸಲಾಗುತ್ತಿದೆ. ಇದನ್ನು ಹೋಗಲಾಡಿಸುವುದೇ ಮಹಿಳಾ ಸಶಕ್ತೀಕರಣ.

❑